ಅಧ್ಯಕ್ಷರು : ಈಗ ಮೃತರ ಗೌರವಾರ್ಥ ಸದನದಲ್ಲಿ ಮಾನ್ಯ ಸದಸ್ಯರೆಲ್ಲಾ ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಈ ಹಂತದಲ್ಲಿ ಸದನದ ಮಾನ್ಯ ಸದಸ್ಯರುಗಳು ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನು ಆಚರಿಸಿದರು.)

3. ನಿಯಮ 69ರ ಮೇರೆಗೆ ನಡೆದ ಚರ್ಚೆಗೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ.

ವಿಷಯ: ಬೆಂಗಳೂರು-ಮೈಸೂರು ಇನ್‌ಫ್ರಾಸ್ಟಕ್ಚರ್ ಕಾರಿಡಾರ್ ಯೋಜನೆಯ ಬಗ್ಗೆ. (ಮುಂದುವರಿದ ಚರ್ಚೆ)

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಸನ್ಮಾನ್ಯ ಅಧ್ಯಕ್ಷರೇ, ಈಗ ಮುಂದುವರೆದ ಮೈತ್ರೇಯಿ ಸರ್ಕಾರಗಳ ಅಂದರೆ ಕರ್ನಾಟಕ ರಾಜ್ಯದಲ್ಲಿ ಕೊಯಲಿಷನ್ ಗವರ್ನ್‌ಮೆಂಟ್‌ಗಳ ಎರಾ ಪ್ರಾರಂಭವಾಯಿತು; ಮೊದಲನೇ ಬಾರಿಗೆ ಹಿಂದೆ ಒಂದು ಸಲ ಒಂದು ಸಣ್ಣಮಟ್ಟದಲ್ಲಿ ಆಗಿತ್ತು; ಆದರೆ ಇಲ್ಲಿಯವರೆಗೆ ತಂದಂಥ ಏನು ಘಟನೆಗಳಿವೆ, ಈ ಘಟನೆಗಳ ನಂತರ, ಈ ವಿರಾಮದ ನಂತರ ಹೊಸ ಸರ್ಕಾರಗಳ ವಿಷಯಗಳೇನಿವೆ, ಬೆಳಿಗ್ಗೆ ಸನ್ಮಾನ್ಯ ಹಿರಿಯ ಸದಸ್ಯರಾದಂಥ ಶ್ರೀ ಮಲ್ಲಿಕಾರ್ಜುನ್ ಖರ್ಗೆಯವರು ಕೆಲವು ವಿಷಯಗಳನ್ನು ಪ್ರಸ್ತಾಪಿಸಿದರು, ಸನ್ಮಾನ್ಯ ಹಿರಿಯ ಸದಸ್ಯರು ಹಾಗೂ ವಿರೋಧ ಪಕ್ಷದ ನಾಯಕರಾಗಿರುವಂಥ ಶ್ರೀ ಧರಂಸಿಂಗ್‌ರವರು ಮುಖ್ಯಮಂತ್ರಿಗಳಾದರು.

ಹೊಸ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದಾಗ, ನೀವೂ ಅವರ ಜೊತೆ ಮೈತ್ರಿ ಸರ್ಕಾರದಲ್ಲಿದ್ದಿರಿ. ಏತಕ್ಕೆ ಈ ವಿಷಯದಲ್ಲಿ ಅಂತಿಮದಲ್ಲಿ ಅಂತಿಮವಾದ ನಿರ್ಣಯವನ್ನು ತೆಗೆದುಕೊಳ್ಳಲಿಕ್ಕಾಗಲಿಲ್ಲ. ಈ ವಿಷಯಗಳನ್ನು ಏನು ಪ್ರಸ್ತಾಪ ಮಾಡಿದರು, ಆ ವಿಷಯಕ್ಕೆ ನಾನು ಈಗ ಬರುತ್ತೇನೆ. ಕಳೆದ ಚುನಾವಣೆಯ ಸಂದರ್ಭದಲ್ಲಿ ಈ ವಿಷಯದ ಬಗ್ಗೆ ನಮ್ಮ ಪಕ್ಷ ಮತದಾರರ ಮುಂದೆ ಈ ಕೆಲವು ಭೂಹಗರಣಗಳ ಬಗ್ಗೆ ಚರ್ಚೆಯನ್ನು ಇಟ್ಟಿದ್ದೇವು, ಆ ಸಂದರ್ಭದಲ್ಲಿ ನಮ್ಮ ಪಕ್ಷದ ನಾಯಕರುಗಳು ಹಲವಾರು ರೀತಿಯ ಮಾತುಗಳನ್ನಾಡಿದ್ದಾರೆ. ಅವುಗಳನ್ನು ನೆನಪಿಸಿಕೊಳ್ಳುವುದಕ್ಕೆ ಬಯಸುತ್ತೇನೆ. ನಮ್ಮ ಪಕ್ಷ ಅಧಿಕಾರಕ್ಕೆ ಬಂದರೆ, ಈ ಭೂ ಹಗರಣಕ್ಕೆ ಸಂಬಂಧಪಟ್ಟವರನ್ನು ಜೈಲಿಗೆ ಕಳುಹಿಸುತ್ತೇವೆಂಬ ಮಾತನ್ನು ಏನು ಸಾರ್ವಜನಿಕವಾಗಿ ಮಾತನಾಡಿದ್ದಾರೆ, ಹಾಗೆ ಜೈಲಿಗೆ ಕಳುಹಿಸುತ್ತೇವೆಂದು

ಹೇಳಿದಂಥವರು ಎಲ್ಲೆಲ್ಲಿ ಹೋಗುತ್ತಾರೆ ಎನ್ನುವುದನ್ನು ಮುಂದಿನ ದಿನಗಳಲ್ಲಿ ನೋಡುತ್ತೇವೆ. ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಅದನ್ನು ಸ್ವಲ್ಪ ಬದಿಗೆ ಇಡುತ್ತೇನೆ. ನಾವು ಇವತ್ತು ಬಿ.ಜೆ.ಪಿ ಮಿತ್ರಪಕ್ಷದ ಜೊತೆ ಸರ್ಕಾರವನ್ನು ರಚನೆ ಮಾಡಿದ್ದೇವೆ. ಇಲ್ಲಿ ನಾನು ಕೆಲವು ವಿಷಯಗಳನ್ನು ಸಭೆಯ ಮುಂದೆ ಇಡಬೇಕಾಗುತ್ತದೆ. ಕಾಂಗ್ರೆಸ್ ಪಕ್ಷದ ಜೊತೆ ಜನತಾ ದಳ ಸರ್ಕಾರ ಅಧಿಕಾರಕ್ಕೆ ಬರತಕ್ಕ ಸನ್ನಿವೇಶದಲ್ಲಿ ನಮ್ಮ ನಾಯಕರುಗಳು ಏನು ಕೆಲವು ಸಿದ್ದಾಂತಗಳನ್ನು ಹೇಳುತ್ತಾರೆ, ಆ ಸಿದ್ಧಾಂತಗಳ ಆಧಾರದ ಮೇಲೆ ಅಂತಿಮವಾಗಿ ಒಂದು ತೀರ್ಮಾನಕ್ಕೆ ಬಂದರು. ಆ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರ ಜೊತೆಯಲ್ಲಿ ಏನು ಚರ್ಚೆಗಳಾಯಿತು, ಅಂತಿಮವಾಗಿ ನಿರ್ಧಾರ ಮಾಡತಕ್ಕವರ ಪಕ್ಷದ ಅಧ್ಯಕ್ಷರ ಜೊತೆಯಲ್ಲಿ ಏನು ಚರ್ಚೆಯನ್ನು ಮಾಡಿದರು ನಮ್ಮ ಪಕ್ಷದ ಅಧ್ಯಕ್ಷರಾದ ಶ್ರೀಮಾನ್ ದೇವೇಗೌಡರು, ಆ ಸಂದರ್ಭದಲ್ಲಿ ಸಭೆಯಲ್ಲಿ ನಾನೂ ಇದ್ದೆ. ಏಕೆಂದರೆ, ಕಾಂಗ್ರೆಸ್ ಮತ್ತು ಜೆ.ಡಿ.ಎಸ್. ಸರ್ಕಾರದ ಸಂದರ್ಭದಲ್ಲಿ ಏನು ಹಲವಾರು ಪತ್ರಗಳನ್ನು ಮುಖ್ಯಮಂತ್ರಿಗಳಿಗೆ ಬರೆಯುವುದರ ಮುಖಾಂತರ ಇಕ್ಕಟ್ಟಿಗೆ ಸಿಕ್ಕಿಸತಕ್ಕ ಕೆಲಸವನ್ನು ಮಾಡಿದರು, ದೇವೇಗೌಡರು ಅಭಿವೃದ್ಧಿಗೆ ತೊಡಕನ್ನು ಉಂಟು ಮಾಡುತ್ತಾ ಇದ್ದರು ಎಂದು ಹಲವಾರು ವ್ಯಾಖ್ಯಾನಗಳನ್ನು ಮಾಡಿದ್ದಾರೆ. ಈ ವಿಷಯದಲ್ಲಿ ಪ್ರೇಮ ಪತ್ರ, ಆ ಪತ್ರ ಎಲ್ಲಾ ರೀತಿಯ ಚರ್ಚೆಗಳಾಯಿತು. ಒಂದು ಪ್ಯಾರಾವನ್ನು ನಿಮ್ಮ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ಧರ್ಮಸಿಂಗ್‌ರವರಿಗೆ ಬರೆದಂಥ ಪತ್ರ. "After the announcement of the election results. While the talks of forming Congress led coalition Government were being held at Delhi in presence of Smt. Sonia Gandhi. National President, Congress Party, I stressed the need of conducting a thorough enquiry into the said scandal. You were also present in the said meeting and hence you are well aware that it was one of the conditions which was agreed to by all of us. ಇಲ್ಲಿಗೆ ನಿಲ್ಲಿಸುತ್ತೇನೆ. ಇದು ಧರ್ಮಸಿಂಗ್‌ರವರಿಗೆ ನಮ್ಮ ರಾಷ್ಟ್ರೀಯ ಘಟಕದ ಅಧ್ಯಕ್ಷರು ಬರೆದಂಥ ಒಂದು ಲೆಟರ್, ಜೆ.ಡಿ.ಎಸ್. ಮತ್ತು ಕಾಂಗ್ರೆಸ್ ಪಕ್ಷದ ಮೈತ್ರಿ ಸರ್ಕಾರದ ಸಂದರ್ಭದಲ್ಲಿ, ಈ ರಸ್ತೆ ವಿಷಯದಲ್ಲಿ ನಮ್ಮ ರಾಷ್ಟ್ರೀಯ ಪಕ್ಷದ ಅಧ್ಯಕ್ಷರ series of letters ಗಳಲ್ಲಿ ಏನು ಹೇಳಿದ್ದಾರೆ ಎನ್ನುವುದನ್ನು ನಿಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಈಗ ನಾವು ಮತ್ತು ಬಿ.ಜೆ.ಪಿ ಮಿತ್ರ ಪಕ್ಷವು ಒಂದಾಗಿ ಸರ್ಕಾರ ರಚನೆ ಮಾಡಿದ್ದೇವೆ. ಅವತ್ತು ಕಾಂಗ್ರೆಸ್ ಮತ್ತು ಜೆ.ಡಿ.ಎಸ್ ಪಕ್ಷ ಸರ್ಕಾರ ರಚನೆ

ಮಾಡಬೇಕಾದರೆ ಈ ವಿಷಯಗಳ ಬಗ್ಗೆ ಏನು ಚರ್ಚೆಯಾಗಿತ್ತು, ಏನು ಎರಡು ಪಕ್ಷಗಳ ನಾಯಕರುಗಳು ಅವತ್ತೇನು ಚರ್ಚೆ ಮಾಡಿದ್ದಾರೆ ಅದನ್ನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಆದರೆ, ನಾವು ಏನು ಸರ್ಕಾರ ರಚನೆ ಮಾಡಿದೆವು, ಹಾಗೆ ಸರ್ಕಾರ ರಚನೆ ಮಾಡತಕ್ಕ ಸಂದರ್ಭದಲ್ಲಿ ಏನಾಯಿತು ಎಂಬುದನ್ನು ಹೇಳುತ್ತೇನೆ. ನಮ್ಮ ರಾಜೇಂದ್ರನ್‌ರವರು, ವಾಟಾಳ್ ನಾಗರಾಜ್‌ರವರು ಇವರೆಲ್ಲಾ ನಿನ್ನೆ ಕೆಲವು ಚರ್ಚೆಯನ್ನು ಮಾಡಿದ್ದಾರೆ: ನಾವು ಸರ್ಕಾರ ರಚನೆ ಮಾಡಬೇಕಾದರೆ ಈ ಎರಡು ಪಕ್ಷಗಳವರು ಈ ಕಂಡೀಷನ್‌ಗಳನ್ನೇನೂ ಹಾಕಿಕೊಂಡಿರಲಿಲ್ಲ. ನಮ್ಮಿಬ್ಬರಲ್ಲಿ ಭಿನ್ನಾಭಿಪ್ರಾಯಗಳು, ಅಭಿಪ್ರಾಯಗಳು ಬೇರೆ ಬೇರೆ ಇರತಕ್ಕಂಥಾದ್ದನ್ನು ನೋಡಿ ಇವತ್ತು ಅದಕ್ಕೇ ಬೇರೆ ಬೇರೆ ಆಸೆಗಳನ್ನು ಕೆಲವರು ಏನೋ ಮನಸ್ಸಿನಲ್ಲಿ ಉಂಟು ಮಾಡಿ ಕೊಳ್ಳುತ್ತಿದ್ದಾರೆ. ಏನೋ ಈ ಸರ್ಕಾರ ಭಿನ್ನಾಭಿಪ್ರಾಯದಲ್ಲಿ ಇವತ್ತು ಬಿದ್ದು ಹೋಗಬಹುದು, ನಾಳೆ ಬಿದ್ದು ಹೋಗಬಹುದು ಎಂದು. ನಾನು ಈ ಸಂದರ್ಭದಲ್ಲಿ ಜೆ.ಹೆಚ್. ಪಟೇಲರನ್ನು ನೆನೆಸಿಕೊಳ್ಳುವುದಕ್ಕೆ ಬಯಸುತ್ತೇನೆ. ಏಕೆಂದರೆ, ಅವರು ಒಂದು ಕತೆ ಹೇಳಿದ್ದರು. ಇಲ್ಲಿಯೇ ಹೇಳಿದ್ದರೋ, ಹೊರಗಡೆ ಹೇಳಿದ್ದರೋ ನನಗೆ ಗೊತ್ತಿಲ್ಲ. ಅದೇನೋ ಮುಂದೆ ಒಂದು ದೊಡ್ಡ ಶರೀರ ಹೋಗುತ್ತಾ ಇತ್ತು, ಹಿಂದೆ ಏನೋ ಒಂದು ಬೀಳುತ್ತೆ ಎಂದು, ಹಿಂದುಗಡೆ ಇನ್ನಾರೋ ಹೋಗುತ್ತಿದ್ದರು ಎಂದು... ನನಗೆ ಅವರ ತರಹ ಸಂಪೂರ್ಣವಾಗಿ ಹೇಳುವುದಕ್ಕೆ ಸಾಧ್ಯವಿಲ್ಲ. ಅದನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಅದನ್ನು ದಯವಿಟ್ಟು ಪ್ರಕಾಶ್‌ರವರಿಗೆ ಹೇಳುವುದಕ್ಕೆ ಹೇಳಿ.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ, ಒಂದು ಹೋರಿ...

ಶ್ರೀ ವಾಟಾಳ್ ನಾಗರಾಜ್ : ಮೇಲಿನದನ್ನು ಹೇಳಿ, ಕೆಳಗಡೆ ಬರಬೇಡಿ ನೀವು.

ಶ್ರೀ ಎಂ.ಪಿ. ಪ್ರಕಾಶ್ : ಒಂದು ಹೋರಿ ಹೋಗುತ್ತಾ ಇತ್ತು. ಅದರ ಹಿಂದೆ ನರಿ ಅದೇನೋ ತಿಂದುಬಿಡುತ್ತೇನೆಂದು ಹೋಗುತ್ತಾ ಇತ್ತು. ಆದರೆ, ಅದು ನಿರಾಸೆಗೆ ಒಳಗಾಯಿತು ಎಂದು ಇಲ್ಲಿ ಹೇಳಿದ್ದರು. ಅದಕ್ಕಿಂತ ಬಹಳ ಮುಖ್ಯವಾದದ್ದು, ವಾಟಾಳ್ ನಾಗರಾಜ್‌ರವರು, ನೋಡಿ ಈ ದಿವಸ ರಾಮಕೃಷ್ಣ ಹೆಗಡೆಯವರು ಒಂದು ಹೇಳಿಕೆ ಕೊಟ್ಟಿದ್ದಾರೆ. 24 ತಾಸಿನಲ್ಲೇ ನಿಮ್ಮ ಸರ್ಕಾರವನ್ನು ನಾನು ಮನಸ್ಸು ಮಾಡಿದರೆ ತೆಗೆದುಹಾಕಬಹುದು ಎಂದು ಹೇಳಿ, ನಿಮ್ಮ ಸರ್ಕಾರ ಸುಭದ್ರವಾಗಿದೆಯೇ ಎಂದು ಪ್ರಶ್ನೆ ಮಾಡಿದರು. ಆಗ ಅವರು ಹೇಳಿದರು, ನಮ್ಮ ಮನೆ ಮುಂದೆ ಯಾವಾಗಲೂ ದಿನಕ್ಕೆ

15–20 ರೈಲುಗಳು ವಿಷಲ್ ಹಾಕಿಕೊಂಡು, ಕೂಗಿಕೊಂಡು ಹೋಗುತ್ತ ಇರುತ್ತವೆ. ಆದರೆ, ನಮ್ಮ ಮನೆಯ ಗೋಡೆ ಬಿದ್ದಿಲ್ಲ. ಅದೇ ಮನೆಯ ಅನುಗ್ರಹದಲ್ಲಿ ಅವರು ಇದ್ದಾರೆ. ಆದ್ದರಿಂದ, ಕುಮಾರಸ್ವಾಮಿಯವರ ಮನೆಯ ಗೋಡೆ ಕೂಡ ಬಿರುಕುಬಿಡುವುದಿಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಅಧ್ಯಕ್ಷರೇ, ಕೇಂದ್ರದಲ್ಲೂ ಹಲವಾರು ಪಕ್ಷಗಳು ಸೇರಿ ಸರ್ಕಾರ ನಡೆಸುತ್ತಿವೆ. ಕೇಂದ್ರ ಸರ್ಕಾರದಲ್ಲೂ ಹಲವಾರು ರೀತಿಯ ಭಿನ್ನಾಭಿಪ್ರಾಯಗಳನ್ನು ದಿನನಿತ್ಯ ನೋಡುತ್ತಾ ಇದ್ದೇವೆ. ಈಗತಾನೇ ನನಗೊಂದು ಯು.ಟಿ.ಐ. ಫ್ಲಾಷ್ ನ್ಯೂಸ್ ಬಂತು. 'In a surprising development, Dravida Munnetra Kazhagam President and Tamilnadu Chief Minister Karunanidhi to-day indicated that the DMK would pull out the Congress led UPA Government at the centre, If it fails to rescind its decision to diverse equity in the public sector Naiveli Lignite Corporation.' ಹಾಗೆಂದು ಹೇಳಿ ಕೇಂದ್ರ ಸರ್ಕಾರ ಬಿದ್ದೇ ಹೋಯಿತೆಂದು ನಾವು ಹೇಳುವುದಕ್ಕಾಗುತ್ತದೆಯೇ? ದೇಶದಲ್ಲಿ ಈ ಸಮ್ಮಿಶ್ರ ಸರ್ಕಾರಗಳ ಎರಾ ಏನು ಪ್ರಾರಂಭವಾಗಿವೆ, ಇದರಲ್ಲಿ ಭಿನ್ನಾಭಿಪ್ರಾಯಗಳು ಬರುತ್ತವೆ. ಹಲವಾರು ಭಿನ್ನಾಭಿಪ್ರಾಯಗಳು ಇರುತ್ತವೆ. ಇವತ್ತು ನಮ್ಮ ಉಪ ಮುಖ್ಯಮಂತ್ರಿಗಳಾಗಿರತಕ್ಕ ಯಡಿಯೂರಪ್ಪನವರ ಹೇಳಿಕೆ ಬಗ್ಗೆ ಕೆಲವರು ಸದನದ ಗಮನ ಸೆಳೆದಿದ್ದಾರೆ. ಅವರು ವಿರೋಧಪಕ್ಷದ ನಾಯಕರಾಗಿದ್ದಾಗ ಏನು ಈ ಪ್ರಾಜೆಕ್ಟ್ ಬಗ್ಗೆ, ಆ ಸಂದರ್ಭದಲ್ಲಿ ಏನು ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ, ಅದರ ಬಗ್ಗೆಯೂ ಹಲವಾರು ಜನ ಈ ವಿಷಯವನ್ನು ಮುಂದೆ ಇಟ್ಟಿದ್ದೀರಿ. ಇವತ್ತು ಬೆಳಿಗ್ಗೆ ನಮ್ಮ ಸನ್ಮಾನ್ಯ ಖರ್ಗೆಯವರು ಆ ವಿಷಯವನ್ನು ಏನು ಮುಂದಿಟ್ಟಿದ್ದಾರೆ, ಅದೇ ರೀತಿ ಕಾಂಗ್ರೆಸ್ ಪಕ್ಷದ ಹಲವಾರು ನಾಯಕರುಗಳು ಆ ಸಂದರ್ಭದಲ್ಲಿ ವಿರೋಧ ಪಕ್ಷದ ಸ್ಥಳದಲ್ಲಿ ಕುಳಿತು.....

ಶ್ರೀ ವಾಟಾಳ್ ನಾಗರಾಜ್ : ನಾವು ಇವತ್ತು ಬೆಳಿಗ್ಗೆಯಿಂದ ನೋಡುತ್ತಾ ಇದ್ದೇವೆ. ಯಡಿಯೂರಪ್ಪನವರನ್ನು ಎಲ್ಲಿಗೆ ಕಳುಹಿಸಿದ್ದೀರಿ? ನಿಮ್ಮ ಉತ್ತರ ಹೇಳುವಾಗ ಅವರು ಇರಬೇಕಾಗಿತ್ತು. ಈಗ ಅವರು ಇದ್ದಿದ್ದರೆ ಚೆನ್ನಾಗಿತ್ತಲ್ಲವೇ? ಅವರನ್ನು ಏಕೆ ಕಳುಹಿಸಿದಿರಿ? ಬೇರೆ ಯಾರನ್ನಾದರೂ ಕಳುಹಿಸಬಹುದಿತ್ತು. ಬಹಳ ಬುದ್ಧಿವಂತಿಕೆಯಿಂದ ಅವರನ್ನು ಕಳುಹಿಸಿದ್ದೀರಿ.

ಒಬ್ಬ ಸದಸ್ಯರು : ಬಳ್ಳಾರಿ ಬೆಂಕಿ ಆರಿಸುವುದಕ್ಕೆ ಹೋಗಿದ್ದಾರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಯಡಿಯೂರಪ್ಪನವರು ಎಲ್ಲೂ ಹೋಗುವುದಿಲ್ಲ, ಪಕ್ಕದಲ್ಲೇ ಕುಳಿತುಕೊಳ್ಳುತ್ತಾರೆ. ಯಾರಿಗೂ ಅನುಮಾನ ಬೇಡ. ಅವರು, ನಾವು ಜೊತೆಯಲ್ಲಿ ಇರುತ್ತೇವೆ. ಅವರಿಗೆ ಬೇರೆ ಕಾರ್ಯಕ್ರಮಗಳು ಇವೆ, ಆರ್ಥಿಕ ಇಲಾಖೆಯನ್ನು ನಿರ್ವಹಿಸತಕ್ಕ ಸಂದರ್ಭದಲ್ಲಿ ಅವರದೇ ಆದಂಥ ಜವಾಬ್ದಾರಿ ಇರುತ್ತದೆ. ಬೇರೆ ಪ್ರೀ ಎಂಗೇಜ್‌ಮೆಂಟ್‌ನಲ್ಲಿ ಹೋಗಿರತಕ್ಕಂಥಾದ್ದು, ಅದಕ್ಕೆ ಯಾರೂ ಗಾಬರಿಯಾಗಬೇಕಿಲ್ಲ. ಯಡಿಯೂರಪ್ಪನವರು ನಮ್ಮನ್ನು ಬಿಟ್ಟು ಎಲ್ಲೋ ದೂರ ಹೋಗಿಬಿಟ್ಟಿದ್ದಾರೆಂದು ಭಾವಿಸುವುದು ಬೇಡ. ಅವರು ನಮ್ಮ ಜೊತೆಯಲ್ಲೇ ಇರುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಬೆಳಗಾಂಗೆ ಹೋಗಿದ್ದಾರೆಂದು ನಾವು ಸಮಾಧಾನವಾಗಿ ಇದ್ದೆವು. ಹಾಗಾದರೆ, ಅವರು ಬೆಂಗಳೂರಿನಲ್ಲೇ ಇದ್ದಾರೆಯೇ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಇಲ್ಲ, ಬೆಳಗಾಂಗೇ ಹೋಗಿರತಕ್ಕಂಥಾದ್ದು. ಆ ಸಂದರ್ಭದಲ್ಲಿ ಏನೋ ಮಾನ್ಯ ಹೆಚ್.ಕೆ. ಪಾಟೀಲರು ಮಾತನಾಡಿರತಕ್ಕಂಥಾದ್ದು ಇರಬಹುದು, ನಮ್ಮ ಹಿರಿಯ ಸದಸ್ಯರಾದಂಥ ಖರ್ಗೆಯವರು ಮಾತನಾಡಿರತಕ್ಕಂಥಾದ್ದನ್ನು ನಾನು ನೋಡಿದ್ದೇನೆ. ಮತ್ತೆ ಸಂಪೂರ್ಣ ಎಲ್ಲರ ಹೇಳಿಕೆಯನ್ನು ಪುನರುಚ್ಚಾರ ಮಾಡುವುದರ ಮುಖಾಂತರ ಸದನದ ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುವುದಕ್ಕೆ ಬಯಸದೇ, ಅದನ್ನು ನೆನಪಿಸುತ್ತೇನೆ ಅಷ್ಟೆ. ಏನೇನು ಯಾರು ಯಾರು ಮಾತನಾಡಿದ್ದಾರೆ, ನಮ್ಮ ಹಿರಿಯ ಸದಸ್ಯರಾದಂಥ ದೇಶಪಾಂಡೆಯವರೇನು ಕಡತಗಳು ಮಾತನ್ನು ಆಡುತ್ತವೆ ಎಂದು ಹೇಳಿದ್ದಾರೆ, ಅದಕ್ಕೆ ನಾನೂ ಧ್ವನಿಗೂಡಿಸುತ್ತೇನೆ. ಈ ಕಡತಗಳೇ ಮಾತನಾಡುತ್ತಾ ಇವೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ಈ ಒಂದು ವಿಷಯದಲ್ಲಿ ನಿಮ್ಮ ಪಕ್ಷದಲ್ಲಿ, ನಿಮ್ಮ ಮೈತ್ರಿ ಸರ್ಕಾರದಲ್ಲಿ ಭಿನ್ನಾಭಿಪ್ರಾಯ ಇದೆ. ನೀವು ಒಂದು ಹೇಳುತ್ತೀರಿ ಅವರೊಂದು ಹೇಳುತ್ತಾರೆ ಎಂದು ಹೇಳುತ್ತಾರೆ. ಹೌದು ನಮ್ಮಲ್ಲಿ ಸರ್ಕಾರ ರಚನೆ ಮಾಡಬೇಕಾದರೆ ನಾವು ಈ ವಿಷಯಗಳಿಗೆಲ್ಲಾ ಏನು ಮಾಡಬೇಕು ಎನ್ನುವ ಬಗ್ಗೆ ಒಡಂಬಡಿಕೆ ಮಾಡಿಕೊಂಡಿರಲಿಲ್ಲ. ನಮ್ಮದು ಒಂದು ತರಹ ಲವ್ ಮ್ಯಾರೇಜ್ ಅಂತ ಹೇಳಬೇಕಾಗುತ್ತದೆ. ಮಾನ್ಯ ಜೆ.ಹೆಚ್. ಪಟೇಲರ ಲಾಂಗ್‌ವೇಜ್‌ನಲ್ಲಿ ಹೇಳಬೇಕಾದರೆ, ಅಕ್ಸಿಡೆಂಟಲ್ ಅಂತಾದರೂ ಕರೆಯಿರಿ. ಅಕ್ಸಿಡೆಂಟ್ ಮಾಡಿದ್ದೇ ನಮ್ಮ ಕಾಂಗ್ರೆಸ್ ಪಕ್ಷದವರು;

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅದಕ್ಕೆ ಮಾನ್ಯ ಅಧ್ಯಕ್ಷರೇ, there is a saying; 'Politicians make strange bed follows.' ಒಂದು ಸಲ ಅವರ ಜೊತೆ ಇರುತ್ತೇವೆ. ಇನ್ನೊಂದು ಸಲ ಇವರ ಜೊತೆ ಇರುತ್ತೇವೆ. ಅಂತ.

ಶ್ರೀ ಜೆ.ಸಿ. ಮಾಧುಸ್ವಾಮಿ : ಕೆ.ಎಸ್.ಆರ್.ಟಿ.ಸಿ. ಬಸ್ಸಿನಲ್ಲಿ ಲವ್ ಶುರು ಆಯಿತು.

ಶ್ರೀ ಎನ್. ಚಲುವರಾಯಸ್ವಾಮಿ : ಮಾನ್ಯ ಅಧ್ಯಕ್ಷರೇ ನಾವು ಆಕಸ್ಮಿಕವಾಗಿ ಪ್ರೀತಿ ಮಾಡಿದ್ದೇವೆ ಅಷ್ಟೇ. ಬಹಳ ಹಿಂದಿನಿಂದ ಮಾಡಿಲ್ಲ ಅಂತ.

ಶ್ರೀ ಎಸ್.ಎಸ್. ಪಾಟೀಲ್ : ಇದು ಹುಡುಕಿ ಮ್ಯಾರೇಜ್.

ಶ್ರೀ ಜೆ.ಸಿ. ಮಾಧುಸ್ವಾಮಿ : ನೀವು ಲವ್ ಅಂದರೆ ಮೊದಲನೇ ಗಂಡನಿಗೆ ದ್ರೋಹ ಮಾಡಿದ್ದೀರಿ, ಮೋಸ ಮಾಡಿದ್ದೀರಿ ಅಂತ. ನೀವು ಮೊದಲಿನಿಂದ ಲವ್ ಮಾಡುತ್ತಿದ್ದೆವು ಅಂದರೆ ಮೊದಲನೇ ಗಂಡನಿಗೆ ದ್ರೋಹ ಮಾಡಿದ್ದೀರಿ ಅಂತ ಅರ್ಥ.

ಶ್ರೀ ಎನ್. ರಾಜೇಂದ್ರನ್ : ಮಾನ್ಯ ಅಧ್ಯಕ್ಷರೇ, 'Marriages are fixed in the Heaven.' ಎಂದು ಹೇಳುತ್ತಾರೆ. ಆದರೆ ಡೈವರ್ಸ್ ಎಲ್ಲಿ ಫಿಕ್ಸ್ ಮಾಡಿದ್ದಾರೆ? ಡೆಲ್ಲಿಯಲ್ಲಿಯೇ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೇ, ಹಿಂದೆ ಸರ್ಕಾರ ರಚನೆ ಮಾಡಿದಾಗ ಕಾಂಗ್ರೆಸ್ ಪಕ್ಷದ ನಾಯಕರು ಹಾಗೂ ನಮ್ಮ ಪಕ್ಷದ ನಾಯಕರು ಸೇರಿ ಸರ್ಕಾರ ಏನು ರಚನೆ ಮಾಡಿದರು ಆ ಸಂದರ್ಭದಲ್ಲಿ ಈ ವಿಷಯಗಳನ್ನೇಲ್ಲಾ ಚರ್ಚೆ ಮಾಡಿ ಅವರು ಸರ್ಕಾರ ರಚನೆ ಮಾಡಿದ್ದರು. ಆದರೆ ನಾವು ಈ ಹೊಸ ಮೈತ್ರಿ ಸರ್ಕಾರ ರಚನೆ ಮಾಡಿದಾಗ ಈ ವಿಷಯಗಳನ್ನು ನಾವು ಚರ್ಚೆ ಮಾಡಿರಲಿಲ್ಲ. ಆದರೆ ಒಂದು ಈ ವಿಷಯ ಇವತ್ತು ಏನು ಬಂದಿದೆ ಇದಕ್ಕೆ ಎಲ್ಲರೂ ಮಾತನಾಡತಕ್ಕಂಥ ಸನ್ನಿವೇಶದಲ್ಲಿ ಬಿ.ಜೆ.ಪಿ. ಪಕ್ಷದ ನಿಲುವು ಏನೇ ಇರಲಿ ಈ ಪ್ರಾಜೆಕ್ಟ್ ನಡೆದು ಬಂದಿರತಕ್ಕಂಥ ದಾರಿಯ ಬಗ್ಗೆ ಎಲ್ಲರಲ್ಲೂ ಬೇಸರ ಇದೆ. ಈ ಒಂದು ಪ್ರಾಜೆಕ್ಟ್‌ನ ಹಿಂದೆ ಇರತಕ್ಕಂಥ ಕರ್ಮಕಾಂಡ ಏನಿದೆ, ಅದರ ಬಗ್ಗೆ ಎಲ್ಲರದ್ದೂ ಒಮ್ಮತ ಇದೆ ಎಂಬುದು ನನ್ನ ಭಾವನೆ. 224 ಜನ ಸದಸ್ಯರದ್ದೂ; ಇದರಲ್ಲಿ ಆ ಪಕ್ಷ ಈ ಪಕ್ಷ ಎನ್ನುವ ಪ್ರಶ್ನೆ ಇಲ್ಲ. ಎಲ್ಲರಲ್ಲೂ ಆ ಭಾವನೆ ಇದೆ. ಎಲ್ಲರ ಒಂದು ಅಭಿಪ್ರಾಯಗಳನ್ನು ಏನು ಈ ಸದನದ ಮುಂದೆ ಇಟ್ಟಿದ್ದಾರೆ, ಎಲ್ಲರಲ್ಲೂ ಆ ಭಾವನೆ ಇದೆ. ಈಗ ನಮ್ಮ ಮಾನ್ಯ ಸದಸ್ಯರಾದ ದೇಶಪಾಂಡೆಯವರು ಮೊನ್ನೆ ಮಾತನಾಡತಕ್ಕಂಥ ಸನ್ನಿವೇಶದಲ್ಲಿ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟಿನ ವಿಷಯದಲ್ಲಿ ಹೆಚ್ಚಿನ ಸಮಯವನ್ನು ತೆಗೆದುಕೊಂಡರು. ನಮ್ಮ ರಾಜ್ಯ ಸರ್ಕಾರಕ್ಕೆ ಮತ್ತು ರಾಜ್ಯ ಸರ್ಕಾರದ ಅಧಿಕಾರಿಗಳಿಗೆ ಯಾವ ಯಾವ ರೀತಿಯಲ್ಲಿ ಅವರ ಒಂದು ತೀರ್ಪನ್ನು ಕೊಟ್ಟಿದ್ದಾರೆ ಎನ್ನುವ ಬಗ್ಗೆ ಗಮನವನ್ನು ಏನು ಸೆಳೆದಿದ್ದಾರೆ, ಇವತ್ತು ನಾವೆಲ್ಲಾ ಕೋರ್ಟ್‌ಗಳ ಬಗೆ ಗೌರವವನ್ನು ಏನು ಕೊಡಬೇಕಾಗಿದೆ ಅದಕ್ಕೆ ನಾನು ತಲೆಬಾಗುತ್ತೇನೆ. ಕೋರ್ಟಿನ ತೀರ್ಪಿನ ಬಗ್ಗೆ ನನ್ನ

ಭಿನ್ನಾಭಿಪ್ರಾಯಗಳು ಯಾವುದೂ ಇಲ್ಲ. ಅದಕ್ಕೆ ನಾವು ತಲೆಬಾಗಬೇಕಾಗುತ್ತದೆ. ಆದರೆ ಸೋಮಶೇಖರ ರೆಡ್ಡಿ ಪ್ರಕರಣದಲ್ಲಿ ನೈಸ್ ಕಂಪನಿಯ ಮಾಲೀಕರುಗಳು ಕೆಲವು ಪ್ರಮಾಣಪತ್ರಗಳನ್ನು ಸಲ್ಲಿಸಿದ್ದಾರೆ. ಅದನ್ನು ನಾನು ಈ ಸದನದ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. To construe the concept of township as an attempt at the commercial sation of the express high way project reflect the gross mis-comprehension of the scheme in the petitioner's mind. ಅದು ಸೋಮಶೇಖರ್‌ರೆಡ್ಡಿ ಸರ್ಕಾರ ಮತ್ತೆ ಈ ನೈಸ್ ಕಂಪನಿ ವಿರುದ್ಧ ಏನು ಕೋರ್ಟ್‌ಗೆ ಹೋದಂತಹ ಸಂದರ್ಭದಲ್ಲಿ ರೆಸ್‌ಪಾಂಡೆಂಟ್ ಮಾಡಿ, ಅಲ್ಲಿ ಇವರು ಅಫಿಡವಿಟ್ ಹಾಕತಕ್ಕಂಥಾದ್ದು. The petitioner has also erred in thinking that only 2,775 acres are needed for the express highway not noticing that in any plan, future development has to be accommodated. The amount proposed for the road and the townships are the minimum required. For a major project like the Bangalore – Mysore Express way. It is submitted that the express way supposed to be constructed by the second respondent ಇವರು ನೈಸ್ ಕಂಪನಿ ಮಾಲೀಕರುಗಳು ...consists of peripheral ring road, link road and elevated road, which will be completely grade seperated with the inter changes, service and maintenance areas which require considerable extent of land. It is denied that the intention is to facilitate acquisition for a private company to enable it to make profit. On the contrary. The kind of profit aleged cannot be realised. Since the realisation for the investment by the respondent No.2 will only be in terms of a fee whose structure will be regulated by the State Government. Further, at the end of the concession period, the whole of the express way will revert to the State Government free of cost. The respondent No.2 will have to develop the township at its own expenditure and realise the investment within the concession period. It is further submitted that the land acquired will be free of cost since the owners have to be

compensated by the second respondent as per the applicable laws. It further denied that the townships are not for public purpose. Details of land requirement is as follows;

Express highway – 111 Km including inter changes, toll etc. 4528 acres. Peripheral road-41 km. i.e. 2,193 acres. Link road – 9.8 km i.e. 278 acres. Total 6,999 acres. He only submitted to the court. Respondent No.1 submits that no special favours are granted to the Respondent No.2 in terms of tax exemption and benefits. It has already been indicated that the project does not involve large scale diversion of various lands, particularly agricultural land. The project has been so designed as to minimise depletion of these lands. The conversion of agriculture land is also minimised. The State Government has taken a decision on policy after considering all relevent parameters and the petitioner is not entitled to question such a policy decision. ಇತ್ತೀಚಿನವರೆಗೂ ಲೋಕೋಪಯೋಗಿ ಇಲಾಖೆ ಮತ್ತು ಕೆಐಎಡಿಬಿಯವರು ಡಿಸೈನ್ ಮತ್ತು ಮ್ಯಾಪ್ ಕೇಳಿದರೆ ಕೊಡಲಿಕ್ಕೆ ಅವರು ತಯಾರಾಗಿ ಇಲ್ಲ. ಆದರೆ ಇಲ್ಲಿ ಏನು ಹೇಳುತ್ತಾರೆ ನೋಡಿ. The power to create green belt is not transferred by this respondent to respondent No.2. It is further denied that the power to work out the provisions of town and country planning Act have been transferred to the second respondent. The express way has been designed in such a manner that it can be extended to a six lane express way in the future. The project also envisages the construction of a southern outer peripheral road of approximately 41 km. Connecting the National Highway 4 and National Highway 7, a9 km. Long link road connecting the Bangalore city Mysore express way to State Highway 17 and an elevated link road connecting the above link road to down town Bangalore city.The entire cost of the project including the cost of acquisition of land is tobe met by the respondent. ಇದು ಅವರು courtಗೆ submit

ಮಾಡಿರುವಂಥಾದ್ದು. The land made available to this respondent for the construction of the township has to be utilised in the following manner:-

45% available to this respondent for commercial exploitation 25% earmarked for open spaces. 25% earmarked for common facilities to be transferred to this respondent No.1. To be developed for the purpose of municipal offices etc. to be transferred to respondent No.1 i.e., 5%. This respondent had originally submitted the proposal for the construction of seven townships. However, the State Government has permitted this respondent to put up only five townships. The entire infrastructure for the townships including setting up of internal roads, water distribution system, sewerage, solid waste disposal facilities, parks, open spaces, hospitals, Government offices, power transmission lines and telephone lines have to be put up by this respondent at its own expense.

The table showing the details of the classification of land required for the project is as follows; it is denied that the impugned agreement has been entered into merely to develop the commercial complexes as alleged by the petitioner under clause 331 while it is opened to the state Government to extend the period. The State Government is not obliged to do so. Under clause 333 of the impugned agreement, the respondent No.1 has only agreed to make its best efforts to prevent such declaration. As to clause 321, it is submitted that the provisions of the impugned agreement do not bind the Legislature. It is always opened to the Legislature to make such laws in the interest of the people of the state as it deems fit. It is also denied the the Legislature and respondent No.1 are bound hand and foot to sub-serve the interest of this respondent. It is submitted that it is not open to either the State Government or to this respondent to

subvert the provisions of Articles 196 to 201 of the Constitution. The provision of Clauses 663 o f the impugned agreement empowers the state Government to take appropriate measures if this respondent fails to complete the construction of the express way as agreed. It is also submitted that the project has been undertaken to enable this respondent to develop the townships and the various facilities therein. It is also denied that only about 3,000 acres of land are required for the construction of a 111 Km. Stretch of highway. It is submitted that the petitioner is partially right to the extent that 2,775 acres of land is required for a conventional 4 lane National Highway of grade as per the calculation made by him. The express way is proposed to be constructed by this respondent is completely grade separated and has 16 interchanges and seven service and maintenance area which will consume considerably acreage of land. The correct possession as to why respondent requires 6,999 acres of land for the toll road and 13,194 acres of land for the township is detailed out in Annexure-7. In any event , the land being provided for the construction of the express way cannot be used for any other purpose. It is denied that the real object of the project is to acquire land to prevailing market rates and to hand over the same to this respondent for the purpose of making profits or that the acquisition of land for this purpose is illegal. With regard to the allegation of the petitioner that the provisions of the Land Acquisition Act do not permit such acquisition, it is submitted that the allegation is premature and without merit. It is submitted that there is no special consideration being offered to this respondent. ಇವೆಲ್ಲಾ ಅವರು ಸೋಮಶೇಖರ ರೆಡ್ಡಿ ಕೇಸ್‌ನಲ್ಲಿ ಹೈಕೋರ್ಟಿಗೆ ಕೊಟ್ಟಿರತಕ್ಕಂಥ ಅವರ ಮಾಹಿತಿಗಳು. This respondent Nandi Infrastructure Corridor Enterprises Limited is not a foreign company. A true copy of the certificate of incorporation is produced herewith and

marked as Annexure (8) Foreign company ಆಗದೇ ಇದ್ದ ಮೇಲೆ ಅವರು ಲಂಡನ್ ಕೋರ್ಟ್‌ಗೆ ಏಕೆ ತೆಗೆದುಕೊಂಡು ಹೋದರೋ ಗೊತ್ತಿಲ್ಲ. This respondent appreciates the effort made by the Leaders of the Opposition in the Legislative Council to bring to the awareness of the general public of the State and that of the country. It has been the endeavour of this respondent to maintain and achieve transparency in all the transactions it has had with respondent No.1. This respondent has no several occasions given detailed presentation on this project. In this context, it is also submitted that a detailed presentation was arranged for those persons who raised this subject for clarification of doubts and for other information at the Conference Hall of Vidhana soudha on 14.10.1997. During this presentation, most of the Members were present and actively participated in the debate. The Leader of the Opposition in the Council was also present. During the above presentation, every minute detail was explained including the scientific method adopted by this respondent for identification of the land for the project. In fact, the clauses in the agreement do not have the effect of binding the Legislature as suggested. The development of a green belt is in the interest of the people of the State of Karnataka. It is submitted that the power to create a green belt area has not been transferred by the State Government to this respondent. It is also denied that the power to work out the provisions of the Town and Country Planning Act have been transferred to this respondent. The power is with the State Government alone. ಹಿಂದಿನಿಂದ ಮಾಡಿಕೊಂಡು ಬಂದಿರುವುದಕ್ಕೆ he has taken a U turn. ಕೋರ್ಟ್‌ನಲ್ಲಿ ಅವರು ಸಬ್‌ಮಿಟ್ ಮಾಡತಕ್ಕಂಥ ಸನ್ನಿವೇಶದಲ್ಲಿ ಹಿಂದಿನಿಂದ ಮಾಡಿಕೊಂಡು ಬಂದಿರತಕ್ಕಂಥಾದ್ದನ್ನು ಯಾವರೀತಿ reverse ತೆಗೆದುಕೊಂಡು ಹೋಗಿದ್ದಾರೆಂಬುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಕೋರ್ಟ್‌ನಲ್ಲಿ ಏನು ಹೇಳಿದರು,

ಇವರ ಕಂಪನಿಯ ಬಗ್ಗೆ ಶಿಫಾರಸ್ಸು ಮಾಡತಕ್ಕಂಥ ಒಂದು ಕಂಪನಿ UTI Bank. ಅವರು ಏನು ಹೇಳುತ್ತಾರೆಂದರೆ; The pending legal cases against the project have delayed the availability of the land. The cases are presently before the Hon'ble Supreme Court and the next hearing is slated in November 2005. The legal framework of the company has been tested at various levels of the Judiciary and the company is confident of winning the current appeals in the Supreme Court. ದಯವಿಟ್ಟು ಎಲ್ಲರೂ ಇದನ್ನು ಗಮನಿಸಬೇಕು. ಏಕೆಂದರೆ ಮಾಧುಸ್ವಾಮಿಯವರು ಮತ್ತು ಶ್ರೀರಾಮರೆಡ್ಡಿಯವರು ಅವರಿಗೇನೂ ಈ ಪ್ರಾಜೆಕ್ಟ್‌ಗೂ ಸಂಬಂಧವಿಲ್ಲದಿದ್ದರೂ ಹೋದರೂ ಈ ಸದನದ ಸದಸ್ಯರಾಗಿ ನಮ್ಮದೇನು ಜವಾಬ್ದಾರಿ ಇದೆ ನಮ್ಮ ಗಮನಕ್ಕೆ ಇಲ್ಲಿ ಆಗಿರತಕ್ಕಂಥ ತಪ್ಪುಗಳು ಬಂದಾಗ ನಾವು ಸುಮ್ಮನೆ ಕೊರಬಾರದೆಂದು ಹೇಳಿ ಅವರೇನು ಕೋರ್ಟ್ ಮುಂದೆ ಹೋದರು ಅದಕ್ಕಾಗಿ ಅವರಿಗೆ ಅಭಿನಂದನೆ ಸಲ್ಲಿಸಬೇಕಾಗುತ್ತದೆ. ಅವರಿಗೇನು expenditure cost ಹಾಕಿದ್ದಾರೆಂದು ಹೇಳುತ್ತಾರೆ, ಇಲ್ಲಿ ಇರತಕ್ಕಂಥಾದ್ದು. ಸರ್ಕಾರಕ್ಕೆ ನಮಗೆ ನಂಬಿಕೆ ಇಲ್ಲ. Actually, we don't know whether we can win in the court or not. We have no confidence. But, this man predicts before the judgment, that he had full confidence in winning the case. We have to note this point. 'The legal framework of the company has been tested at various levels of the Judiciary and the company is confident of winning the current appeals in the Supreme Court. The company is also confident that the entire right of the way land required for the project would be received by January 2006 and the balance land by March 2006.' ಇದು ಅವರಿಗೆ ನಾವು ಯಾವ ರೀತಿ ಗೆಲ್ಲುತ್ತೇವೆಂಬುದರ ಬಗ್ಗೆ confidence. ಮೊದಲೇ ಅವರಿಗೆ ಭಗವಂತ ಕನಸಿನಲ್ಲಿ ಬಂದು ಹೇಳಿಬಿಟ್ಟಿದ್ದ. ನಮ್ಮ ದೇಶಪಾಂಡೆಯವರು ಕೆಲವು ವಿಷಯ ಹೇಳಿದರು. ಸುಪ್ರೀಂ ಕೋರ್ಟಿನ ರಿಮಾರ್ಕ್ಸ್ ನಮ್ಮ ಅಧಿಕಾರಿಗಳ ಬಗ್ಗೆ ಯಾವ ಮಟ್ಟದಲ್ಲಿ ಚರ್ಚೆ ಮಾಡಿದರು, ನಮ್ಮ ಅಧಿಕಾರಿಗಳ ಬಗ್ಗೆ ಎಷ್ಟು ಲಘುವಾಗಿ ತೀರ್ಮಾನಗಳನ್ನು ಕೊಟ್ಟರು ಎಂದು ಹೇಳಿ. ಇಲ್ಲಿ ಒಂದು ಮಜಾ ಇದೆ ನೋಡಿ. Organization and Management. The Board of Directors as

per the Articles of Association, NICE can have a minimum of Directors and a maximum of 12 Directors. The present composition of the Board of Directors of NICE is as follows: S. Sundar, Director, Ashok Kheni, Managing Director, Shiva Kumar Kheni. Organization structure and key Executives. The company has constituted a project management team for implementation of the project comprising Sriyuths. Ashok Kheni, S. Sundar, Venkataramanappa, D. Ravishankar, K.B. Gopala Krishan, Major C.R. Ramesh, S.R. Swamy, M.P. Agarwal. ಇಲ್ಲೇ ಇರತಕ್ಕಂಥದ್ದು. ನಾನು ಈ ಸಂದರ್ಭದಲ್ಲಿ ಮಾನ್ಯ ಧರ್ಮಸಿಂಗ್ ಅವರನ್ನು ಅಭಿನಂದಿಸಲೇಬೇಕಾಗುತ್ತದೆ. ಇವತ್ತು ಕೋರ್ಟಿನಲ್ಲಿ ಬಂದಿರುವ ತೀರ್ಮಾನಗಳು ಏನು ಇದ್ದಾವೆ, ಕೆಲವು ಮಾಹಿತಿಗಳ ಕೊರತೆಯಿಂದಲೂ ಈ ಒಂದು ಕೋರ್ಟ್ ವ್ಯವಹಾರದಲ್ಲಿ ನಮಗೆ ತೊಂದರೆಗಳಾಗಿದ್ದಾವೆಂದು ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಧರ್ಮಸಿಂಗ್ ಅವರಿಗೆ ಏನು ಮಾನ್ಯ ದೇವೇಗೌಡರು ಪತ್ರವನ್ನು ಬರೆದರು, ಆಗ ಧರ್ಮಸಿಂಗ್ ಅವರು ಲೋಕೋಪಯೋಗಿ ಸಚಿವರಾದ ಸನ್ಮಾನ್ಯ ರೇವಣ್ಣ ಅವರಿಗೆ ನಮ್ಮ ಸಹೋದರ ಅವರಿಗೆ ಇದರ ಬಗ್ಗೆ ಅದೇನು ಸ್ವಲ್ಪ ನೋಡಿ ಎಂದು ಹೇಳಿದರು ತನಿಖೆ ಮಾಡಿ ಎಂದು. ಮಾನ್ಯ ರಮೇಶ್ ಕುಮಾರ್‌ರವರು ಕೆ.ಸಿ. ರೆಡ್ಡಿಯವರ ಬಗ್ಗೆ ಬಹಳ ಎತ್ತರದ ಮಟ್ಟದಲ್ಲಿ ಮಾತನಾಡಿದರು. ಅಂಥ ವ್ಯಕ್ತಿಯನ್ನು ಇವತ್ತು ತೆಗೆದುಕೊಂಡು ಹೋಗಿ ಈ ಕೊನೆಗಾಲದಲ್ಲಿ ಅಂಥ ವ್ಯಕ್ತಿಯನ್ನು ಇಂಥ ಮಟ್ಟಕ್ಕೆ ತಂದು ಇಟ್ಟುಬಿಟ್ಟರಲ್ಲಾ ನೀವುಗಳು. ಪಾಪ, ಕನಿಕರವನ್ನು ವ್ಯಕ್ತ ಪಡಿಸಿದರು. ಕೆ.ಸಿ. ರೆಡ್ಡಿಯವರ ಮೇಲೆ. ನಮ್ಮ ಪಿಡಬ್ಲ್ಯೂಡಿ ಮಿನಿಸ್ಟರ್ ಅದಕ್ಕೆ ಹೇಳಿದರು, ಅದರೊಬ್ಬರೇ ಇರಲಿಲ್ಲ, 12 ಜನರ ಕಮಿಟಿಯನ್ನು ಮಾಡಿದ್ದೆವು ಎಂದು ಹೇಳಿ. ಆಗ ಸ್ವಲ್ಪ ಇದು confidentiality clause ಇತ್ತಲ್ಲಾ ಕ್ಲಾಜ್, ಹಿಂದೆ ಇದ್ದ ಅಧಿಕಾರಿಗಳು ಹಾಕಿಸಿದ್ದರಲ್ಲಾ, Principal Secretary to Industries Department, Principal Secretary to Chief Minister, Chief Secretary to Chief Minister. ಇದನ್ನು ಗುಪ್ತವಾಗಿ ನಡೆಸುವುದಕ್ಕೆ ಹಲವಾರು ಹಂತಗಳಲ್ಲಿ ಕೆಲವಾರು ಅಧಿಕಾರಿಗಳು ಪ್ರಯತ್ನ ಪಟ್ಟು ಯಶಸ್ವಿಯಾಗಿದ್ದರು. ಈ ರಂಗಮಹಲ್ ರಹಸ್ಯವನ್ನು ಬಿಡಿಸುವುದಕ್ಕೆ ಧರ್ಮಸಿಂಗ್ ಅವರು, ರೇವಣ್ಣನವರು ಸೂಚನೆ ಕೊಟ್ಟಿದ್ದಕ್ಕೆ ಸ್ವಲ್ಪಮಟ್ಟಿಗೆ ಸಾಧ್ಯವಾಯಿತು. ಆ ರಹಸ್ಯವನ್ನು ಪತ್ರಗಳನ್ನು ಹೊರಗೆ ತೆಗೆಯುವುದಕ್ಕೆ. Total land earmarked for phase-I of the project is

6173 acres; of this, around 1391 acres would be required for the road component; 400 acres out of a total of 2849 acres of inter change area would be used for the basic infrastructure development and about 3633 acres of land, ತಾವೇನು ಹೇಳುತ್ತಿದ್ದೀರಿ, was identified as developable area for real estate purpose. Further an area of 749 acres at various inter changes has been kept as buffer land as per the conditions stipulated by the existing lenders consortium, till the entire loans are repaid. ಇದನ್ನೆಲ್ಲಾ ಅವರೇ ಕೊಟ್ಟಿರತಕ್ಕಂಥದ್ದು. ಏನು ಲ್ಯಾಂಡ್ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ, ಇದೆಲ್ಲಾ ಇದೆ. ಇದನ್ನೆಲ್ಲಾ ನಿಮ್ಮ ಮುಂದೆ ಇಡುತ್ತೇನೆ. ಹೊಸೂರು ರೋಡು, ಬನ್ನೇರುಘಟ್ಟ ರೋಡು, ಕನಕಪುರ ರೋಡು ಇವೆಲ್ಲಾ ಅವರೇ ಕೊಟ್ಟಿರತಕ್ಕ ಮಾಹಿತಿಗಳು. ಇದು ಮಾನ್ಯ ಮಾಧುಸ್ವಾಮಿಯವರಾಗಲಿ, ಶ್ರೀರಾಮರೆಡ್ಡಿಯವರಾಗಲಿ, concoct ಮಾಡಿದತಕ್ಕದ್ದಲ್ಲ. ನೀವು ಮಾಡಿರುವ ಸ್ಟೋರಿ ಅಲ್ಲ. Means of finance. The project cost is to be funded by way of debt equity ratio of 123. The proposed means of finance for Model.1 of the project is as follows:- Equity share capital 1440, revenue from sale of land 1365 million. These are all in million not in rupees. Optionally fully convertable debentures… 309.50. Preferential capital 400 millions. Share premium 391 million. Total equity 3090.10 million. Rupee term loan 4330 million. Grand total 8706.10. ಇದನ್ನೆಲ್ಲಾ ಹೇಳುತ್ತಾ ಹೋಗುತ್ತಾರೆ. Advance sale from real estate. The means of finance also includes revenue from advance sale of real estate during the implementation period. This is estimated at Rs. 13,650 million. ಇದು ಅವರೇ ಕೊಟ್ಟಿರತಕ್ಕದ್ದು. Based on the land development plan prepared by the NECI. This would be realized by sale of developed land of various inter changes carved out after leaving space for toll plazas and other amenities. Details of revenue have to be realized… ಅದೆಲ್ಲಾ ಇರಲಿ ಬಿಡಿ. ಇದು ಏನು ಸುಪ್ರೀಂ ಕೋರ್ಟಿನ ಮುಂದೆ ತಾವು ಗೆಲ್ಲತಕ್ಕಂಥದ್ದರ ಬಗ್ಗೆ ಯಾವ ರೀತಿ ಕಾನ್‌ಫಿಡೆಂಟ್ ಆಗಿದ್ದರು, ಈ ಒಂದು ವ್ಯವಹಾರದಲ್ಲಿ ಅವರಿಗೆ ರಸ್ತೆ

ಕೆಲಸ ಬೇಕಿರಲಿಲ್ಲ. ಅವರಿಗೆ ಬೇಕಿದ್ದಿದ್ದು ದುಡ್ಡು ಮಾಡಲಿಕ್ಕೆ ರಿಯಲ್ ಎಸ್ಟೇಟ್. ನಾನು ನಮ್ಮ ದೇಶ್‌ಪಾಂಡೆಯವರಿಗೆ ಅಪ್ರೀಷಿಯೇಟ್ ಮಾಡಬೇಕು. ಅವರು ಆಗಲೇ ಅದನ್ನು ಸೆನ್ಸ್ ಮಾಡಿದರು. ಆದರೆ ಅವರನ್ನು ಯಾರ್ರೋ ಕೈಕಟ್ಟಿ ಹಾಕಿದರು. ಯಾರು ಎಂಬುದು ನಮಗೆ ಗೊತ್ತಿಲ್ಲ. ಸೋಮಶೇಖರರೆಡ್ಡಿ ಪ್ರಕರಣದಲ್ಲಿ ಉಚ್ಚನ್ಯಾಯಾಲಯದಿಂದ ಏನು ತೀರ್ಮ ಬಂದಿರತಕ್ಕದ್ದು, ಆ ಒಂದು ಕೆಲವು ಮುಖ್ಯಭಾಗಗಳನ್ನು ನಿಮ್ಮ ಮುಂದೆ ಇಡುವುದಕ್ಕೆ ಬಯಸುತ್ತೇನೆ. Allegations that only 2775 acres are needed for the express highway is denied. Keeping in view the land developments and future developments of the peripheral link road and elevated road, which will be completely grade separated with the inter changes. Service and maintenance areas for 111 Kms. of express way 41 Kms. Of peripheral road and 9.8 Kms. of link road, the land required for the construction of highway itself would be 6799 acres. Coming to the details of the project, it has been stated that impugned agreement involves the construction of a State of the Art 4 lane express way connecting Bangalore city and Mysore and 5 townships to accomdate a population of about 1 lakh each along the express way. The express way has been designed in such a manner that it can be extended to a 6 lane express way in the future. The project also envisages the construction of a southern outer peripheral road of approximately 41 Kms, Connecting the national highway-4 and national highway-7, A 9 Km. Long link road connecting the Bangalore City Mysore express way, the State highway-17 and an elevated link road connecting the above link road to down town Bangalore City. The entire cost of the project including the cost of acquisition of land is to be met by this respondent. The express way is to be operated by this respondent for an initial period of 30 years subject to further extentions if agreed by respondent No.2 and thereafter to be transferred to respondent No.1. Replying respondent is required to ensure

that at the end of the initial period of thirty years on handing over the same to the State Government the Express way has a further minimum life of thirty years. The land made available to this respondent for the construction of the townships has to be utilised in the proportion of 45% for commercial exploitation, 25% for open spaces and 25% for common facilities to be transferred to respondent No.1 and 5% to be developed for the purpose municipal. ಇದನ್ನೆಲ್ಲಾ ಹೇಳುತ್ತಾ ಹೋಗುತ್ತಾರೆ. ಸೋಮಶೇಖರರೆಡ್ಡಿ ತೀರ್ಪಿನಲ್ಲಿ ಕೊಟ್ಟಿರತಕ್ಕಂಥಾದ್ದು frame work agreement ಪ್ರಕಾರ ಈಗಾಗಲೇ ನೀವು discuss ಮಾಡಿದ್ದೀರಿ, 20,193 ಎಕರೆ, ನಾನು ಅದನ್ನು ಅಲ್ಲಿಗೇ ನಿಲ್ಲಿಸುತ್ತೇನೆ. There is no gurantee that the result will be achieved, Clause 3(2)(1) makes it clear that the provisions of the impugned agreement did not bind the Legislature. It is always open to the Legislature to make such laws as it deems fit. ಇಲ್ಲಿ ಹೇಳುತ್ತಿದ್ದಾರೆ, Frame work agreement ಪ್ರಕಾರ ಏನು ಜಡ್ಜ್‌ಮೆಂಟ್ ಕೊಟ್ಟಿದ್ದಾರೆ, ಇವೊತ್ತು ನಮ್ಮ ಸದನದ ಜವಾಬ್ದಾರಿ ಏನಿದೆ, ಅದನ್ನೂ ನಮಗೆ ನೆನಪು ಮಾಡಿಕೊಡುತ್ತಾರೆ. It has been denied that the Legislature and Government of Karnataka are bound hand and foot to subserve the interest of the respondent. Neither the State Government not the replying respondent can support the provisions of Article 196 to 201 of the Constitution of India. All actions taken by the State Government are subject to all provisions of the Constitution. ತಾವು ಎಂಟು ದಿವಸಗಳ ಕಾಲ ತೆಗೆದುಕೊಂಡಿದ್ದೀರಿ; ಸ್ವಲ್ಪ ಇರಿ, ನಾನು ಮುಗಿಸುತ್ತೇನೆ. ಇದಕ್ಕೆ ಏನಾದರೊಂದು ತೀರ್ಮಾನವಾಗಬೇಕೆಂದು ನೀವೆಲ್ಲರೂ ಆಸೆಪಟ್ಟಿದ್ದೀರಿ. ಮಾಡೋಣ, ಕಾತುರ ಬೇಡ, ನಿಮ್ಮ ಜೊತೆಗೆ ನಾನೂ ಬರುತ್ತೇನೆ. ಮಾನ್ಯ ದೇಶಪಾಂಡೆಯವರೇ ಸುಮಾರು ಮೂರು ಗಂಟೆಗಳಷ್ಟು ಕಾಲಾವಕಾಶ ತೆಗೆದುಕೊಂಡಿದ್ದಾರೆ. ನಾನು ಜವಾಬ್ದಾರಿಯುತವಾಗಿ ಕೆಲಸ ನಿರ್ವಹಿಸಬೇಕಾದರೆ ನನಗೆ ಸ್ವಲ್ಪ ಅವಕಾಶ ಕೊಡಿ.

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. Why are you interfering? ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವುದಕ್ಕೆ ನೀವ್ಯಾರೂ restict ಮಾಡುವುದಕ್ಕಾಗುವುದಿಲ್ಲ. ಅವರು ಹೇಳುವುದೆಲ್ಲವನ್ನೂ ಹೇಳಬೇಕಾಗುತ್ತದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೇ, ಈಗ ನಾನು ಮುಖ್ಯವಾದ ಆ judgment paraಗೆ ಬರುತ್ತಿದ್ದೇನೆ. The contract does not promise to do anything that is unlawful. The power of the Legislature to enact laws within the sphere allotted to it under the different lists of VII schedule being plannery in nature. The clauses in the agreement cannot be construed to have the effect of binding the Legislature which can reject the proposal of the Executive to enact any law as agreed to by the Government. The Legislature in its wisdom can even nullify an agreement already entered into. The best efforts as defined in the agreement in Clause 22(1)(5) reads:

Mr. Speaker : Mr. Anjanmurthy, reading the paper....

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಸ್ವಲ್ಪ ಇರಿ. ಎಲ್ಲರೂ ಈ ಪ್ರಾಜೆಕ್ಟ್ ಬಗ್ಗೆ ಈ ಸದನದಲ್ಲಿ ಒಮ್ಮತದ ಅಭಿಪ್ರಾಯಕ್ಕೆ ಬಂದಿದ್ದೀರಿ. ಇಲ್ಲಿ ಹೈಕೋರ್ಟ್‌ನ ಜಡ್ಜ್‌ಮೆಂಟ್ ಏನಿದೆ, ಅದರ ಬಗ್ಗೆ ಈ ಸದನದ ತೀರ್ಮಾನಕ್ಕೆ ಮುಂದೆ ಬರೋಣ, ಮಾತನಾಡುತ್ತೇನೆ. ಇದೆಲ್ಲಾ ಮುಗಿದ ಮೇಲೆ ಮಾತನಾಡುತ್ತೇನೆ. The Government would make its best efforts to get the necessary laws enacted or amendments carried out to achieve the purposes of the project. The contract does not promise to do anything that is unlawful. The power of the Legislature to enact laws within the sphere allotted to it under the different lists under VII schedule.. ಇದನ್ನು ಆಗಲೇ ಓದಿದ್ದೇನೆ. ಮತ್ತೆ repeat ಮಾಡುವುದು ಬೇಡ. ನಮಗೆ ಏನು ಕೋರ್ಟ್‌ನಿಂದ ಛೀಮಾರಿ ಹಾಕಿಬಿಟ್ಟಿದ್ದಾರೆ, ಮಾಧುಸ್ವಾಮಿಯವರಿಗೆ, ಶ್ರೀರಾಮರೆಡ್ಡಿಯವರಿಗೆ ಇವೊತ್ತು cost bear ಮಾಡಬೇಕೆಂದು ಹೇಳಿಬಿಟ್ಟಿದ್ದಾರೆ, ಏನೋ ಅವಮಾನವಾಯಿತು ಎಂಬ ಒಂದು ಮಾತನ್ನು ಹೇಳಿದರು. ಇದನ್ನು

ಅವಮಾನ ಎಂದು ಹೇಳಿದರೆ, ನಮ್ಮ ಜನರಿಗೋಸ್ಕರ ನಾವು ಅದನ್ನು ಸಹಿಸಿಕೊಳ್ಳುವುದಕ್ಕೆ ಸಿದ್ಧರಿದ್ದೇವೆ. ನಾನು ಈ ಸಂದರ್ಭದಲ್ಲಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಅವರಿಗೇನೂ ಇದರ ಅವಶ್ಯಕತೆ ಇರಲಿಲ್ಲ. ಆದರೆ, ಇವರು ಸದನದ ಸದಸ್ಯರಾಗಿ ರಾಜ್ಯದ ಹಲವಾರು ವಿಷಯಗಳು ಬಂದಾಗ ಪ್ರಮುಖವಾಗಿ ಚರ್ಚೆ ಮಾಡುತ್ತಾರೆ, ಕೆಲವು ಸಲ ನಮ್ಮ ವಿರುದ್ಧವಾಗಿಯೂ ಬಹಳ ಕಠಿಣವಾಗಿ ಪದಗಳನ್ನು ಉಪಯೋಗ ಮಾಡುತ್ತಾರೆ. ಅದನ್ನು ನಾನು ಸ್ವೀಕಾರ ಮಾಡಲು ಸಿದ್ಧವಾಗಿದ್ದೇನೆ. ಅದರ ಬಗ್ಗೆ ನಾನು ಈ ಸಂದರ್ಭದಲ್ಲಿ, "ಏನಪ್ಪಾ, ನಮ್ಮ ವಿರುದ್ಧ ಇಷ್ಟೊಂದು ಮಾತನಾಡುತ್ತಾರಲ್ಲಾ" ಎಂದು ಸಣ್ಣತನದಲ್ಲಿ ಹೋಗುವುದಕ್ಕೆ ನಾನು ಇಷ್ಟಪಡುವುದಿಲ್ಲ. ಅಧ್ಯಕ್ಷರೆ, ಒಂದು tripartite agreement ಆಗುತ್ತದೆ. ತ್ರಿಪಕ್ಷೀಯ ಒಪ್ಪಂದ. ಸರ್ಕಾರಕ್ಕೆ ಅಧಿಕಾರಿಗಳು ಪಕ್ಕಾ ವಂಚಿಸತಕ್ಕಂಥ ಒಂದು ಅಗ್ರಿಮೆಂಟ್ ಇದಾಗಿದೆ. ರಾಜ್ಯದ ಉಚ್ಚ ನ್ಯಾಯಾಲಯದ ತೀರ್ಪನ್ನು ಉಲ್ಲಂಘಿಸಿ, ಮೂಲ ಒಪ್ಪಂದವನ್ನೂ ಇಂಟರ್‌ಚೇಂಜ್‌ಗಳಲ್ಲೂ ಭೂಮಿಯನ್ನು ಮಾರಾಟ ಮಾಡುವುದಕ್ಕೆ ಅವಕಾಶ ನೀಡುತ್ತಾರೆ. ಅವರಿಗೆ ಅವಕಾಶ ಕೊಡುತ್ತಾರೆ. ಅಧ್ಯಕ್ಷರೇ ಆ ಕುರಿತು ಮಾಹಿತಿಗಳೆಲ್ಲವೂ ಇಲ್ಲಿದೆ. ಇದೆಲ್ಲವನ್ನೂ ನಿಮಗೇ ಕೊಟ್ಟುಬಿಡುತ್ತೇನೆ. ಓದಬೇಕೇ?

ಅಧ್ಯಕ್ಷರು : ಓದಿ. ಏಕೆಂದರೆ, ಯಾವಾಗ, ಏನು ಎಂಬುದೆಲ್ಲಾ ಅರ್ಥವಾಗಬೇಕಲ್ಲಾ.

Sri H.D. Kumaaraswamy : This agreement is made and executed on this 8th day of August 2002 at Bangalore. The Governor of Karnataka actisng through the Secretary to the Government, Public Works Department, Government of Karnataka hereinafter referred to as Government of Karnataka with expression shall unless repugnant to the context be denied to include its successor..." in between Nandi Infrastructure and Governor of Karnataka. ಇದಕ್ಕೆ ಸಹಿ ಹಾಕುವಂತಹವರು ಯಾರು? ತಲ್ಲೂರ್ ಎಂಬ ಕಾರ್ಯದರ್ಶಿ. ನಾನು ಎಲ್ಲವನ್ನೂ ಪೂರ್ಣವಾಗಿ ಓದುವುದಕ್ಕೆ ಹೋಗುವುದಿಲ್ಲ. ಕೆಲವು ಯಾವ್ಯಾವ ಪಾಯಿಂಟ್ಸ್ ಬೇಕೋ, ಅದನ್ನು ಮಾತ್ರ ನಿಮ್ಮ ಗಮನಕ್ಕೆ ತರುತ್ತೇನೆ. Stage one of the infrastructure corridor...

ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ : 8ನೇ ಆಗಸ್ಟ್ 2002ರಲ್ಲಿ ಆ tripartite agreement ಆಗಿದೆ ಎಂದು ಏನು ಹೇಳುತ್ತಿದ್ದೀರಿ, ಆ ಅಗ್ರಿಮೆಂಟ್‌ಗೆ ನಮ್ಮ

ಸರ್ಕಾರದ ಪರವಾಗಿ ಯಾರು ರುಜು ಹಾಕಿದ್ದಾರೆ, ಮತ್ತು ಆ ಅಗ್ರಿಮೆಂಟ್‌ಗೆ ಕ್ಯಾಬಿನೆಟ್‌ನ ಕನ್ಸೆಂಟ್ ಅದಕ್ಕೆ ಇದೆಯೇ ಎನ್ನುವುದು ಮುಖ್ಯ. ಕನ್ಸೆಂಟ್ ಇಲ್ಲದೆ ಆ ಅಧಿಕಾರಿ ರುಜು ಮಾಡಿದ್ದಾರೆ, ಅಂತಹ ಅಧಿಕಾರಿ ವಿರುದ್ಧ ಪ್ರಸಿಕ್ಯೂಟ್ ಮಾಡಿ. ಆತನನ್ನು ತಾವು ಇನ್ನೂ ಏಕೆ ಬಿಟ್ಟುಕೊಂಡಿದ್ದೀರಿ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಅಧ್ಯಕ್ಷರೆ, ಇನ್ನೂ ಕೆಲವು ಕಡತಗಳು ಬರುತ್ತಲೇ ಇವೆ. ಇನ್ನೂ ಹುಡುಕುತ್ತಿದ್ದೇವೆ. Stage one of the infrastructure corridor shall mean toll road section 'A' Acquisition of the land and such rights, title and interests, therein as may be necessary for the above mentioned roads and development and sale of land basic development and sale of land. Basic development and sale of land including that at ten interchanges and township one. ಈಗ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದ ತೀರ್ಪನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಏಕೆಂದರೆ, ಸರ್ಕಾರಕ್ಕೆ ಛೀಮಾರಿ ಆಗಿಬಿಟ್ಟಿದೆ, ನಾವುಗಳು ಮತ್ತು ಸರ್ಕಾರ ನಡೆಸತಕ್ಕಂಥವರು ಏನಾದರೂ ಕೋರ್ಟ್‌ಗೆ ಹೋಗಿ ಕ್ಷಮಾಪಣೆ ಅರ್ಜಿ ಹಾಕಬೇಕಾಗಿ ಬರುತ್ತದೇನೋ ಎಂದು ಹೊರಗಡೆ ಕೆಲವರು ಲೆಕ್ಕ ಹಾಕುತ್ತಿರಬಹುದು. ಆ ತರಹದ ಭಯ ಏನೂ ಇಲ್ಲ. Once it is held that FWA is valid and proper that extent of land required for the project forms part thereof in terms of schedule I and finding in this regard having become final and conclusive, it is not open to the State Government, nor to J.C. Madhuswamy and others and not even to this Court to reopen those issues once over again. ಇದು ವಿಭಾಗೀಯ ಪೀಠದ ಜಡ್ಜ್‌ಮೆಂಟ್ ಮತ್ತು ಕಾಮೆಂಟ್ಸ್ ಆಗಿದೆ. Writ Petition Nos. 45334 and 48981 of 2004 are allowed directing the State of Karnataka and all its Instrumentalities including the Board to forthwith execute the project as conceived originally and upheld by this Court in Somashekar Reddy's case supra and implement FWA in letter and spirit consequently. ಇನ್ನೇನು ಕ್ಲೈಮ್ಯಾಕ್ಸ್ ಸೀನಿಗೆ ಬಂದುಬಿಡುತ್ತೇನೆ ಅಧ್ಯಕ್ಷರೆ, ಏಕೆಂದರೆ ಎಲ್ಲರಿಗೂ ಸ್ವಲ್ಪ ಬೇಜಾರಾಗಿರಬಹುದು, ಏನಪ್ಪಾ ಇಷ್ಟೊಂದು ಸಮಯ ತೆಗೆದುಕೊಳ್ಳುತ್ತಾರೆಂದು. ಆದುದರಿಂದ ಕ್ಲೈಮ್ಯಾಕ್ಸ್

ಸೀನ್‌ಗೆ ಬರುತ್ತಿದ್ದೇನೆ ಮಾನ್ಯ ಅಧ್ಯಕ್ಷರೆ. ನಾನು ಏಕೆ ಡೀಟೈಲ್ ಆಗಿ ಹೇಳುತ್ತಿದ್ದೇನೆ ಎಂದರೆ ಇದನ್ನು ಬಹಳ ಜನ ನೋಡಿರುವುದಿಲ್ಲ. ಏಕೆಂದರೆ ನಮ್ಮ ದೇಶಪಾಂಡೆಯವರು ಹೇಳಿದರು, ಪತ್ರಿಕೆಗೆ ಹೋಗುವುದು, ಟಿ.ವಿ.ಗೆ ಹೋಗುವುದು ಇವೆಲ್ಲಾ ನಿಲ್ಲಿಸಬೇಕು ಎಂದರು. ಅದಕ್ಕಾಗಿಯೇ ನಾವು ಅಂತಿಮವಾಗಿ ನಿಲ್ಲಿಸಿಬಿಡೋಣ. ಇವೆಲ್ಲಾ ಬೇಡ ಎಂದೇ ಇವೊತ್ತು ಸದನದ ಮುಂದೆ ಬಂದಿರುವುದು. ಇನ್ನು ಮುಂದಕ್ಕೆ ಪಬ್ಲಿಕ್‌ಗೆ ಹೋಗುವುದೋ ಬೇಡವೋ ಎಂದು ತೀರ್ಮಾನ ಮಾಡಿಬಿಡೋಣ ಅಧ್ಯಕ್ಷರೇ. ನೀವು ಏನು ಹೇಳುತ್ತೀರೋ ಅದಕ್ಕೆ ತಲೆಬಾಗುತ್ತೇವೆ. Thus thrown exhaustive consideration of all the background material and documents presented to it, the High Court dismissed the Writ Petition by holding against the petitioner and all the contentions urged, the judgment in Somashekar Reddy was supra challenged before this Court but, was dismissed in limine on 26.03.1999. The judgment is Somashekar Reddy supra thus reached finality. ಏನೋ ಆಗಿಹೋಯ್ತು ಸುಪ್ರೀಂಕೋರ್ಟ್‌ನಲ್ಲಿ, ಏನೋ ಆಗೋಯ್ತು ಎಂದು ಯಾರೂ ಏನೂ ಗಾಬರಿಯಾಗಬೇಕಾಗಿಲ್ಲ. ಅವರು ನಮಗೆ ಬಿಟ್ಟಿದ್ದಾರೆ ತೀರ್ಮಾನ ಮಾಡಲು. The learned Single Judge erred in assuming that the lands acquired from places away from the main alignment of the road were not a part of the project and that is the reason it was persuaded to hold that only 60% of the land acquisition was justified because it pertained to the land acquired for the main alignment of the high way. This in the view of the Division Bench and in our view was entirely erroneous. The Division Bench was right in taking the view that the project was an integrated project intended for public purpose and irrespective of where the land was situated so long as it arose from the terms of the FWA there was no question of characterising it is unconnected with the public purpose. We are therefore, in agreement with the finding of the High Court on this issue. In the result, final orders. We find that the judgment of the High Court dated 03.05.2005 impugned before us in the main matter is not

liable to be interfered with ಇವಿಷ್ಟು ಹೈಕೋರ್ಟ್ ಹಾಗೂ ಸುಪ್ರೀಂಕೋರ್ಟಿನ ತೀರ್ಮಾನಗಳಾಗಿದೆ ಅಧ್ಯಕ್ಷರೆ. ನಾವು ಕೋರ್ಟ್‌ಗೆ ತಲೆಬಾಗೋಣ. ಏಕೆಂದರೆ ನಿನ್ನೆ ಕೆಲವರು ರಾಜಾತೀಥ್ಯ ಕೊಟ್ಟರು, ಚೀಫ್ ಸೆಕ್ರೆಟರಿಯವರು, ಇದು ಅವಶ್ಯಕತೆ ಇತ್ತೇ, ಮೊದಲು ಅವರ ಬಗ್ಗೆ ಆ್ಯಕ್ಷನ್ ತೆಗೆದು ಕೊಳ್ಳಬೇಕೆಂದು ನಮ್ಮ ವಾಟಾಳ್‌ನಾಗರಾಜ್‌ರವರು ಸ್ವಲ್ಪ ಸಿಟ್ಟಿನಲ್ಲಿ ಬಿರುಸಿನಲ್ಲಿಯೇ ಮಾತನಾಡಿದರು. ಆದರೆ ನಾವು ಕೋರ್ಟ್ ಆರ್ಡ್‌ರನ್ನು ಇವೊತ್ತು ಗೌರವಯುತವಾಗಿಯೇ ಕಾಣಬೇಕಾಗುತ್ತದೆ. ಇವೊತ್ತು ತರಾತುರಿಯಲ್ಲಿ ಇಲ್ಲಿ ಚರ್ಚೆ ನಡೆಯುತ್ತಿರತಕ್ಕಂಥ ಸಂದರ್ಭದಲ್ಲಿ ರಿವ್ಯೂ ಪಿಟಿಶನ್‌ನ್ನು ಹಾಕುವ ಅವಶ್ಯಕತೆ ಇತ್ತೇ ಎಂದು ತಾವು ತಮ್ಮ ಭಾವನೆಗಳನ್ನು ಹೇಳಿದ್ದೀರಿ ಇವೊತ್ತು ಕೋಟ್ ಮುಂದೆ ಆ ಸಂದರ್ಭದಲ್ಲಿ ಕಾನೂನು ತಜ್ಞರ ಸಲಹೆಯ ಮೇರೆಗೆ ಆ ತೀರ್ಮಾನಕ್ಕೆ ಬಂದಿದ್ದೇವೆ; ಈ ಸುಪ್ರೀಂಕೋರ್ಟಿನ ತೀರ್ಪು ಬಂದನಂತರ ಅವರು ನನಗೆ ಒಂದು ಪತ್ರವನ್ನು ಬರೆಯುತ್ತಾರೆ. ಅದೆಲ್ಲವನ್ನೂ ಇಲ್ಲಿ ಓದುವುದಕ್ಕೆ ಇಲ್ಲಿ ಆಗುವುದಿಲ್ಲ. ಏಕೆಂದರೆ ಬಹಳ ಪುಟಗಳಿವೆ. ನಮ್ಮ ರಾಯರೆಡ್ಡಿಯವರಿಗೂ ಗೊತ್ತಿದೆ ನೋಡಿ. ಅದೆಲ್ಲವನ್ನೂ ಓದುವುದಕ್ಕೆ ಹೋಗುವುದಿಲ್ಲ. ಅದಕ್ಕೆ ನಮ್ಮ ಪಿಡಬ್ಲ್ಯೂಡಿ ಸೆಕ್ರೆಟರಿಯವರಿಗೆ, ನಾವು ಏಕಪ್ಪಾ ಕೋರ್ಟ್‌ಗೆ ವಿರುದ್ಧವಾಗಿ ಹೋಗಿ ತಲೆಬಾಗಲಿಲ್ಲ ಎಂದು ಹೇಳಿ ಕೋರ್ಟ್‌ಗೆ ನಮ್ಮ ಬಗ್ಗೆ, ನಮ್ಮ ರಾಜ್ಯದ ಬಗ್ಗೆ ತಪ್ಪು ಅಭಿಪ್ರಾಯ ಬರಬಾರದು ಎನ್ನುವ ದೃಷ್ಟಿಯಿಂದ ನಾವು ಅವರಿಗೆ ಲಿಟರ್ ಬರಯುತ್ತೇವೆ. ಅವರಿಗೆ ಲೆಟರ್ ಬರೆದು ಫೇಸ್ (1) ಕ್ಕೆ ನೀವು ಏನು ಕೆಲಸ ಮಾಡಬೇಕೋ ಆ ಕೆಲಸವನ್ನು ನೀವು ಮೊಡಲು ಬನ್ನಿ ನೀವು ತೆಗೆದುಕೊಂಡು ಹೋಗಿ ನೀವು ಕೆಲಸ ಶುರು ಮಾಡಿ ಎಂದು ಹೇಳಿದೆವು. ಅದಕ್ಕೆ ಅವರು ನಮಗೆ ಸಂಪೂರ್ಣ ಲ್ಯಾಂಡ್ ಕೊಡಿ, ಆಮೇಲೆ ನಾವು ಕೆಲಸವನ್ನು ಶುರು ಮಾಡುತ್ತೇವೆ ಎಂದು ಬರೆಯುತ್ತಾರೆ. ನಿನ್ನೆ ಪಾಪ ವಾಟಾಳ್ ನಾಗರಾಜ್‌ರವರು ಹೇಳಿದರು, ಕೆಲವು ವಿಷಯಗಳ ಬಗ್ಗೆ, ಇವೊತ್ತು ಕೆಲವು ಪತ್ರಿಕೆಗಳಲ್ಲಿ ಬಂದಿದೆ, ನಾನೇನೋ ಭೇಟಿ ಮಾಡಿ ಯಾವುದೋ ಒಂದು ಕಾಂಪ್ರಮೈಸ್ ಫಾರ್ಮುಲಾ ಹುಡುಕಿಬಿಟ್ಟಿದ್ದೇನೆ, ಎಂದು ಪಾಪ ಅವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ, ಇವೊತ್ತು ವೀಕರ್ಸ್ ಸೆಕ್ಷನ್‌ಗೆ ಇದರಲ್ಲಿ ಬರುವ ಪ್ರಾಫಿಟ್‌ನಲ್ಲಿ ನೀವು ಏನಾದರೂ ಒಂದು ಕಾರ್ಯಕ್ರಮವನ್ನು ಮಾಡಿಬಿಡಿ ಎಂದು ನಾನು ಅವರಿಗೆ ಹೇಳಿಬಿಟ್ಟಿದ್ದೇನಂತೆ, ಅದಕ್ಕೆ ನಾನು ಅದರ ಬಗ್ಗೆ ಗಮನ ಹರಿಸುತ್ತೇನೆ ಎಂದು ಏನೋ.. ಅವರಪ್ಪನ ಮನೆ ದುಡ್ಡು ತಂದು ಹಾಕುತ್ತಾನೆ ಇದಕ್ಕೆ ನಾನು ಕೊಡಲಿಕ್ಕೆ ಸಿದ್ಧನಿದ್ದೇನೆ, ಅದು ಯೋಚನೆ ಮಾಡುತ್ತಿದ್ದೇನೆ ಎಂದು ಇವೊತ್ತಿನ ಪತ್ರಿಕೆಯಲ್ಲಿ ಅವರು ಹೇಳಿರುವಂಥದ್ದನ್ನು ಬರೆದಿದ್ದಾರೆ. ಇವೆಲ್ಲಾ ಈಗ ಬೇಕಿಲ್ಲ.

ಕೋರ್ಟಿನ ತೀರ್ಪು ಬಂದಿದೆ. ಆ ತೀರ್ಮಾನಕ್ಕೆ ನಾವು ತಲೆಬಾಗಬೇಕಾಗಿದೆ, ಇವೊತ್ತು ಅವರಿಗೆ ಸಂಪೂರ್ಣ ಲ್ಯಾಂಡ್ ಬೇಕಂತೆ! ಅದನ್ನು ಕೊಟ್ಟಮೇಲೆ ಅವರು ರಸ್ತೆ ಮಾಡುತ್ತಾರಂತೆ! ನಿನ್ನೆಯೂ ಒಂದು ಹೇಳಿಕೆ ಬಂತು. ವಾಟಾಳ್ ನಾಗರಾಜ್‌ರವರು ಮರೆತುಬಿಟ್ಟರೇನೋ; ಅವರು ಅದನ್ನು ಹೇಳಲಿಲ್ಲ. ಮೈಸೂರಿನಲ್ಲಿ ಏನೋ ಇನ್ನು ಮೂರ್‍ನಾಲ್ಕು ದಿವಸಗಳಲ್ಲಿ ರಸ್ತೆ ಕೆಲಸವನ್ನು ಪ್ರಾರಂಭ ಮಾಡುತ್ತಾರಂತೆ. ಮೈಸೂರು ಕಡೆಯಿಂದ ಮಾಡುತ್ತಾರಂತೆ. ಈಗಾಗಲೇ ಬೆಂಗಳೂರು ಮುಗಿಸಿಯಾಯ್ತು, ಬೆಂಗಳೂರು ಅಭಿವೃದ್ದಿ ಮಾಡಿಯಾಯ್ತು ಇನ್ನು ಮೈಸೂರು ಅಭಿವೃದ್ಧಿ ಮಾಡುವುದಕ್ಕೆ ಹೊರಟಿದ್ದಾರೆ. ಅಲ್ಲಿಂದ ಪ್ರಾರಂಭ ಮಾಡುವುದಕ್ಕೆ. ರಿಯಲ್ ಎಸ್ಟೇಟ್ ಬಿಸಿನೆಸ್ ಮಾಡುವುದಕ್ಕೋ, ಅಥವಾ ಅಭಿವೃದ್ಧಿ ಮಾಡುವುದಕ್ಕೋ ಗೊತ್ತಿಲ್ಲ. ಇವರು ಏನು ಹೇಳುತ್ತಾರೆ ನಿನ್ನೆ; ಈಗ ಯಾವ ಮಟ್ಟಕ್ಕೆ ಬಂದಿದ್ದಾರೆ ಎಂದರೆ, ಅದು ಅಶೋಕ್ ಖೇಣಿ ಹೇಳಿರುವುದಲ್ಲ, ಅವನ ವಕ್ತಾರ ಇನ್ನೊಬ್ಬನಂತೆ; ನಮಗೂ ಸರ್ಕಾರಕ್ಕೂ ಸಂಬಂಧವಿಲ್ಲ, ನಾವು ಸರ್ಕಾರದ ಹತ್ತಿರ ಏತಕ್ಕೆಭೂಮಿ ಕೊಡಿ ಎಂದು ಕೇಳಬೇಕು, ನಾವು ಕೆಲಸ ಪ್ರಾರಂಭ ಮಾಡುತ್ತೇವೆ, ನಮಗೂ ಸರ್ಕಾರಕ್ಕೂ ಸಂಬಂಧವಿಲ್ಲವೆಂದು ಹೇಳಿಕೆಯನ್ನು ಕೊಡುತ್ತಾರೆ. ವಾಟಾಳ್‌ರವರೇ, ನಿನ್ನೆ ಇದನ್ನು ನೀವು ಹೇಳುತ್ತೀರೇನೋ ಎಂದು ಕೊಂಡಿದ್ದೆ. ಆದರೆ ನಿನ್ನೆ ನೀವು ಅದನ್ನು ಹೇಳಲಿಲ್ಲ. ಈ ಮಟ್ಟಕ್ಕೆ ಆ ಕಂಪನಿಯ ಕೆಲಸಗಾರರೂ ಕೂಡ ಬಂದಿದ್ದಾರೆ. ಅವರು ಬರೆದಿರುವ ಲಿಟರ್‌ಗಳನ್ನೆಲ್ಲಾ ಇಟ್ಟಿದ್ದೇನೆ. ಈಗ ತಾವು ಒಂದು ಮಾತನ್ನು ಹೇಳಿದಿರಿ. ಬೆಂಗಳೂರು ಸುತ್ತಮುತ್ತ ನಾವು ಲ್ಯಾಂಡ್ ಅಷ್ಟು ಕೊಟ್ಟಿಲ್ಲ ಎಂದು ಹೇಳಿದಿರಿ. ನಾವು ಈಗಾಗಲೇ ಕೊಟ್ಟಿರತಕ್ಕಂಥದ್ದು ಏನು ಅವರು ಕೋರ್ಟ್‌ನಲ್ಲಿ ಕಮಿಟ್ ಆಗಿರುತ್ತಾರಲ್ಲಾ; ಅವರೇ ಸಬ್‌ಮಿಶನ್ ಹಾಕಿದ್ದಾರಲ್ಲಾ, ಅದಕ್ಕಿಂತ 425 ಎಕರೆ ಲ್ಯಾಂಡ್‌ನ್ನು ಈ ಫಸ್ಟ್ ಫೇಸ್‌ನಲ್ಲಿ ಕೊಟ್ಟಿದ್ದೇವೆ. ಹ್ಯಾಂಡ್ ಓವರ್ ಮಾಡಿದ್ದೇವೆ. ಕೇವಲ ನೋಟಿಫೈ ಪ್ರಶ್ನೆಯಲ್ಲ.

ಶ್ರೀ ವಾಟಾಳ್ ನಾಗರಾಜ್ : ನೋಟಿಫೈ ಆಗಿದ್ದೆಷ್ಟು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ನೋಟಿಫೈ ಪ್ರಶ್ನೆಯಲ್ಲ; ಆಮೇಲೆ ಸ್ವಲ್ಪ ಏನಾಯಿತು ಎಂದು ನಿಮ್ಮ ಗಮನಕ್ಕೆ ಬಂದಿಲ್ಲ ಈ ಬಗ್ಗೆ. ಫೇಸ್ (1) ಬಗ್ಗೆ 2471 ಎಕರೆ ಎಂದು ಇವರೇ ಕಮಿಟ್ ಆಗಿರುವುದು. ಆದರೆ ನಮ್ಮಿಂದ ಲ್ಯಾಂಡ್ ತೆಗೆದುಕೊಂಡಿರುವುದು 2896 ಎಕರೆ ತೆಗೆದುಕೊಂಡಿರುವುದು.

ಶ್ರೀ ಜೆ.ಪಿ. ಶ್ರೀರಾಮರೆಡ್ಡಿ : ಈಗಾಗಲೇ ಸೋಮಶೇಖರ ರೆಡ್ಡಿ ಕೇಸ್‌ನಲ್ಲಿ 4271 ಎಕರೆ ಕೊಡಬೇಕೆಂದು ತೀರ್ಮಾನವಾಗಿದೆ. ಆದರೆ ಈಗಾಗಲೇ 4800 ಚಿಲ್ಲರೆ ಎಕರೆ ಈಗಾಗಲೇ ಅವರಿಗೆ ಕೊಟ್ಟಿದ್ದಾರೆ. ಈಗಾಗಲೇ 430 ಎಕರೆಯಷ್ಟು ಜಮೀನನ್ನು

ಕೋರ್ಟ್ ಜಡ್ಜ್‌ಮೆಂಟ್‌ನಲ್ಲಿ ಹೇಳಿರುವುದಕ್ಕಿಂತ ಹೆಚ್ಚಿಗೆ ಭೂಮಿಯನ್ನು ಕೊಟ್ಟಿದ್ದಾರೆ. He is in possession... ಯುಟಿಐ ಅಪ್ರೈಸಲ್‌ನಲ್ಲಿ ಆತನೇ ಹೇಳಿದ್ದಾನೆ. UTI, Financial Advisor to that NICE Company has given a detailed statement. ಎಲ್ಲೆಲ್ಲಿ ಏನೇನು ಎಂದು, ಆ ಸ್ಟೇಟ್‌ಮೆಂಟ್‌ನಲ್ಲಿ 432 ಎಕರೆ ಭೂಮಿ ಹೆಚ್ಚಿಗೆ ಬಂದಿದೆ ಎಂದು ಆತನೇ ಹೇಳಿದ್ದಾನೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಮುಖ್ಯಮಂತ್ರಿಗಳೆ, ನನ್ನ information ಪ್ರಕಾರ, ತಾವು records ನೋಡಿ ಹೇಳಬಹುದು, 07.10.1999ರ ಒಂದು G.O. ಪ್ರಕಾರ ಅವರಿಗೆ ಏನು Government land ಐದೂವರೆ-ಆರು ಸಾವಿರ ಕೊಡಬೇಕಾಗಿತ್ತಲ್ಲಾ, ಅದರಲ್ಲಿ 4,900 ಚಿಲ್ಲತೆ land ಕೊಟ್ಟಿದ್ದಾರೆ. Bangalore (North), Bangalore (South), Mandya Ramanagara, Srirangapatna ಇಲ್ಲೆಲ್ಲಾ ಕೊಟ್ಟಿದ್ದಾರೆ. ಅದು ತಾವು ಚೆಕ್ ಮಾಡಿ ನೋಡಿ. ಅದರಲ್ಲಿ Government land ಎಷ್ಟಿದೆ? ಯಾವಾಗ ಕೊಟ್ಟಿದ್ದಾರೆ ಎಂಬುದನ್ನು ನೀವು ನೋಡಬಹುದು. Private land ಕೊಡಬೇಕಾದರೆ ಅದು acquire ಆಗಬೇಕಲ್ಲವೇ? 28(4) ಆಗಬೇಕು, possession ತೆಗೆದುಕೊಳ್ಳಬೇಕು, ಅದರಲ್ಲಿ ನನ್ನ information ಪ್ರಕಾರ, 2,500 ಚಿಲ್ಲರೆ 28(4) ಆಗಿ, 1035 ಎಕರೆ ಜಮೀನು possession ತೆಗೆದುಕೊಂಡು, 70-80% consent ಇರಬಹುದು, 20% through Act ಇರಬಹುದು. 1,035 ಎಕರೆ private land ಅನ್ನು ಅವರಿಗೆ hand over ಮಾಡಿದ್ದಾರೆ. ಬಾಕಿ land ಏನು possession ನಲ್ಲಿದೆಯೋ, ಅದು ಇನ್ನೂ KIADB ಕಡೆಗೆ ಇದೆ. ತಾವು verify ಮಾಡಿಸಿ ಹೇಳಬೇಕು. ಮತ್ತೊಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅವರಿಗೆ ಶ್ರೀರಂಗಪಟ್ಟಣದಲ್ಲಿ ಸರ್ಕಾರಿ ಲ್ಯಾಂಡ್ 532 ಎಕರೆಯನ್ನು ಕೊಟ್ಟಿದ್ದರು. ಆಗ ಅವರಿಗೆ ಶ್ರೀರಂಗಪಟ್ಟಣದಲ್ಲಿ ಆ ಲ್ಯಾಂಡ್ ಸಿಕ್ಕಿಲ್ಲ. ಹಾಗಾಗಿ ಕೆಳಗಿನಿಂದ ಅವರೊಂದು proposal ತೆಗೆದುಕೊಂಡು ಬಂದರು. ಶ್ರೀರಂಗಪಟ್ಟಣದಲ್ಲಿ forest land ಅಥವಾ ಮತ್ತೊಂದು ಸಿಗುತ್ತಿಲ್ಲ, ಹಾಗಾಗಿ ಅದರ ಬದಲು ನಮಗೆ ಬೆಂಗಳೂರು (ಅರ್ಬನ್) ಡಿಸ್ಟ್ರಿಕ್ಟ್‌ನಲ್ಲಿ ಕೊಡಿ ಎಂದರು. ಆ request ನಮ್ಮ ಮುಂದೆ ಬಂದಾಗ, ನಾವು ಅದನ್ನು reject ಮಾಡಿದೆವು. ಅದನ್ನು reject ಮಾಡಿ, ಅದನ್ನು ನಿಮಗೆ ಕೊಡಲಿಕ್ಕಾಗುವುದಿಲ್ಲ, Srirangapatna lands are different, Bangalore's lands are different ಎಂದು ಹೇಳಿದೆವು. ಅಷ್ಟೇ ಅಲ್ಲ, ಸಿಕ್ಕರೆ ಎಲ್ಲಿ ಕೊಟ್ಟಿದ್ದೇವೋ, ಅಲ್ಲಿಯೇ ತೆಗೆದುಕೊಳ್ಳಿ, ಸಿಕ್ಕಲಿಲ್ಲ ಎಂದರೆ

you forego the lands ಎಂದು orders ಮಾಡಿದ್ದೆವು. ತಾವು ರೆಕಾರ್ಡ್ ತೆಗೆದು ನೋಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : I Phaseನಲ್ಲಿ Government land ಕೊಟ್ಟಿರುವಂಥಾದ್ದು 1117 ಎಕರೆ. Private land ಕೊಟ್ಟಿರುವಂಥಾದ್ದು 1779 ಎಕರೆ, ಅಂದರೆ total 2896 ಎಕರೆ ಬರುತ್ತದೆ. ಅದರಲ್ಲಿ 430 ಎಕರೆ excess land ಕೊಟ್ಟಿದ್ದೇವೆ. ಮಾನ್ಯ ಅಧ್ಯಕ್ಷರೆ, ಈಗ ನಮ್ಮ ಎಲ್ಲಾ ಸದಸ್ಯರುಗಳು ಈ ಒಂದು projectನ ವಿಷಯದಲ್ಲಿ ಕೆಲವರು CBI enquiry ಆಗಬೇಕೆಂದು ಹೇಳುತ್ತಾರೆ, ಕೆಲವರು ನ್ಯಾಯಾಂಗ ತನಿಖೆ ಆಗಬೇಕೆಂದು ಹೇಳುತ್ತಾರೆ, ಅವರವರದೇ ಒಂದು ಭಾವನೆಗಳನ್ನು ಈ ಸಂದರ್ಭದಲ್ಲಿ ವ್ಯಕ್ತ ಪಡಿಸಿದ್ದಾರೆ. ಇವತ್ತು ಸದನ ಒಂದು ತೀರ್ಮಾನಕ್ಕೆ ಬರಬೇಕಾಗುತ್ತದೆ, ಇದರಲ್ಲಿ ನನ್ನದೇನೂ ಇಲ್ಲ. ಇದರಲ್ಲಿ ಆ ಪಕ್ಷ, ಈ ಪಕ್ಷ ಎಂದೇನಿಲ್ಲ. ಆ ದೃಷ್ಟಿಯಿಂದಲೇ ನಾನು ಇವತ್ತು ಯಾರ ಮೇಲೂ ಲೋಪ ಹೊರಿಸಲಿಕ್ಕೆ ಹೋಗಿಲ್ಲ. ಇದು ಯಾರಿಂದ ಆಯಿತು? ಏಕೆ ಆಯಿತು? ಮುಂದೆ ತನಿಖೆ ನಡೆಸತಕ್ಕಂಥದ್ದಕ್ಕೆ ಬೇಕಾದರೆ ಒಂದು ತೀರ್ಮಾನ ಮಾಡೋಣ. ಏಕೆಂದರೆ, ಇದರ ಬಗ್ಗೆ ತನಿಖೆ ನಡೆಸದೆ ಹೋದರೆ, ಇದು ಬಹುಶಃ ಶಾಸಕಾಂಗದ ಇತಿಹಾಸದಲ್ಲೇ ನಾವು ಒಂದು ದೊಡ್ಡ ಮಹಾನ್ ಅಪರಾಧ ಮಾಡತಕ್ಕಂಥ ಒಂದು ಸನ್ನಿವೇಶಕ್ಕೆ ನಾವೆಲ್ಲರೂ ಒಳಗಾಗುತ್ತೇವೆ. ಅದರಲ್ಲಿ ನನ್ನದೇನೂ ಎರಡನೇ ಮಾತಿಲ್ಲ. ಈಗ ಏನು ಬರೀ notify ಆಗಿರತಕ್ಕಂಥದ್ದು ಇವತ್ತು award ಕೊಡದೆ ಇರತಕ್ಕಂಥ ವಿಷಯವನ್ನೇನು ಇವತ್ತು ಚರ್ಚೆ ಮಾಡಿದ್ದೀರಿ ಅಂತಹವರಿಗೆ ಮತ್ತೆ ಏಕೆ ವಾಪಸ್ ಕೊಡಬಾರದು? ಎಂಬ ಬಗ್ಗೆ ಸದಸ್ಯರುಗಳು ಇವತ್ತು ಗಮನವನ್ನು ಸೆಳೆದಿದ್ದಾರೆ. ಅದೇ ರೀತಿ ನಮ್ಮ ಹಿರಿಯ ನಾಯಕರಾದ ಖರ್ಗೆ ಸಾಹೇಬರು ಅವರು ಮಾತನಾಡತಕ್ಕಂಥ ಸಂದರ್ಭದಲ್ಲಿ ಏನು 15 ಕಿ.ಮೀ. ಒಳಗೆ ಇರತಕ್ಕಂಥದ್ದನ್ನೂ ಸೇರಿಸಿ ಹಲವಾರು ವಿಷಯಗಳನ್ನೇನು ಇಲ್ಲಿ ಚರ್ಚೆ ಮಾಡಿದ್ದಾರೆ; ಇದೆಲ್ಲಾ ನಾನು ಗಮನದಲ್ಲಿಟ್ಟುಕೊಂಡು, ನಾನು ಒಂದು ಮಾತು ಹೇಳಲಿಕ್ಕೆ ಬಯಸುತ್ತೇನೆ. ಈಗ ನಮ್ಮ ಪಕ್ಷದಿಂದ ಏನು ಒಂದು advertisement ಹಾಕಿದರು. ಈ ಒಂದು project ನಲ್ಲಿ ಇರತಕ್ಕಂಥ ಭೂಮಿಯನ್ನು ಇವತ್ತು ನಾವು ಬೇರೆ ರೀತಿ ಅದಕ್ಕೆ ಒಂದು ತೀರ್ಮಾನ ಮಾಡಿದರೆ ಇವತ್ತು ಸರ್ಕಾರಕ್ಕೆ ಇಷ್ಟು ಹಣ ಬರುತ್ತದೆ ಎಂದು ಇವತ್ತೇನು ಪ್ರಚಾರಕ್ಕೆ ಹಾಕಿದ್ದಾರೆ ಎಂದು ಹೇಳಿದ್ದಾರೆ; ಇವತ್ತು ಸದನ, ಇದು ನನ್ನೊಬ್ಬನದಲ್ಲ ಇದರ ಜವಾಬ್ದಾರಿ, ಇವತ್ತು ಒಂದು ಪಕ್ಷದ ಜವಾಬ್ದಾರಿ ಅಲ್ಲ. ಇಲ್ಲಿ ಎಲ್ಲಾ 224 ಜನ ಸದಸ್ಯರ ಜವಾಬ್ದಾರಿಯೂ ಕೂಡ ಇದೆ. ನಾನು ಇವತ್ತು 224 ಜನ ಸದಸ್ಯರನ್ನೂ ಕೂಡ ಅಭಿನಂದಿಸಲಿಕ್ಕೆ ಬಯಸುತ್ತೇನೆ. ಕಳೆದ ಎಂಟು-ಹತ್ತು

ದಿವಸಗಳಿಂದ ಇದರ ಬಗ್ಗೆ ಆಗಿರತಕ್ಕಂಥ ತಪ್ಪುಗಳ ಬಗ್ಗೆ ಎಲ್ಲಾ ಒಕ್ಕೊರಲಿನಿಂದಲೇ ಇವತ್ತು ಮಾತನಾಡಿದ್ದಾರೆ. ಅದರಲ್ಲಿ ಯಾರ ಒಂದು ಭಿನ್ನಾಭಿಪ್ರಾಯಗಳೂ ಕೂಡ ಇಲ್ಲ. ಈ ರಾಜ್ಯದ ನೆಲ ಮತ್ತು ಜಲದ ಸಮಸ್ಯೆ ಬಂದಾಗ, ಸರ್ವ ಪಕ್ಷಗಳ ಸಭೆಯನ್ನು ಕರೆದು, ಸರ್ವ ಪಕ್ಷಗಳು ಏನು ಒಟ್ಟಾಗಿ ಒಂದು ನಿರ್ಧಾರಕ್ಕೆ ಬರಬೇಕು ಎಂದು ತೀರ್ಮಾನಗಳನ್ನು ಮಾಡಿರತಕ್ಕಂಥ ಹಿಂದಿನ ಪ್ರಸಂಗಗಳು ಇವೆ, ನಾನು ಇವತ್ತು ಎಲ್ಲಾ ಸರ್ವಪಕ್ಷಗಳ ಮುಖಂಡರುಗಳಿಗೆ ನಾನು ಈ ಸಂದರ್ಭದಲ್ಲಿ ತಮ್ಮ ಮುಖಾಂತರ ಮನವಿ ಮಾಡಿಕೊಳ್ಳುತ್ತೇನೆ. ಎಲ್ಲಾ ಒಗ್ಗಟ್ಟಾಗಿ ಕುಳಿತು ಒಂದು ತೀರ್ಮಾನಕ್ಕೆ ಬರೋಣ. ಇದರಲ್ಲಿ ಒಂದು ಪಕ್ಷಕ್ಕೆ credit ಹೋಗುವುದು ಬೇಡ. ಇವತ್ತು ನಾವು ತೆಗೆದುಕೊಳ್ಳತಕ್ಕಂಥ ತೀರ್ಮಾನದ ಯಶಸ್ಸು ಮತ್ತು ಆ ಗೌರವ ಈ 224 ಜನ ಸದಸ್ಯರಿಗೂ ಹೋಗಲಿ ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ: ಇವತ್ತು ನಮ್ಮ ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳುತ್ತಿದ್ದರು, ನಾನು ಕೊನೆಯ ಉಸಿರಿರುವವರೆಗೂ, ಈ ಪ್ರಾಜೆಕ್ಟ್ ಆದರೂ ಆ ರಸ್ತೆಯಲ್ಲಿ ನಾನು ಮಾತ್ರ ಹೋಗುವುದಿಲ್ಲ, ನಾನು ಅಲ್ಲಿ ಹೋದರೆ ನನಗೆ ಕರೆಂಟ್ ಹೊಡೆಯುತ್ತದೆ. ನಾನು ಯಾವುದೇ ಕಾರಣಕ್ಕೂ ಅಲ್ಲಿ ಹೋಗುವುದಿಲ್ಲ ಎಂದು ಅವರು ಹೇಳಿದರು. ಇವತ್ತು ಬಡವರು ಯಾರೂ ಅಲ್ಲಿ ಹೋಗಲಿಕ್ಕಾಗುವುದಿಲ್ಲ ಎಂದೂ ಸಹ ಹೇಳಿದರು. ಯಾರೂ ಅವರ ಪರ್ಮಿಷನ್ ಇಲ್ಲದೆ ಹೋಗುವ ಹಾಗಿಲ್ಲ ಎಂದೇನು ನಾವು ಚರ್ಚೆ ಮಾಡಿದ್ದೇವೆ; ನಮ್ಮ ಒಂದು ಸಂಸ್ಕೃತಿಗೆ, ನಮ್ಮ ದೇಶದ ಒಂದು ಹಿನ್ನೆಲೆಯೊಳಗೆ, ಈ toll ಸಂಸ್ಕೃತಿ ನಮ್ಮಲ್ಲಿ work out ಆಗುವುದಿಲ್ಲ ಎಂದು ಕೆಲವರು ಹೇಳುತ್ತಿದ್ದರು. ಇವತ್ತು ಅಧ್ಯಕ್ಷರೆ, ಈ 11 ವರ್ಷಗಳಿಂದ, ಇವರು ನಿಜವಾಗಿಯೂ ರಸ್ತೆ ಕೆಲಸ ಮಾಡುವವರೇ ಆಗಿದ್ದರೆ, ಈ ಪ್ರಾಜೆಕ್ಟ್ ಬಗ್ಗೆ ಅವರಿಗೆ ನಿಜವಾಗಲೂ ಅವರಿಗೇನಾದರೂ commitment ಇದ್ದಿದ್ದರೆ ಬಹುಶಃ 11 ವರ್ಷ, ವರ್ಷ ವರ್ಷಕ್ಕೂ ಅವರಿಗೆ ಬೇಕಾದಂತೆ ಇವತ್ತು modificationಗಳನ್ನು ಮಾಡಿಸಿಕೊಳ್ಳತಕ್ಕಂಥ ಕೆಲಸವನ್ನು ಮಾಡುತ್ತಿರಲಿಲ್ಲ. ಅವರ ಉದ್ದೇಶವೇ ಬೇರೆಯದು. ಈ 11 ವರ್ಷದ ಕಡತಗಳು ಏನು ಹೇಳುತ್ತವೆ, ಅವರ ಉದ್ದೇಶವೇ ಬೇರೆ, ರಸ್ತೆ ಕೆಲಸವಲ್ಲ. ಮೊದಲು real estate business, ಆಮೇಲೆ ರಸ್ತೆ. ಅದಕ್ಕೆ ಇವರೇ ಬೇಕಿಲ್ಲ. ಈಗ ನೋಡಿ, ಮೊನ್ನೆ ರಾಷ್ಟ್ರದ ಪ್ರಧಾನ ಮಂತ್ರಿಗಳು ಏನು ಇವತ್ತು Electronic Cityಗೆ elevated ರಸ್ತೆಯೊಂದಕ್ಕೆ ಶಂಕುಸ್ಥಾಪನೆಯನ್ನು ನೆರವೇರಿಸಿದ್ದಾರೆ. ಇವತ್ತು ದೇಶಪಾಂಡೆಯವರು ಹೇಳಿದ ಹಾಗೆ, ಭಾರತ ಅಷ್ಟೇ ಏಕೆ, ಇಡೀ ವಿಶ್ವವೇ ಇವತ್ತು ಸಣ್ಣ ಹಳ್ಳಿಯ ತರಹ ಈವತ್ತು ಆಗಿದೆ. ಇವತ್ತು ಬಂಡವಾಳ ಹೂಡತಕ್ಕಂಥವರು ಬೆಂಗಳೂರಿಗೆ ಬರತಕ್ಕಂಥದ್ದರಲ್ಲಿ ಏನು

ಇವತ್ತು ಒತ್ತಾಸೆಯನ್ನು ಇಟ್ಟುಕೊಂಡಿದ್ದಾರೆ, ಅದರ ಬಗ್ಗೆಯೇ ಇವತ್ತು ಈ ಒಂದು ವಿಷಯಗಳಲ್ಲಿ ತೀರ್ಮಾನ ಮಾಡಬೇಕಾದರೆ, ಅವರಿಗೆ wrong message ಹೋಗಬಾರದು ಎಂತಲೂ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಾರೆ, ಇವತ್ತು ಪ್ರಧಾನ ಮಂತ್ರಿಗಳು ಏನು ಶಂಕುಸ್ಥಾಪನೆ ನೆರವೇರಿಸಿದರು. ಆ ರಸ್ತೆಗೆ ಸರ್ಕಾರದ ಖರ್ಚು ಏನೂ ಇಲ್ಲ. 450 ಕೋಟಿ ರೂಪಾಯಿಗಳನ್ನು ಅವರೇ ಖರ್ಚು ಮಾಡುತ್ತಿದ್ದಾರೆ. ಸರ್ಕಾರಕ್ಕೆ 18 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಕೇಂದ್ರ ಸರ್ಕಾರವನ್ನೂ ನಾವು ಈಗ ಕೇಳಬೇಕಾದಂತಹ ಪರಿಸ್ಥಿತಿ ಇಲ್ಲ, ರಾಜ್ಯ ಸರ್ಕಾರದ ಹಣವನ್ನೂ ಕೊಡಬೇಕಾಗಿಲ್ಲ. ಇವತ್ತು ಈ ಮಟ್ಟಕ್ಕೆ ನಾವು ಬೆಳೆದಿದ್ದೇವೆ. ಅದಕ್ಕೆ ಯಾರಿಂದ ಇವತ್ತು ನಾವು ಬೆಳೆದಿದ್ದೇವೆ ಎನ್ನುವುದರ ಬಗ್ಗೆಯೂ ಇವತ್ತು ಚರ್ಚೆ ಅನಗತ್ಯ. ಇವತ್ತು ಒಟ್ಟಿನಲ್ಲಿ ಕರ್ನಾಟಕದಲ್ಲಿ ಈ ಒಂದು ರೀತಿಯು ಬೆಳವಣಿಗೆಯನ್ನೇನು ನಾವು ಕಂಡಿದ್ದೇವೆ, ಇಂತಹ ಒಂದು ಪರಿಸ್ಥಿತಿಯೊಳಗೆ ಈ ಒಂದು ಪ್ರಾಜೆಕ್ಟ್ ಅನ್ನು ಸಂಪೂರ್ಣವಾಗಿ ಚಿನ್ನದ ತಟ್ಟೆಯಲ್ಲಿಟ್ಟು ಅವರಿಗೆ ಕೊಡಬೇಕೋ, ಇಲ್ಲವೇ ಬೇರೆ ರೀತಿಯಲ್ಲಿ ಆ ಪ್ರಾಜೆಕ್ಟ್ ಅನ್ನು ಮಾಡಬೇಕೋ? ಮೊನ್ನೆ ಮಾನ್ಯ ಡಿ.ಆರ್. ಪಾಟೀಲ್‌ರವರು ಒಂದು ದೊಡ್ಡ ಗಲಾಟೆಯನ್ನೇ ಮಾಡಿದರು. ಕೆಲವರು ನಮ್ಮ ಉತ್ತರ ಕರ್ನಾಟಕದ ಸದಸ್ಯರುಗಳೆಲ್ಲಾ ಅವತ್ತು ಇದ್ದರು. ಮೂಲಭೂತ ಸೌಕರ್ಯಗಳ ಬಗ್ಗೆ ಇವತ್ತೇನು ನಾವು ಕೆಲಸ ಮಾಡಲಿಕ್ಕೆ ಹೊರಟಿದ್ದೇವೆ, ನಗರ ವ್ಯಾಪ್ತಿಯ 25 ಪಟ್ಟಣಗಳಲ್ಲಿ, ನಮಗೆ 700 ಮಿಲಿಯನ್ ಡಾಲರ್ ಕೊಟ್ಟೇ ತೀರಬೇಕು, ನೀವು ಅದರ ಬಗ್ಗೆ ಇವತ್ತು ಇಲ್ಲಿ ಹೇಳದಿದ್ದರೆ ನಾವು ಈ ಸಭೆಯನ್ನು ಬಿಟ್ಟು ಹೋಗುವುದಿಲ್ಲ ಎಂದು ಬಹಳ ಗಡಸು ಧ್ವನಿಯಲ್ಲಿ ನಮಗೆ ಹೇಳುತ್ತಿದ್ದರು. 700 ಕೋಟಿ ರೂಪಾಯಿಗಳ ಬಗ್ಗೆ ಇವತ್ತೇ ನೀವು ತೀರ್ಮಾನ ಮಾಡಬೇಕು ಎಂದು ಆ ಭಾಗದ ಸದಸ್ಯರುಗಳು ಅಂದು ಸರ್ಕಾರವನ್ನೂ ಒತ್ತಾಯಿಸಿದ್ದರು. ಇವತ್ತು ರೈತರ ಬಗ್ಗೆ ಎಲ್ಲರೂ ಮಾತನಾಡುತ್ತಾರೆ, ಆದರೆ ultimately ರೈತರಿಗೆ ಏನೂ ಬರುವುದೇ ಇಲ್ಲ, ಅವನಿಗೆ ಏನೂ ಮಾಡುವುದೇ ಇಲ್ಲ ಎಂದು ನಮ್ಮ ಅಲ್ಲಿದ್ದ ಮಾನ್ಯ ಸದಸ್ಯರೊಬ್ಬರು ಸರ್ಕಾರಕ್ಕೆ ಹೇಳುತ್ತಿದ್ದರು. ಮಾಡೋಣ ಅಧ್ಯಕ್ಷರೆ, 5 ಸಾವಿರ ಕೋಟಿ ರೂಪಾಯಿಗಳ ಸಾಲ ಇವತ್ತು ರೈತರದ್ದು ಇದೆ, ಸಾಲ ತೀರಿಸೋಣ. ಒಂದು ಸಲ ರೈತರ ಸಾಲವನ್ನೆಲ್ಲಾ ಮನ್ನಾ ಮಾಡಿಬಿಡೋಣ. ಇವತ್ತು ನೀವು 224 ಜನ ಸದಸ್ಯರು ಇದರ ಬಗ್ಗೆ ತೀರ್ಮಾನ ಮಾಡಿ. ಇವತ್ತು ನೀವೇ credit ತೆಗೆದುಕೊಳ್ಳಿ. ಅಧ್ಯಕ್ಷರೇ, ಕಾಂಗ್ರೆಸ್ ಪಕ್ಷದವರಿಗೇ credit ಕೊಟ್ಟು ಬಿಡೋಣ. ನಮಗೆ ಬೇಡ credit ಇವತ್ತು 224 ಜನಕ್ಕೂ ಇದರ credit ಹೋಗಲಿ. 5 ಸಾವಿರ ಕೋಟಿ ರೂಪಾಯಿಗಳ ಸಾಲವನ್ನೂ ಒಟ್ಟಿಗೇ ಮನ್ನಾ ಮಾಡತಕ್ಕಂಥ ಕೆಲಸ, ರಾಷ್ಟ್ರದಲ್ಲೇ

ಒಂದು ಐತಿಹಾಸಿಕವಾದಂತಹ ನಿರ್ಧಾರವನ್ನು ಇವತ್ತು ಮಾಡೋಣ. ತಮಿಳುನಾಡಿನಲ್ಲಿ ಮಾನ್ಯ ಕರುಣಾನಿಧಿಯವರು ಘೋಷಣೆ ಮಾಡಿದ್ದಾರೆ. ಅದನ್ನು implement ಮಾಡುತ್ತಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಅದರ ಬಗ್ಗೆ ನಮ್ಮ ರಾಜೇಂದ್ರನ್‌ರವರೇ ನಮಗೆ ಹೇಳಬೇಕು, ಅವರು ತಮಿಳುನಾಡಿಗೆ ಹತ್ತಿರದಲ್ಲಿದ್ದಾರೆ. ಆ ತೀರ್ಮಾನವನ್ನೂ ಮಾಡೋಣ.

ಶ್ರೀ ಎಸ್. ರಾಜೇಂದ್ರನ್ : ನಾನು ಯಾವಾಗಲೂ ಕರ್ನಾಟಕದವನೇ ಸ್ವಾಮಿ. ತಮಿಳುನಾಡು ಬಗ್ಗೆ ನನಗೇನು ಸಂಬಂಧ ಇದೆ? ನನಗೆ ಏನಾದರೂ ಪ್ರೀತಿ ಇದ್ದರೆ ತಮಿಳುನಾಡು ಬಗ್ಗೆ ಹೇಳಬಹುದು. ನಾನು ಕರ್ನಾಟಕ ರಾಜ್ಯದಲ್ಲೇ ಹುಟ್ಟಿ ಬೆಳೆದು ಬಂದಿರುವ ಕೆಜಿಎಫ್‌ನವನು. ನಮಗೆ ಹತ್ತಿರದಲ್ಲಿ ತಮಿಳುನಾಡು ಮಾತ್ರವಲ್ಲ, ಆಂಧ್ರ ಕೂಡಾ ಇದೆ. ಹಾಗೆಂದು ನಾನು ಮಾನ್ಯ ಚಂದ್ರಬಾಬು ನಾಯ್ಡುರವರ ಬಳಿಗೆ ಹೋಗಲೇ? ಒಳ್ಳೇ ಕಥೆಯಾಯಿತಲ್ಲಾ ಇದು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಅದರ ಬಗ್ಗೆ ನಿಮಗೆ ಮಾಹಿತಿ ಇದೆಯೆ ಎಂದು ನಾನು ಕೇಳಿದೆ. ಸಾಲ ಮನ್ನಾ ಮಾಡುವ ವಿಷಯದಲ್ಲಿ ಮಾಹಿತಿ ನಿಮ್ಮ ಬಳಿ ಇದ್ದರೂ ಇರಬಹುದು, ನನಗಂತೂ ಅದರ ಬಗ್ಗೆ ಮಾಹಿತಿ ಬಂದಿಲ್ಲ ಎಂದು ನಾನು ಹೇಳಿದೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಮುಖ್ಯಮಂತ್ರಿಗಳೇ, ಈಗ ತಾವು ಹೇಳಿದ್ದಕ್ಕೆ ಬಹುಶಃ ಎಲ್ಲಾ ಸದಸ್ಯರೂ ಒಪ್ಪುತ್ತಾರೆ, ಯಾರೂ ಕೂಡ ಇದಕ್ಕೆ ಅಡ್ಡ ಬರುವುದಿಲ್ಲ. ಇದಕ್ಕೆ ನಿಮ್ಮ ಜಗದೀಶ್ ಶೆಟ್ಟರ್‌ರವರು ಒಪ್ಪುತ್ತಾರೋ, ಹೇಗೆ ಎಂಬುದನ್ನು ನೋಡಿ. ಅದನ್ನು ನೋಡಿ ತಾವು ಅದರ ಬಗ್ಗೆ ತಂದು ಬಿಡಿ, ನಾವೆಲ್ಲರೂ ಅದರ ಬಗ್ಗೆ ಒಪ್ಪಿಕೊಳ್ಳುತ್ತೇವೆ. ನಮ್ಮ ಪಕ್ಷದವರಂತೂ ಆ ತಿದ್ದುಪಡಿಯನ್ನು ತನ್ನಿ ಒಪ್ಪಿಕೊಳ್ಳುತ್ತೇವೆಂದು ಅವತ್ತೇ ಹೇಳಿಬಿಟ್ಟಿದ್ದಾರೆ.

ಶ್ರೀ **ಜಗದೀಶ್ ಶೆಟ್ಟರ್ (ಕಂದಾಯ ಮಂತ್ರಿಗಳು)** : ಮಾನ್ಯ ಅಧ್ಯಕ್ಷರೆ, ಮಾನ್ಯ ಎಸ್.ಎಸ್. ಪಾಟೀಲ್‌ರವರು ನನ್ನ ಹೆಸರನ್ನು ಪ್ರಸ್ತಾಪ ಮಾಡಿದರು, ಏಕೆ ಪ್ರಸ್ತಾಪ ಮಾಡಿದರೆ ನನಗೆ ಗೊತ್ತಿಲ್ಲ ರೈತರ ಬಗ್ಗೆ ಭಾರತೀಯ ಜನತಾಪಾರ್ಟಿ ಯಾವಾಗಲೂ ಕಳಕಳಿಯನ್ನು ಹೊಂದಿದೆ; ಅವರ ಉದ್ಧಾರಕ್ಕಾಗಿ, ಅಭಿವೃದ್ಧಿಗಾಗಿ ನಾವು ಎಲ್ಲಾ ರೀತಿಯಿಂದಲೂ ತಯಾರಿದ್ದೇವೆ, ಇವತ್ತೇನು ಮಾನ್ಯ ಒಂದು ಸಲ ಐದು ಸಾವಿರ ಕೋಟಿ ರೂಪಾಯಿಗಳಾದರೂ ಸಾಲ ಮನ್ನ ಮಾಡೋಣವೆಂದೇನು ಮುಖ್ಯಮಂತ್ರಿಗಳು: ಘೋಷಣೆ ಮಾಡಿದರು, ಅದಕ್ಕೆ ನಮ್ಮ ಸಂಪೂರ್ಣವಾದ

ಬೆಂಬಲವಿದೆ; ಇದರಲ್ಲಿ ಯಾವುದೇ ಎರಡು ಮಾತಿಲ್ಲ; ಭಾರತೀಯ ಜನತಾಪಾರ್ಟಿ ಅವರ ಜೊತೆ ಇದೆ ಎನ್ನುವ ಮಾತನ್ನು ನಾನು ಹೇಳುತ್ತೇನೆ.

(ಗೊಂದಲ)

ಶ್ರೀ ಬಸವರಾಜರಾಯರೆಡ್ಡಿ : ಜಗದೀಶ್ ಶೆಟ್ಟರ್‌ರವರಿಗೆ ನೈಸ್ ಬಗ್ಗೆ ಮಾತನಾಡಿ ಎಂದು ಹೇಳಿದ್ದು, ಆದರೆ ಅವರು ಈಗ ಬಹಳ ನೈಸ್ ಆಗಿ ಮಾತನಾಡುತ್ತಿದ್ದಾರೆ, ನಿಮ್ಮ ನೈಸ್ ಮೆಂಟ್ ನಮಗೆ ಬೇಡ.

ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಮಂತ್ರಿಗಳು) : ಯಾವುದೋ ಪಾಪದ ಕೂಸನ್ನು ಮಾಡಿಕೊಂಡು ನಮ್ಮ ಮೇಲೆ ಹಾಕುವ ಪ್ರಯತ್ನವನ್ನು ನಡೆಸುತ್ತಿದ್ದೀರಲ್ಲಾ ಸ್ವಾಮಿ; ಆ ಪಾಪದ ಕೂಸು ನಿಮ್ಮದು ನಮ್ಮದೇನು ಇದಕ್ಕೆ ಸಂಬಂಧ? ನಿಮ್ಮ ಪಾಪದ ಕೂಸಿಗೆ ನಮಗೆ ಅಪ್ಪ ಅಮ್ಮ ಎಂದು ಹೇಳುವುದಕ್ಕೆ ಇಷ್ಟಪಡುತ್ತೀರಾ? ಸ್ವಲ್ಪ ಮಾನ ಮರ್ಯಾದೆ ಬೇಕು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಬೆಳಿಗ್ಗೆ ಕೆಲವು ಪತ್ರಿಕೆಗಳಲ್ಲಿ ಆದ ವರದಿಗಳ ಮೇಲೆ ಕೆಲವು ಸದಸ್ಯರುಗಳು ಮಾತನಾಡಿದರು, ಇವತ್ತು ಈ ಪ್ರಾಜೆಕ್ಟ್ ವಿಷಯದಲ್ಲಿ ಜಾತಿಬಣ್ಣ ಪ್ರದೇಶದ ಬಣ್ಣ ಇದೆಲ್ಲಾ ವ್ಯಕ್ತವಾಗುತ್ತದೆಂದು ಈ ಸದನದ ಮುಂದಿಟ್ಟಿದ್ದಾರೆ. ನಾವು ಅದರ ಬಗ್ಗೆ ತಲೆಕೆಡಿಸಿಕೊಳ್ಳಬೇಕಾದ ಅವಶ್ಯಕತೆ ಇಲ್ಲ, ಇಲ್ಲಿ ಒಕ್ಕಲಿಗರು, ಲಿಂಗಾಯಿತರೆನ್ನುವ ಪ್ರಶ್ನೆ ಇಲ್ಲ, ನಮಗೆ ರಾಜ್ಯ ಮುಖ್ಯ. ಈ ದೃಷ್ಟಿಯಿಂದ ಇವತ್ತು, ಈ ಜಾತಿ ವಿಷಯ, ಈ ಪ್ರದೇಶದ ವಿಷಯವನ್ನೂ ಬಿಟ್ಟುಬಿಡೋಣ, ಜಮೀನು ಕಳೆದುಕೊಳ್ಳುವವರು ಈ ಭಾಗದ ಜನರೇ ಈ ಭಾಗದ ಜನರೇನು ಈ ಒಂದು ಪ್ರಾಜೆಕ್ಟ್‌ನಿಂದ ಕೆಲವರು ಜಮೀನು ಕಳೆದುಕೊಳ್ಳುತ್ತಾರೆ, ಕೆಲವು ಜಮೀನನ್ನು ವಾಪಸ್ ಕೊಡಬೇಕೆಂದು ಹೇಳುತ್ತಿದ್ದೀರಿ; ಬೆಂಗಳೂರು ಸುತ್ತಮುತ್ತ ಇರುವ ಲ್ಯಾಂಡ್ ವ್ಯಾಲ್ಯೂ ಮೊನ್ನೆ ಸರ್ಕಾರ ಆಕ್ಷನ್ ಹಾಡಿದಂತಹ ಸಂದರ್ಭದಲ್ಲಿ 1 ಎಕರೆಗೆ 7 ಕೋಟಿ ರೂಪಾಯಿಸಿಗಳವರೆಗೆ ಆಕ್ಷನ್‌ನಲ್ಲಿ ಹೋಗಿರುವ ಪ್ರಸಂಗಗಳು ಇವೆ. ಹೊಸದಾಗಿ ಫೆರಿಪರಿಯಲ್ ರಸ್ತೆ ಮಾಡುವುದನ್ನು ಅವರೇನು ಹೇಳುತ್ತಿದ್ದಾರೆ, ಈಗ ಹೊಸದಾಗಿ ಎಕ್ಸೆಸ್ ಲ್ಯಾಂಡ್ ಏನು ಕೊಟ್ಟಿದ್ದೇವೆ ಅದು ಅಲ್ಲೇ ಬರುತ್ತದೆ ಸನ್ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಮಾನ್ಯ ಎಂ.ಪಿ. ಪ್ರಕಾಶ್‌ರವರು ಕಂದಾಯ ಮಂತ್ರಿಗಳಾಗಿದ್ದಾಗ ಅಲ್ಲೇ 7 ಕೋಟಿ ರೂಪಾಯಿಗಳಿಗೆ ಆಕ್ಷನ್ ಆಗಿದೆ. ಇವತ್ತು ಒಂದು ತೀರ್ಮಾನಕ್ಕೆ ಬರೋಣ, ನನ್ನ ಒಬ್ಬನ ತೀರ್ಮಾನದಲ್ಲಿ ಇಡೀ ಸದನದ 225 ಸದಸ್ಯರು ತೀರ್ಮಾನ ಮಾಡಬೇಕು, ಇವತ್ತು ದುಡ್ಡಿಲ್ಲವೆಂದು ನೀರಾವರಿ ಬಗ್ಗೆ ಚರ್ಚೆ

ಮಾಡುತ್ತೇವೆ, ಇವತ್ತು ಬೆಂಗಳೂರಿನ ಮೂಲಭೂತಸೌಕರ್ಯಗಳ ಬಗ್ಗೆಯೂ ಚರ್ಚೆ ಮಾಡುತ್ತಿದ್ದೇವೆ. ಉದಾಹರಣೆಗೆ ಮೊನ್ನೆ ಜನತಾ ದರ್ಶನದಲ್ಲಿ, ಒಬ್ಬರು ಬಂದು ನನಗೆ ಮನವಿಯನ್ನು ಬೆಂಗಳೂರಿನಲ್ಲಿರುವ ಸಣ್ಣ ಸೈಟಿನ ವಿಷಯದಲ್ಲಿ ಕೊಟ್ಟರು: ಬಹಳ ದೊಡ್ಡ ಸೈಟಲ್ಲ, ಅಧಿಕಾರಿಗಳಿಗೆ ಚೆಕ್ ಮಾಡಲು ನಾನು ನಿರ್ದೇಶನವನ್ನು ಕೊಟ್ಟೆ, ಆ ಅರ್ಜಿ ಕೊಟ್ಟವನು ದೋಖಾ, ಅಲ್ಲಿ ಯಾರೋ ಇರತಕ್ಕಂಥವನ್ನೂ ದೋಖಾ ಅದು ಕಾರ್ಪೋರೇಷನ್ ಜಾಗ: ಆ ಜಾಗಯಾರದು ಎಂದು ನಮ್ಮ ಕಾರ್ಪೋರೇಷನ್ ಅಧಿಕಾರಿಗಳು ಆ ಜಾಗವನ್ನು ನೋಡೇ ಇಲ್ಲ; ಅಲ್ಲಿ ಯಾರೋ ಸೇರಿಕೊಂಡಿದ್ದಾರೆ; ನನ್ನ ಜಾಗ ಬಿಡಿಸಿಕೊಡಿ ಎಂದು ಇವನು ಅರ್ಜಿಯನ್ನು ಜನತಾದರ್ಶನದಲ್ಲಿ ಕೊಟ್ಟಿದ್ದಾನೆ, ಕೊಟ್ಟವನು ದೋಖಾ, ಅಲ್ಲಿ ಇರುವವನೂ ದೋಖಾ ಅದು ಕಾರ್ಪೊರೇಷನ್ ಜಾಗ! ಬೆಂಗಳೂರಿನ ಸುತ್ತಮುತ್ತಲಿನ ಈ ರೀತಿಯ ವ್ಯವಹಾರದ ಬಗ್ಗೆ ತನಿಖೆ ಮಾಡುವುದಕ್ಕೆ ಸದನ ಸಮಿತಿಯನ್ನು ತಾವು ಮಾಡಿದ್ದೀರಿ; ಆ ಸಮಿತಿಯಲ್ಲಿರುವ ಅಧ್ಯಕ್ಷರು ಹಾಗೂ ಸದಸ್ಯರು ಆದಷ್ಟು ಬೇಗ ತಮ್ಮ ಗಮನಕ್ಕೆ ಈ ರೀತಿಯ ಏನು ದಂದೆಗಳಾಗಿದ್ದಾವೆ ಅದನ್ನು ತಂದರೆ, ಆ ಬಗ್ಗೆ ಸದನ ಏನು ಹೇಳುತ್ತದೆ, ಆ ಬಗ್ಗೆ ಮುಂದಕ್ಕೆ ಒಂದು ತೀರ್ಮಾನ ಮಾಡೋಣ. ಬೆಂಗಳೂರು ಅಭಿವೃದ್ಧಿಗಳ ಬಗ್ಗೆ ಇವತ್ತೇನು ಕೂಗಿದೆ, ಇವತ್ತೇನು ಹಲವಾರು ಭಾರಿ ಕೇಂದ್ರ ಸರ್ಕಾರಕ್ಕೂ ಮನವಿಯನ್ನು ಕೊಡುತ್ತೇವೆ, ಅಲ್ಲಿಂದಲೂ ನಮಗೇನೂ ಸ್ಪಂದನೆ ಸಿಕ್ಕಿಲ್ಲ; ಇವತ್ತು ಸದನ ತೀರ್ಮಾನ ಮಾಡುವುದಾದರೆ, ನಾವು ನಿರ್ಧಾರ ಕೈಗೊಳ್ಳೋಣ. ಅಲ್ಲಿ ಜಮೀನನ್ನು ಕಳೆದುಕೊಂಡಿರುವ ನಮ್ಮ ರೈತರೇನಿದ್ದಾರೆ, ಹತ್ತು ವರ್ಷಗಳ ಹಿಂದೆ ಏನು ಜಮೀನನ್ನು ಕೊಟ್ಟಿದ್ದಾರೆ, ಕಳೆದುಕೊಂಡಿದ್ದಾರೆ, ಜಮೀನನ್ನು ನೋಟಿಫೈ ಮಾಡಿದ್ದಾರೆ, ಕಾನೂನಿನ ಪ್ರಕಾರ ಸಾಧ್ಯವಾದರೆ ಕೆಲವರಿಗೆ ಕೊಡುವುದರ ಜೊತೆಗೆ ಹೆಚ್ಚುವರಿ ಜಮೀನಿಗೆ ಇವತ್ತೇನು ನಮಗೆ ಮಾರ್ಕೆಟ್ ವ್ಯಾಲ್ಯು ಇದೆ, ಸದನದ ಒಂದು ಸಮಿತಿಯನ್ನೇ ಮಾಡೋಣ; ಅಧ್ಯಕ್ಷರೆ, ನಿಮ್ಮ ಒಂದು ತೀರ್ಮಾನ ಕೊಡಿ: ಬೆಂಗಳೂರು–ಮೈಸೂರು ಕಾರಿಡಾರ್ ರಸ್ತೆಗೆ ಸಂಬಂಧಪಟ್ಟ ಹಾಗೆ ನೀವು ಸದನದ ಎಲ್ಲಾ ಪಕ್ಷಗಳ ಸಮಿತಿಯನ್ನು ಮಾಡಿ, ಆ ಸಮಿತಿಯ ಮುಖಾಂತರವೇ ನಾವು ಮುಂದೇನು ತೀರ್ಮಾನ ಮಾಡಬೇಕೆನ್ನುವುದರ ಬಗ್ಗೆ ಒಂದು ಅಂತಿಮವಾದ ನಿರ್ಣಯಕ್ಕೆ ಬನ್ನಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸದನವೇ ಇದನ್ನೆಲ್ಲಾ ಡಿಸೈಡ್ ಮಾಡಲೆಂದು ಉದಾರವಾಗಿ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ, ನಾವು ಇಲ್ಲಿ ಕೇಳುವುದಕ್ಕೆ ಬಂದಿದ್ದು, ಸರ್ಕಾರದ ನಿಲುವೇನು? ಈ ವಿಷಯದಲ್ಲಿ ಸರ್ಕಾರದ್ದು ಏನು ಸ್ಟ್ಯಾಂಡ್ ಇದೆ, ಏನು ಹೊಸ ಬಿಲ್ ತರಬೇಕೆಂದು ನಿರ್ಧಾರ ಮಾಡಿದ್ದೀರೋ ಏನು ಆ

ಪ್ರಾಜೆಕ್ಟ್ ಅನ್ನು ಟೇಕನ್ ಓವರ್ ಮಾಡಬೇಕೆಂದು ಮಾಡಿದ್ದೀರೋ ಆ ಪ್ರಾಜೆಕ್ಟ್ ಸ್ಕ್ರಾಪ್ ಮಾಡಬೇಕೆಂದು ಮಾಡಿದ್ದೀರೋ, ಅದನ್ನು ಮಾಡಿದಂತಹವನಿಗೆ ಶೂಲೆಗೇರಿಸಬೇಕೆಂದು ಮಾಡಿದ್ದೀರೋ; ಏನಾದರೂ ನಮಗೆ ಗೊತ್ತಾಗಬೇಕಲ್ಲಾ, ನಿಮಗೆ ಬಿಟ್ಟಿದ್ದೇವೆ, ನಿಮಗೆ ಬಿಟ್ಟಿದ್ದೇವೆಂದು ಹೇಳುತ್ತಾ ನೀವು ನಮ್ಮ ಮೇಲೆ ಹಾಕಿ ನುಳಿಚಿಕೊಂಡು ಹೊರಗಡೆಗೆ ಹೋಗುವಂಥದ್ದು ಆಗಬಾರದು; ನಿಮ್ಮ ಸ್ಟ್ಯಾಂಡ್ ಏನು ಎಂಬುದನ್ನು ಖಚಿತವಾಗಿ ಹೇಳಿಬಿಡಿ, ನಾನು ಈ ಸ್ಟ್ಯಾಂಡ್ ಅನ್ನು ತೆಗೆದುಕೊಂಡಿದ್ದೇನೆ, ಇದನ್ನು ಮಾಡುತ್ತೇನೆ, ಇದಕ್ಕೆ ನಿಮ್ಮ ಬೆಂಬಲ ಇದೆಯೋ ಇಲ್ಲವೋ ಎಂದು ಹೇಳಿ, ನಾವು ಆವಾಗ ನಮ್ಮ ಉತ್ತರವನ್ನು ಹೇಳುತ್ತೇವೆ, ಅದನ್ನು ಬಿಟ್ಟು ನಿಮಗೆ ಬಿಟ್ಟಿದ್ದೇವೆ, ನಿಮಗೆ ಬಿಟ್ಟಿದ್ದೇವೆ ಎಂದು ಹೇಳಿಕೊಂಡು ಕೊನೆಯವರೆಗೆ...

ಅಧ್ಯಕ್ಷರು : ಈ ಸದನ ಏನು ಮಾರ್ಗದರ್ಶನ ಮಾಡುತ್ತದೆ ಹಾಗೆ ಆಗಲಿ ಎಂಬುದು.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಲ್ಲ, ಏನಾದರೂ ಮಾತುಕತೆಯಾಗಿದೆಯಾ? ಏಕೆಂದರೆ ಲಕ್ಷಣ ಆ ರೀತಿಯಾಗಿ ಕಾಣುತ್ತಿದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಶ್ರೀ ರಾಮರೆಡ್ಡಿಯವರೇ, ನಿಮಗೆ ಈ ಒಂದು ಚರ್ಚೆಯ ವಿಷಯದಲ್ಲಿ ಸಂಪೂರ್ಣವಾಗಿ ವಿವರ ಕೇಳುವುದಕ್ಕೆ ನಿಮಗೆ ಅವಕಾಶವಿದೆ.

ಶ್ರೀ ಬಸವರಾಜರಾಯರೆಡ್ಡಿ : ಸದನ ಕಾರ್ಯಾಂಗವಲ್ಲ; ಕಾರ್ಯಾಂಗವೆಂದರೆ ಸರ್ಕಾರ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ನಿಮ್ಮದು ಜವಾಬ್ದಾರಿ ಇದೆ, ನನ್ನದೊಬ್ಬನದೇ ಅಲ್ಲ, ಅದಕ್ಕೂ ಹೇಳುತ್ತೇನೆ ಇರಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಸರ್, ತಾವು ಈಗ ಎಲ್ಲವನ್ನೂ ಚೆನ್ನಾಗಿ ಹೇಳಿದ್ದೀರಿ, ಮೊದಲನೆಯದು ನೋಟಿಫೈ ಆಗಿ ಅವಾರ್ಡ್ ಆಗಿರುವ ಜಾಗವನ್ನು ಬಿಡುವ ನಿರ್ಣಯವನ್ನು ತಾವು ತೆಗೆದುಕೊಳ್ಳಲೇ ಬೇಕು. ಇಷ್ಟೆಲ್ಲಾ ಮಾಡಿ ರೈತರಿಗೆ ಏನೂ ಮಾಡಲಿಲ್ಲವೆಂದು ಅನಿಸಿಕೊಂಡು ನಾವು ಈ ಸಭೆಯಿಂದ ಹೊರಗೆ ಹೋಗುವುದಕ್ಕಾಗುವುದಿಲ್ಲ; ಯಾವುದನ್ನು ಅವಾರ್ಡ್ ಮಾಡಿಲ್ಲ, ಯಾವುದನ್ನು ವಾಪಸ್ ಕೊಡುವುದಕ್ಕೆ ಅವಕಾಶವಿದೆ, ದಯಮಾಡಿ ಆ ಬಗ್ಗೆ ತಾವು ನಿರ್ಣಯವನ್ನು ತೆಗೆದುಕೊಳ್ಳಬೇಕು; ಆ ಜಮೀನನ್ನು ರೈತರಿಗೆ ವಾಪಸ್ ಕೊಡಬೇಕು, ಮಾರುವುದು ನೀವು ಅಭಿವೃದ್ಧಿಗೆ ಹೋಗುವುದು ಇದ್ಯಾವುದಕ್ಕೂ ರಾಜಿಯಾಗುವುದಕ್ಕೆ ನಾವು

ಕೋರ್ಟ್‌ನವರೆಗೆ ಹೋಗಿಲ್ಲ; ರೈತರಿಗೆ ಜಮೀನನ್ನು ದಯವಿಟ್ಟು ವಾಪಸ್ ಕೊಡಬೇಕು ಎಷ್ಟು ಕೊಡುವುದಕ್ಕೆ ಸಾಧ್ಯವಿದೆ ಅದನ್ನು ಇಲ್ಲಿ ಡಿಕ್ಲೇರ್ ಮಾಡಬೇಕು, ಕಾನೂನು ತೊಡಕಿರುವುದಕ್ಕೆ ಬೇಕಾದರೆ ಕುಳಿತುಕೊಂಡು ನೀವು ಚರ್ಚೆ ಮಾಡಿ ಕೊಡುವುದಕ್ಕೆ ಹೇಳಿ, That has to be implemented. ಅದರಲ್ಲೇನೂ ರಾಜಿ ಇಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ತಾವೇನು ಸಲಹೆಯನ್ನು ಕೊಟ್ಟಿರಲ್ಲಾ ಅದನ್ನು ಇಂಪ್ಲಿಮೆಂಟ್ ಮಾಡಬಹುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇದು ಸದನದ ಮುಂದೆ ಬಂದಿರತಕ್ಕಂಥ ವಿಚಾರ, ಇದರಲ್ಲಿ ಸರ್ವಪಕ್ಷಗಳನ್ನು ಕರೆಯುವ ಪ್ರಶ್ನೆ ಬರುವುದಿಲ್ಲ, ಹೆಚ್ಚುವರಿ ಭೂಮಿಯನ್ನು ಅವರೇನು ನೋಟಿಫೈ ಮಾಡಿದ್ದಾರೆ, ಅದನ್ನಾದರೂ ಬಿಟ್ಟುಬಿಡುತ್ತೇವೆಂದು ಇವತ್ತು ಘೋಷಣೆ ಮಾಡಬೇಕು, ಇಲ್ಲದಿದ್ದರೆ, ಇದನ್ನು ಇಷ್ಟುದಿವಸ ಚರ್ಚೆ ಮಾಡಿ ವೇಸ್ಟ್ ಆಗುತ್ತದೆ, ರೈತರಿಗೆ ಏನೂ ಹೇಳಿದಂತಾಗುವುದಿಲ್ಲ. ನಾನು ಕೆಲವು ಆಪ್ಷನ್‌ಗಳನ್ನು ಇಟ್ಟುಕೊಂಡಿದ್ದೇನೆ. ಏನು ಸದನದಲ್ಲಿ ಸದಸ್ಯರುಗಳು ಅಭಿಪ್ರಾಯ ವ್ಯಕ್ತಪಡಿಸಿದ್ದೀರಿ, ನಿಮ್ಮ ಅಭಿಪ್ರಾಯದ ಮೇರೆಗೆ ಈ ಆಪ್ಷನ್‌ಗಳನ್ನು ಸದನದ ಮುಂದಿಡುತ್ತಿದ್ದೇನೆ. ಅಂತಿಮವಾಗಿ ನಿಮ್ಮ ಜವಾಬ್ದಾರಿ ಹೇಳಿ; ನನ್ನ ಜವಾಬ್ದಾರಿ ಇರಲಿ ಎಂದು ಏನು ಹೇಳುತ್ತಿದ್ದಾರೆ, ಆ ಜವಾಬ್ದಾರಿ ಏನೆಂದು ಕಡೆಗೆ ಹೇಳುತ್ತೇನೆ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಎಲ್ಲಾ ಕಡೆ ಪ್ರೈವೇಟ್ ಡಿಸ್ಕಷನ್ ಮಾಡತಕ್ಕಂತಹ ರೀತಿಯಲ್ಲಿ ಸದನದ ಮೇಲೆ ಬಿಟ್ಟಿದ್ದು, ಸದನದ ಸದಸ್ಯರ ಬಗ್ಗೆ ಮಾತನಾಡುವುದು ಅಲ್ಲ. ನೀವು ಏನು ಇವತ್ತು ಎರಡು ಗಂಟೆಗಳ ಕಾಲ ಮಾತನಾಡಿದ್ದೀರಿ, ನಾನೂ ಕೂಡ ನೆನ್ನೆ ಬಿಡಿಸಿ ಬಿಡಿಸಿ ಮಾತನಾಡಿದ್ದೇನೆ. ಎಲ್ಲಾ ಫೈಲ್ಸ್ ನಮ್ಮಲ್ಲಿ ಇತ್ತು. ಏಕೆಂದರೆ, ಇದಕ್ಕೆ ಇನ್ನೂ ಹೆಚ್ಚಿಗೆ ಕಡತದಲ್ಲಿ ಯಾರ್ಯಾರು ಏನೇನು ಹೇಳಿದ್ದಾರೆ, ಏನೇನು ಮಾಡಿದ್ದಾರೆ ಎನ್ನತಕ್ಕಂಥದ್ದು ಒಂದು ಭಾಗ. ನಾವು ಏನು ಕೇಳಿದ್ದೇವೆ, ಸದನ ಪ್ರಾರಂಭವಾಗುವುದಕ್ಕಿಂತ ಮುಂಚೆ, ಈ ಸಮ್ಮಿಶ್ರ ಸರ್ಕಾರದಲ್ಲಿ ಈ ವಿಷಯದ ಬಗ್ಗೆ ಒಡಕು ಉಂಟಾಗಿದೆ. ಬಿಲ್ ತರತಕ್ಕಂತಹ ಚರ್ಚೆ ಮಾಡಲಿಕ್ಕೆ ಹೋಗಲಿಲ್ಲ; ಬೇಡವೆಂದು ಮತ್ತೊಬ್ಬರು ಹೋಗಲಿಲ್ಲ. ಅಂತಿಮವಾಗಿ ಇವತ್ತು ಸರ್ಕಾರದ ವತಿಯಿಂದ ಏನು ಬಿಲ್ ತರುತ್ತಿದ್ದೀರಿ, ಟೇಕ್ ಓವರ್ ಮಾಡುತ್ತಿದ್ದೀರಿ, ಹೇಗೆ? ಮೊದಲು ಮಿತ್ರ ಪಕ್ಷದವರು ಹೇಳುತ್ತಾರೆ, ಎಕ್ಸಸ್ ಲ್ಯಾಂಡ್ ತೆಗೆದುಕೊಳ್ಳಬೇಕೆಂದು ಹೇಳುತ್ತಾರೆ. ನಿಮ್ಮ ನಿಲುವು ಏನೆಂದು ನಾವು ಕೇಳಿದ್ದೇವೆ. ಇದರ ಬಗ್ಗೆ ನಿಲುವಳಿ ಸೂಚನೆ ಪ್ರಾರಂಭವಾದ ವಿಷಯವೇನಿದೆ, ಇದು ಈಗಾಗಲೇ ಸದನದಲ್ಲಿ ಚರ್ಚೆ ಆಗಿದೆ. ನೀವು ಏನು ಉತ್ತರ ಕೊಟ್ಟಿದ್ದೀರಿ, ಅದೇ

ರೀತಿಯಾಗಿ ಸಾಲಾಗಿ ನಾನು ಉತ್ತರ ಕೊಟ್ಟಿದ್ದೇನೆ, ಮಾನ್ಯ ರೇವಣ್ಣನವರೂ ಕೊಟ್ಟಿದ್ದಾರೆ, ಮಾನ್ಯ ಸಿಂಧ್ಯರವರು ಉತ್ತರ ಕೊಟ್ಟಿದ್ದಾರೆ. ಹೋದ ಸದನದಲ್ಲಿ ತಾವೂ ಕೂಡ ಕುಳಿತು ಕೇಳಿದ್ದೀರಿ. ಇವತ್ತು ನಾವು ಕೇಳತಕ್ಕಂಥದ್ದು ಏನೆಂದರೆ, ಈ ಸಮಗ್ರವಾದ ವಿಚಾರದ ಬಗ್ಗೆ ಹೇಳಬೇಕಾಗಿದೆ. ನಿಮಗೇನಾಗಿದೆ, ಸಾಕಷ್ಟು ಅನಾಹುತಗಳಾಗಿವೆ, ಯಾರ್ಯಾರಿಗಾಗಿದೆ, ಇವೆಲ್ಲವೂ ಸಮಗ್ರವಾಗಿ ಒಂದು ತನಿಖೆ ಆಗಬೇಕು. ನಿಮ್ಮ ಮೇಲೆ ಬಿಟ್ಟಿದೆ ಎಂದರೆ ಹೇಗೆ? ನಮ್ಮ ಮೇಲೆ ಏನು ಬಿಡುತ್ತೀರಿ? That is not the answer from the Chief Minister. Categorically you should say… ನಾವು ಇದರ ಬಗ್ಗೆ ಬಿಲ್ ತರುತ್ತೇವೆ, ಮಾಡುತ್ತೇವೆ ಎಂದು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ನನ್ನ ರಿಪ್ಲೇ ಕನ್‌ಕ್ಲೂಡ್ ಆಗಿಲ್ಲ.

ಶ್ರೀ ಎನ್. ಧರ್ಮ್‌ಸಿಂಗ್ : ಕನ್‌ಕ್ಲೂಡ್ ಆಗಿಲ್ಲ, ನೀವು ಮಾತನಾಡುವ ಧಾಟಿಯಲ್ಲಿ ಅವರು ಬಿಲ್ ಬಾರಿಸುತ್ತಾ ಕೂರುತ್ತಾರೆ. ಅಧ್ಯಕ್ಷರು ನಿಮಗೇ ರಕ್ಷಣೆ ಕೊಡುತ್ತಾರೆ, ನಮಗೆ ರಕ್ಷಣೆ ಕೊಡುವುದಿಲ್ಲ. ಅದು ನಾನು ಇವತ್ತು ಹೇಳಬೇಕಾಗುತ್ತದೆ. ಅದರಲ್ಲೇನಿದೆ ಎಂದು ಅಲ್ಲ. ನಾವು ಕಾರ್ಯಕ್ರಮಕ್ಕೆ ಹೋಗಿದ್ದೆವು ಆದರೆ ಈಗ ಓಡಿ ಬಂದಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳೇ, ಉತ್ತರ ಕೊಡತಕ್ಕಂತಹ ಸಂದರ್ಭದಲ್ಲಿ ಸ್ಪೆಸಿಫಿಕ್ಕಾಗಿ ನಾನು ಮೂರು-ನಾಲ್ಕು ವಿಷಯಗಳ ಬಗ್ಗೆ ಕೇಳಿದ್ದೇನೆ. ನೀವು ಯಾವ ಕಾಲದಲ್ಲಿ ಆಗಿದೆ ಎಂದು ಹೇಳಿದಿರಿ, ಆಗಿಲ್ಲ ಎಂದು ಹೇಳಿದಿರಿ, ಏನೇನೋ ಹೇಳಿದ್ದೀರಿ, ಹಾಗೆಯೇ ದೂರವಾಣಿ ಮಾಡಿ ಇಲ್ಲಿಂದೆಲ್ಲವನ್ನೂ ನಾನು ಕೇಳಿಕೊಂಡು ಬಂದಿದ್ದೇನೆ. ಸ್ಪಷ್ಟವಾಗಿ ನಿಮ್ಮ ಸರ್ಕಾರದ ನಿಲುವನ್ನು ಬಹಿರಂಗ ಪಡಿಸಬೇಕು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮಾನ್ಯ ವಿರೋಧ ಪಕ್ಷದ ನಾಯಕರಿಗೆ ನನಗಂತ ತಾಳ್ಮೆ ಇದೆ ಎಂದು ಅಂದುಕೊಡಿದ್ದೆ. ನನಗಿಂತ ನಿಮಗೆ ತಾಳ್ಮೆ ಜಾಸ್ತಿ ಎಂದು ಅಂದುಕೊಂಡಿದ್ದೆ. ಆದರೆ ನಾನು ಇನ್ನೂ ಉತ್ತರ ಕಂಪ್ಲೀಟ್ ಮಾಡಲಿಲ್ಲ. ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುವವರೆಗೂ ಇವತ್ತು ಬಿಲ್ಲು ಹೊಡೆಯಬೇಡಿ. ನಾನು ಕೆಲವು ಅಪ್‌ಷನ್‌ಗಳನ್ನು ಇಟ್ಟಿದ್ದೇನೆ ಅಂತಿಮವಾಗಿ ಅಧ್ಯಕ್ಷರೆ, ಈ ಹನ್ನೊಂದು ವರ್ಷಗಳ ಹಲವಾರು ಬದಲಾವಣೆಗಳೇನು ಇವೆ, ಇವತ್ತು ಸುಪ್ರೀಂ ಕೋರ್ಟು ಮತ್ತು ಹೈಕೋರ್ಟಿನವರು ಜಡ್ಜ್‌ಮೆಂಟ್ ಕೊಟ್ಟಿದ್ದಾರೆ. ಕೋರ್ಟಿನ ತೀರ್ಮಾನಕ್ಕೆ ನಾವು ತಲೆ ಬಾಗಲೇ ಬೇಕಾಗಿದೆ. ಒಂದು ಕಡೆ ಸರ್ಕಾರ ಕೋರ್ಟಿನ ಆದೇಶಗಳಿಗೆ ತಲೆ ಬಾಗಲೇ ಬೇಕು. ಇವತ್ತು ಮಾನ್ಯ ಸದಸ್ಯರುಗಳು, ಅದರಲ್ಲೂ ಈಗ ತಾನೇ ಮಾನ್ಯ ಮಾಧುಸ್ವಾಮಿಯವರು ಇದೆಲ್ಲಾ ಬೇಡ ಮೊದಲು ನೋಟಿಫೈ ಆಗದೇ ಇರತಕ್ಕಂಥ ರೈತರ ಜಮೀನನ್ನು ವಾಪಸ್ ಕೊಡುತ್ತೀರೋ ಇಲ್ಲವೋ ಹೇಳಿ, ಎಂದು

ಹೇಳುತ್ತಿದ್ದಾರೆ; ಕಾನೂನಿನ ಪ್ರಕಾರ ರೈತರ ಜಮೀನು ವಾಪಸ್ ಕೊಡಲಿಕ್ಕೆ ಎಲ್ಲಿ ಅವಕಾಶಗಳಿವೆ, ಕೊಡಲಿಕ್ಕೆ ತೀರ್ಮಾನ ಮಾಡೋಣ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾಡುತ್ತೇವೆಂದು ಹೇಳಿ. ಮಾಡೋಣವೆಂದು ಹೇಳಿದರೆ ಹೇಗೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮಾಡೋಣವೆಂದು ಸರ್ಕಾರ ಹೇಳಿದರೆ, ಮಾಡುತ್ತೀವೆ ಅಂತ ಅರ್ಥ ಅಲ್ಲವಾ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನಿಮ್ಮ ಉತ್ತರ ಪಾಸಿಟೀವ್ ಆಗಿರಲಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಿಮ್ಮ ಅನ್ಸರ್ ಸ್ಪೆಸಿಫಿಕ್ಕಾಗಿ ಪಾಸಿಟೀವ್ ಆಗಿರಲಿ. ನಿರ್ದಿಷ್ಟವಾಗಿರಬೇಕು.

ಶ್ರೀ ಎಸ್. ರಾಜೇಂದ್ರನ್ : ಊಟ ಮಾಡೋಣವೆಂದರೆ, ಊಟ ಮಾಡುತ್ತೇವೆಂದು ಅರ್ಥ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಎಲ್ಲ ನಮ್ಮ ರೈತರಿಗೆ ಅನ್ಯಾಯವಾಗಿದೆ ನಮ್ಮ ರೈತರಿಗೆ ಕಾನೂನಿನ ಚೌಕಟ್ಟಿನಲ್ಲಿ ಜಮೀನನ್ನು ವಾಪಸ್ ಕೊಡಲಿಕ್ಕೆ ಎಲ್ಲ ಅವಕಾಶ ಇದೆ, ಅದಕ್ಕೆ ಸರ್ಕಾರ ತೀರ್ಮಾನ ಮಾಡಿ ಆ ಕೆಲಸವನ್ನು ಮಾಡುತ್ತದೆ ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಇದು ಟೈಮ್ ಬಾಂಡ್ ಆಗಬೇಕು. 15 ದಿನ, 20 ದಿನ ಟೈಮ್ ಬಾಂಡ್ ಪ್ರೋಗ್ರಾಮ್ ಆಗಬೇಕು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಪಕ್ಕದಲ್ಲಿ ವಿಕಾಸ ಸೌಧವನ್ನು ಎರಡು ವರ್ಷಗಳಲ್ಲಿ ಕಟ್ಟಿದ್ದಾರೆ. ಇದು 11 ವರ್ಷಗಳ ಕರ್ಮಕಾಂಡ ಎಂದು ಆಗಲೇ ಹೇಳಿದೆ. ರಸ್ತೆಮಾಡಲಿಕ್ಕೆ ನಾವು ಟೈಮ್‌ಬಾಂಡ್ ಹಾಕಿಲಿಲ್ಲ. ಪಕ್ಕದಲ್ಲಿ ವಿಕಾಸಸೌಧ ಎರಡೇ ವರ್ಷಗಳಲ್ಲಿ ಕಟ್ಟುತ್ತೇವೆ. ಅದು ಪ್ರಾಜೆಕ್ಟ್. ಸಾರ್ವಜನಿಕರಿಗೆ ಅನುಕೂಲವಾಗಲಿ ಎಂದು ಇದು 11 ವರ್ಷಗಳಿಂದ ಚರ್ಚೆ ಹಂತದಲ್ಲಿಯೇ ಇದೆ. ಎಲ್ಲಿ ಇದೆಯೋ ಅಲ್ಲಿಯೇ ಇದೆ ಇನ್ನೂ ಕೂಡ. ಅಲ್ಲಿ ಏನಾಗುತ್ತದೋ ಗೊತ್ತಿಲ್ಲ, ವಿಕಾಸ ಸೌಧಕ್ಕೆ ಹೋಗುವುದಕ್ಕೆ ಯಾರೂ ತಯಾರಿಲ್ಲ. ಎಂಎಲ್‌ಎಗಳಿಗೆ ಅಲಾಟ್ ಮಾಡಬೇಕಾದ ಪರಿಸ್ಥಿತಿ ಬಂದರೂ ಬರಬಹುದು.

ಶ್ರೀ ಜೆ.ಸಿ. ಮಾಧುಸ್ವಾಮಿ : ಎಲ್ಲಾ ಫ್ಲೋರ್ ಲೀಡರ್ಸ್‌ಗೆ ಒಂದು ಆಫೀಸ್ ಕೊಡಿ ಎಂದು ಎರಡು ವರ್ಷಗಳಿಂದ ಕೇಳುತ್ತಿದ್ದೇವೆ. ನಮಗೆ ಕೊಡಿ ನಾವು ಹೋಗುತ್ತೇವೆ. ಅದು ಯಾವ ದೆವ್ವ ಬರುತ್ತದೋ ನೋಡೋಣ.

ಶ್ರೀ ವಾಟಾಳ್ ನಾಗರಾಜ್ : ಅಲ್ಲಿ ಭೂತ ಪ್ರೇತ ದೆವ್ವಗಳು ಇದ್ದರೂ ಸರಿಪಡಿಸುತ್ತೇವೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ನೋಟಿಫೈ ಆಗಿರತಕ್ಕಂತಹ ಎಕ್ಸಸ್ ಲ್ಯಾಂಡ್ ಏನಿದೆ, ಕಾನೂನಿನ ಚೌಕಟ್ಟಿನಲ್ಲಿ ಯಾವುದನ್ನು ವಾಪಸ್ ಪಡೆಯುವುದಕ್ಕೆ ಸಾಧ್ಯ ಇದೆ, ಅದನ್ನೂ ಇವತ್ತು ಸರ್ಕಾರ ವಾಪಸ್ ಪಡೆಯುವುದಕ್ಕೆ ತೀರ್ಮಾನ ಮಾಡಿದೆ. ಅದರ ಮೇಲೆ ನಾನು ಸದನದ ಗಮನಕ್ಕೆ ಏನು ತಂದಿದ್ದೇನೆ, ಇವತ್ತು ನನ್ನ ಜವಾಬ್ದಾರಿ ಏನಿದೆ, ಕಾನೂನಿನ ಚೌಕಟ್ಟಿನಲ್ಲಿ ನಿರ್ವಹಿಸತಕ್ಕಂತಹ ಸಂದರ್ಭದಲ್ಲಿ ನಾನು ಹಿಂದೆ ಸರಿಯುತಕ್ಕಂತಹ ಪ್ರಶ್ನೆ ಇಲ್ಲ. ಅಭಿಮನ್ಯು ಕಥೆಯಿಂದ ನಾನು ಇವತ್ತು ಪ್ರಾರಂಭ ಮಾಡಿದ್ದೇನೆ, ಅಭಿಮನ್ಯು ಕಥೆಯಿಂದ ಮುಗಿಸಲಿಕ್ಕೆ ಪ್ರಯತ್ನ ಪಡುತ್ತೇನೆ. ಚಕ್ರವ್ಯೂಹದಲ್ಲಿ ಹೋಗಿ ಸಿಕ್ಕಿ ಹಾಕಿಕೊಳ್ಳಬೇಡಿ ಎಂದು ನನಗೆ ಅಡ್ವೈಸ್ ಮಾಡಿದ್ದಾರೆ. ಕೆಲವರು ಬಿಲ್ ತಂದು ಬಿಡಿ, ನಾವು ನಿಮ್ಮ ಜೊತೆಯಲ್ಲಿದ್ದೇವೆ, ಬಿಲ್ ತರಬೇಕೆಂದರೆ ತರೋಣ ಅದೂ ಕಾಲ ಬರುತ್ತದೆ. ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡತಕ್ಕಂತಹ ಸಂದರ್ಭದಲ್ಲಿ ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತು ಏನು ಮಾತುಗಳನ್ನಾಡಿದ್ದಾರೆ, ಅಧಿಕಾರಿದಲ್ಲಿದ್ದಾಗ ಏನು ಮಾತುಗಳನ್ನಾಡಿದ್ದಾರೆ, ಹಲವಾರು ಪರಿವರ್ತನೆಗಳಾಗುತ್ತವೆ. ಇದೆಲ್ಲಾ ಯಾರಿಗೂ ಶಾಶ್ವತವಲ್ಲ. ಅದೂ ಕಾಲ ಬರಬಹುದು. ಅದಕ್ಕೆ ಆಸೆ ಇಟ್ಟುಕೊಂಡಿದ್ದೇನೆ. ಏಕೆಂದರೆ, ನೀವು ಹೇಳಿದಿರಿ.

ಶ್ರೀ ಎನ್. ಧರ್ಮಸಿಂಗ್ : 20 ತಿಂಗಳುಗಳಾದ ಮೇಲೆ ಯಾವಾಗ ಕಾಲ ಬರುತ್ತದೆ? ಬಿಲ್ ತರಬೇಕೆಂದು ಸಂಪುಟ ಸಭೆಯಲ್ಲಿ ಚರ್ಚೆ ಮಾಡಿದ ವಿಷಯವನ್ನು ನಾವು ಹೇಳುತ್ತಿದ್ದೇವೆ. ನಾವಾಗಿ ಬಿಲ್ ತರಬೇಕೆಂದು ಕೇಳುತ್ತಿಲ್ಲ. ಅದರ ಬಗ್ಗೆ ತಾವೇ ಹೇಳಿದ್ದೀರಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ನಾನು ಕೆಲವರು ಹೇಳದ್ದಕ್ಕೆ ಕೇಳುತ್ತಿದ್ದೇನೆ. ಮಾನ್ಯ ದೇಶಪಾಂಡೆಯವರು ಎಲ್ಲೋ ಒಂದು ಕಡೆ ಭಗವಂತ ಎಂದು ಹೇಳಿದರು. ಆ ಭಗವಂತ ಎಲ್ಲರಿಗೂ ಪರಿವರ್ತನೆ ತರಬಹುದು. ಏಕೆಂದರೆ, ನಾನಂತೂ ಎಲ್ಲರನ್ನೂ ಪರಿವರ್ತನೆ ಮಾಡಲಿಕ್ಕೆ ಆಗುವುದಿಲ್ಲ. ನಾನೊಬ್ಬನೇ ಪರಿವರ್ತನೆ ಮಾಡುವುದಕ್ಕಾಗುವುದಿಲ್ಲ. ಎಲ್ಲರಲ್ಲಿಯೂ ಆ ಭಾವನೆ ಬರಬೇಕು. ಏನು ಮಾಡಬಹುದು ಎಂದು ಸದನದ ಮುಂದಿಟ್ಟಿದ್ದೇನೆ. ಈ ಸದನದ ತೀರ್ಮಾನಕ್ಕೆ ಬಿಡುತ್ತೇನೆ. ಆದರೆ, ಈ ವಿಷಯವಾಗಿ ಅಂತಿಮವಾಗಿ ತೆರೆ ಎಳೆಯುತ್ತೇನೆ. ಕಾನೂನಿನ ಚೌಕಟ್ಟಿನಲ್ಲಿರುವಂತಹ .... ಒಂದು ನಿಮಿಷ ನಾನು ನಿಮಗೆ ಈಲ್ಡ್ ಆಗುವುದಿಲ್ಲ.

ಅಧ್ಯಕ್ಷರು : ಎಲ್ಲರೂ ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಸವರಾಜರಾಯರೆಡ್ಡಿ : ಮಾನ್ಯ ಮುಖ್ಯಮಂತ್ರಿಗಳೇ, ನಾನು ಏನು ಹೇಳುತ್ತಿದ್ದೇನೆ, ಸದನಕ್ಕೆ ಬಿಟ್ಟಿದ್ದೇನೆ ಸದನಕ್ಕೆ ಬಿಟ್ಟಿದ್ದೇನೆ ಎಂದರೆ, ತಾವು ಪ್ರೈವೇಟ್ ಬಿಲ್ ತರುವುದಕ್ಕಾಗುವುದಿಲ್ಲ.

(ಗೊಂದಲ)

ಅಧ್ಯಕ್ಷರು : ಸಭಾ ನಾಯಕರು ಉತ್ತರ ಕೊಡುತ್ತಿದ್ದಾರೆ. ನೀವೆಲ್ಲಾ ನಿಂತು ಅಲ್ಲಲ್ಲಿಯೇ ನಿಮ್ಮ ಭಾಷಣಗಳನ್ನು ಮಾಡುತ್ತಿದ್ದರೆ ಹೇಗೆ?

ಶ್ರೀ ಹೆಚ್. ಅಂಜನೇಯ : ಸಭಾನಾಯಕರು ತಮ್ಮ ದೃಢವಾದ ನಿಲುವನ್ನು ಹೇಳುತ್ತಿದ್ದಾರೆ ಕೇಳಿ.

ಶ್ರೀ ಬಸವರಾಜರಾಯರೆಡ್ಡಿ : ನೀವು ಬಿಲ್ ತರುವುದಕ್ಕಾಗುತ್ತಾ?

(ಗೊಂದಲ)

ಅಧ್ಯಕ್ಷರು : ದಯಮಾಡಿ ಎಲ್ಲಾ ಕುಳಿತುಕೊಳ್ಳಿ. ಈಗ ಸಭಾ ನಾಯಕರು ಉತ್ತರ ಕೊಡುತ್ತಿದ್ದಾರೆ. ದಯಮಾಡಿ ಕುಳಿತುಕೊಳ್ಳಿ. ಒಂದು ರೀತಿ ಇಲ್ಲ, ನೀತಿ ಇಲ್ಲ.

(ಗೊಂದಲ)

ಶ್ರೀ ಬಸವರಾಜರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾನು ಮುಖ್ಯಮಂತ್ರಿಗಳನ್ನು ಏನು ಕೇಳುತ್ತಿದ್ದೇನೆಂದರೆ, ಅವರು ಪದೇ ಪದೇ ಸದನಕ್ಕೆ ಬಿಟ್ಟಿದ್ದೇನೆ ಎಂದು ಏನು ಹೇಳುತ್ತಾರೆ ಅಂದರೆ ಸದಸ್ಯರು ಇದನ್ನು Private Bill ತರುವುದಕ್ಕಾಗುವುದಿಲ್ಲ. ಖಾಸಗಿ Bill ಅನ್ನು ನಾವು ತರಲಿಕ್ಕಾಗುವುದಿಲ್ಲ. ಸರ್ಕಾರ ಇದರ ಬಗ್ಗೆ ಏನು ಸ್ಪಷ್ಟವಾದಂಥ ನಿಲುವನ್ನು ಹೇಳುತ್ತದೆ?

ಅಧ್ಯಕ್ಷರು : ನಿಮ್ಮ ನಾಯಕರು ಆಗಲೇ ಕೇಳಿದ್ದಾರಲ್ಲಾ ಉತ್ತರ ಹೇಳುತ್ತಾರೆ ಕುಳಿತುಕೊಳ್ಳಿ.

ಶ್ರೀ ಬಸವರಾಜರಾಯರೆಡ್ಡಿ : Private Bill ತರಲಿಕ್ಕಾಗುವುದಿಲ್ಲ. ಅದನ್ನು ನಾನು ಹೇಳಿದ್ದು.

ಅಧ್ಯಕ್ಷರು : ಈಗ ರಾಯರೆಡ್ಡಿಯವರೆ, ಏನು ನಿಮ್ಮ ನಾಯಕರ ಹೇಳಿಕೆ ಇದೆ ಅದನ್ನೇ repeat ಮಾಡತಕ್ಕಂಥ ಅಗತ್ಯವಿಲ್ಲ. ಕುಳಿತುಕೊಳ್ಳಿ. ಏನಿದು?

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಸನ್ಮಾನ್ಯ ರಾಯರೆಡ್ಡಿ ಸಾಹೇಬರು ಮಧ್ಯೆ ಮಧ್ಯೆ ಎದ್ದು ನಿಂತು ಮಾತನಾಡುವುದನ್ನು ನಾವು ಸಾಕಷ್ಟು ಸಲ ನೋಡುತ್ತಿದ್ದೇವೆ. ಸನ್ಮಾನ್ಯ ವಿರೋಧ ಪಕ್ಷದ ನಾಯಕರೂ ಎದ್ದು ಮಾತನಾಡುವಾಗಲೂ ಅವರು ಮಾತನಾಡುತ್ತಾರೆ. ಸನ್ಮಾನ್ಯ ಸಭಾನಾಯಕರು ಎದ್ದು ನಿಂತು ಮಾತನಾಡುವಾಗಲೂ ಅವರು ಮಾತನಾಡುತ್ತಾರೆ. ದಯವಿಟ್ಟು ಒಂದು ದಿವಸ ಸಂಪೂರ್ಣವಾಗಿ ಅವರು ಮಾತನಾಡಲಿಕ್ಕೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಅವರು ನಿಂತಿದ್ದಾಗ ಹೇಳಿದರೆ ಒಳ್ಳೆಯ ತಮಾಷೆ. ನಿಮ್ಮದು ಯಾವ ಕಥೆ?

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ನಾನು ಸಲಹೆ ಕೊಡಲಿಕ್ಕೆ...

(ಗೊಂದಲ)

ಅಧ್ಯಕ್ಷರು : ಸಭೆಯಲ್ಲಿ ಗಂಭೀರವಾಗಿ ಸಭಾ ನಾಯಕರಾದ ಮುಖ್ಯಮಂತ್ರಿಗಳು ಏನು ಹೇಳುತ್ತಾರೆನ್ನುವುದನ್ನು ದಯಮಾಡಿ ಕೇಳಿ. ನೀವು ನೀವೇ ಮಾತನಾಡಿದರೆ ಏನು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಸದನದ ತೀರ್ಮಾನಕ್ಕೆ ಬಿಡುತ್ತೇನೆ ಎಂದು ಹೇಳುತ್ತಿದ್ದಾರೆಂದು ಇವರು ಹೇಳಿದರು. ನಾನು ಅದನ್ನು ಹೇಳಲಿಕ್ಕೆ ಕಾರಣ, ನಮ್ಮ ಪಕ್ಷದ ನಿಲುವೇನೆಂಬುದನ್ನು ಪತ್ರಿಕೆಯಲ್ಲಿ ಹೊರಗಡೆ ನಾವು ಪ್ರಕಟ ಮಾಡಿದ್ದೇವೆ ಎನ್ನುವುದರ ಬಗ್ಗೆ ನಮ್ಮ ಹಿರಿಯ ಸದಸ್ಯರು ಬೆಳಿಗ್ಗೆ ಏನು ಅವರ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ, ಅದರ ಬಗ್ಗೆ ಇದು ಕೇವಲ ಜನರಿಗೇನೋ ಒಂದು ತೋರಗಾಣಿಕೆಗೆ ಹೇಳುತ್ತಿಲ್ಲ ನಿಜವಾಗಲೂ ನಿಮಗೆ ಕಾಳಜಿ ಇದೆಯೋ ಇಲ್ಲವೋ ಎಂಬ ಪ್ರಶ್ನೆಯನ್ನೇನು ಇಟ್ಟಿದ್ದಾರೆ, ಅದಕ್ಕಾ ಉತ್ತರವಾಗಿ ನಮ್ಮ ಪಕ್ಷದ ನಿಲುವನ್ನು ಈ ಸಂದರ್ಭದಲ್ಲಿ ಹೇಳಿದ್ದೇನಷ್ಟೆ. ಅದು ಪಕ್ಷದ ನಿಲುವು.

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಸಮ್ಮಿಶ್ರ ಸರ್ಕಾರದಲ್ಲಿ ನಮ್ಮ ಪಕ್ಷದ ಎಲ್ಲಾ ನಿಲುವುಗಳನ್ನು ಅಳವಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಇವತ್ತು ಭಿನ್ನಾಭಿಪ್ರಾಯಗಳ

ಬಗ್ಗೆ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಿದ್ದಾರೆ. ನಿಮ್ಮಲ್ಲಿ ಒಡಂಬಡಿಕೆಯೇ ಇಲ್ಲವೆಂದು ಹೇಳುತ್ತಿದ್ದಾರೆ. ಇದೀಗ ತಾನೇ ಮಾನ್ಯ ಕರುಣಾನಿಧಿಯವರ ಹೇಳಿಕೆ ಹೇಳಿದೆ. ಇವತ್ತು ಈ coalition era ದಲ್ಲಿ ಎಲ್ಲಾ ಪಕ್ಷದಗಳಲ್ಲೂ ಈ ಸಮಸ್ಯೆಗಳು ಇದ್ದೇ ಇವೆ. ಎಲ್ಲಾ ಪಕ್ಷಗಳಲ್ಲೂ ಇವತ್ತು ಈ ತೊಂದರೆಗಳನ್ನು ನೋಡುತ್ತಿದ್ದೇವೆ. Co-ordination committeeಯೊಳಗೆ ನೀವು ಬಗೆಹರಿಸಿಕೊಂಡು ಆಮೇಲೆ ಸರ್ಕಾರದ ತೀರ್ಮಾನಗಳನ್ನು ಜನತೆ ಮುಂದೆ ಇಡಿ ಎಂದು ಹೇಳುತ್ತಾರೆ. Delhi ಯಲ್ಲೇನಾಗಿದೆ? ಅಲ್ಲಿಯೂ ಕೂಡ coordination committee ಇದೆ. Coordination committee ಯಲ್ಲಿ ತೀರ್ಮಾನ ಮಾಡಿ ಹೇಳುತ್ತಿಲ್ಲ. ಅಲ್ಲಿಯೂ ಇದೇ ಕತೆ ನಡೆಯುತ್ತಿದೆ. Coalition era ಏನು ನಡೆಯುತ್ತಿದೆ, ಈ ಒಂದು ವ್ಯವಸ್ಥೆಯೊಳಗೆ ನಾವಿವತ್ತು ಇಲ್ಲಿ ಏನು ನಿಂತಿದ್ದೇವೆ, ಆಯಾ ಪಕ್ಷಗಳಿಗೆ ಅವರದೇ ಆದಂಥ limitation ಇರುತ್ತದೆ. ಅದರಿಂದ ಈ ಮಾತನ್ನು ಹೇಳಿದ್ದೇನೆ. ಆದರೆ. ಏನು ಈ ಚರ್ಚೆಯಲ್ಲಿ ತೌಡು ಕುಟ್ಟುವ ಕೆಲಸವಾಗುತ್ತದೆ ಎಂದು ಕೆಲವು ಸದಸ್ಯರು ಅಭಿಪ್ರಾಯಪಟ್ಟಿದ್ದೀರಿ, ಇವತ್ತು ಕಾನೂನಿನ ಚೌಕಟ್ಟಿನಲ್ಲಿ Supreme Courtನ ತೀರ್ಮಾನದ ಪ್ರಕಾರ ನಾವೇನು ಹೆಜ್ಜೆ ಇಡಬೇಕಾಗಿದೆ, ಅದಕ್ಕೆ ನಾವು ತಲೆಬಾಗಬೇಕಾಗುತ್ತದೆ. ಆದರೆ, ಏನು frame work agreement ಪ್ರಕಾರ High Courtನವರು ಏನು ತೀರ್ಮಾನ ಕೊಟ್ಟಿದ್ದಾರೆ, ಆ ತೀರ್ಮಾನಕ್ಕೆ ಇವತು Supreme Court ನಮಗೆ ತೀರ್ಮಾನವನ್ನು ಕೊಟ್ಟಿದೆ ಆ ವ್ಯಾಪ್ತಿಯೊಳಗೆ ಇವತ್ತು ಈ ರಾಜ್ಯದ ರೈತರ ಆಸ್ತಿಗಳನ್ನು ಉಳಿಸತಕ್ಕಂಥದ್ದಕ್ಕೆ excess land ಅನ್ನು ಏನು ಕೊಟ್ಟಿದ್ದೇವೆ, ಕೆಲವರು ಕೊಟ್ಟಿಲ್ಲವೆಂದು ಹೇಳುತ್ತಾರೆ, ನನ್ನ ಹತ್ತಿರ ಮಾಹಿತಿ ಇದೆ. ಕೊಟ್ಟಿದ್ದೇವೆ. ಎಲ್ಲಿ ನಾವು ಅದನ್ನು ವಾಪಸ್ಸು ಪಡೆಯಬೇಕು ಅದನ್ನು ಪಡೆಯುತ್ತೇವೆ. ಈಗಾಗಲೇ ನಾನು ಅವರಿಗೆ ಹೇಳಿದೆ. Supreme Court ನ ಒಂದು ಸೂಚನೆ ಮೇರೆಗೆ, ತೀರ್ಮಾನದ ಮೇರೆಗೆ ಕೆಲಸ ಮಾಡಿ ಎಂದು ಹೇಳಿದ್ದೇವೆ. ಅವರಿಗೆ ಪಾಪ ಸಂಪೂರ್ಣ land ಬೇಕಂತೆ! Townshipಗೂ ಸೇರಿಸಿ land ಕೊಟ್ಟುಬಿಟ್ಟರೆ ಆಮೇಲೆ ಕೆಲಸ ಮಾಡುತ್ತಾರಂತೆ! ಅವರು ಲೆಟರ್ ಬರೆಯುತ್ತಾರೆ. ಅದರಿಂದ ಸರ್ಕಾರದ ಜವಾಬ್ದಾರಿ ಏನಿದೆ, ಈ ರಾಜ್ಯದ ರೈತರ ಭೂಮಿಯನ್ನು ರಕ್ಷಣೆ ಮಾಡತಕ್ಕಂಥದ್ದಕ್ಕೆ ಇವತ್ತೇನು ಕೆಲವು ತಪ್ಪುಗಳಾಗಿವೆ ಆ ತಪ್ಪುಗಳನ್ನು ಸರಿಪಡಿಸುವಂಥ ಕೆಲಸವನ್ನು ನಾನು

ಮಾಡುತ್ತೇನೆ. ಈ ಒಂದು ಸುದೀರ್ಘವಾದ ಚರ್ಚೆಯನ್ನೇನು ಸದನದಲ್ಲಿ ಮಾಡಿದ್ದೇವೆ ಇದು ಕೇವಲ ಚರ್ಚೆಗೆ ಬಿಡತಕ್ಕಂಥ ಪ್ರಶ್ನೆ ಇಲ್ಲ. ಚರ್ಚೆಗೆ ಇದು ಸೀಮಿತವಾಗತಕ್ಕಂಥ ಪ್ರಶ್ನೆ ಇಲ್ಲ. ಈ ಒಂದು ವಿಷಯದಲ್ಲಿ ಏನು ಕೆಲವು ಹಂತ ಹಂತಗಳಲ್ಲಿ ಮಾರ್ಪಾಟುಗಳಾಗಿವೆ ಅದರಲ್ಲೇನು ಸರ್ಕಾರ ಜಮೀನನ್ನು ವಶಪಡಿಸಿಕೊಳ್ಳಬೇಕಾಗಿದೆ, ವಶಪಡಿಸಿಕೊಳ್ಳುವುದರ ಜೊತೆಗೆ ಇವತ್ತು ಒಂದು ತನಿಖೆಯನ್ನು ಮಾಡತಕ್ಕಂಥದ್ದಕ್ಕೆ ಸರ್ಕಾರ ತೀರ್ಮಾನ ಮಾಡಿದೆ ನ್ಯಾಯಾಂಗ ತನಿಖೆಯನ್ನು ಮಾಡತಕ್ಕಂಥದ್ದಕ್ಕೆ ತೀರ್ಮಾನವನ್ನು ಮಾಡಿದ್ದೇವೆ. ಅದನ್ನು 2 ತಿಂಗಳೊಳಗೆ ಈ ತೀರ್ಮಾನವನ್ನು ಕೊಡಬೇಕೆಂದು ಹೇಳಿ ನಾವು ಸೂಚನೆಯನ್ನು ಕೊಟ್ಟು ಆ ನ್ಯಾಯಾಂಗ ತನಿಖೆಗೆ ಸರ್ಕಾರದ ವತಿಯಿಂದ ಇವತ್ತು ಈ ಸಂದರ್ಭದಲ್ಲಿ ನಿಮ್ಮ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಬಹಳ ನಿರೀಕ್ಷಣೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಇದರಲ್ಲಿ ನಿರೀಕ್ಷೆ ಏನಿದೆ?

ಶ್ರೀ ವಾಟಾಳ್ ನಾಗರಾಜ್ : ಬೆಟ್ಟ ಅಗೆದು ಇಲಿಯೂ ಅಲ್ಲ, ಇರುವೆ ಬಂದ ಹಾಗಾಯಿತು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನ್ಯಾಯಾಂಗ ತನಿಖೆ ಎಂದರೆ ಅದು ಸತ್ತು. ಹೋಯಿತು.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : 80ನೇ ಇಸವಿಯಲ್ಲಿ ಸರ್ಕಸ್ ದುರಂತದಲ್ಲಿ ಸಾವಿರ ಜನ ಮಕ್ಕಳು ಸತ್ತರು, ನ್ಯಾಯಾಂಗ ತನಿಖೆಯಾಗಿ 30 ವರ್ಷಗಳಾಯಿತು. ಏನೂ ಆಗಲಿಲ್ಲ. ನ್ಯಾಯಾಂಗ ತನಿಖೆ ಅಂದರೆ ಒಂದು ಸಮಾಧಿ ಕಟ್ಟಿಸಿದ ಹಾಗೆ; ಒಂದು ಗೋರಿ ಕಟ್ಟಿದ ಹಾಗೆ.

(ಗೊಂದಲ)

ಅಧ್ಯಕ್ಷರು : ಆಯಿತು. ಶ್ರೀರಾಮರೆಡ್ಡಿಯವರೆ, ನಿಮ್ಮ ನಿಮ್ಮ ಅಭಿಪ್ರಾಯಗಳನ್ನು ಹೇಳಿದ್ದೀರಿ. ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ನೀವು ಒಂದು ಬಿಲ್ಲನ್ನು ತಂದಿದ್ದರೆ ನಿಮ್ಮ ಒಂದು ಶಕ್ತಿ ತೀರ್ಮಾನವಾಗುತ್ತಿತ್ತು.

ಅಧ್ಯಕ್ಷರು : ಆಯಿತು. ಹೇಳಿ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಪ್ರಕಾಶ್‌ರವರೇ, ಬಳ್ಳಾರಿ ವಿಷಯ ಮಾತನಾಡುತ್ತಿದ್ದೀರಾ? ಈಗ ಸುದೀರ್ಘವಾದಂಥ ಉತ್ತರ ಕೊಟ್ಟಿದ್ದಾರೆ. ಏನೇನು ಕಡತದಲ್ಲಿದೆ ಅದನ್ನೆಲ್ಲಾ ನೋಡಿಕೊಂಡು ಉತ್ತರ ಕೊಟ್ಟಿದ್ದಾರೆ. For that I have to appreciate. ಬಹಳಷ್ಟು ಟೈಂ ತೆಗೆದುಕೊಂಡಿದ್ದಾರೆ. ಸದನಕ್ಕೆ ತಿಳಿಸಬೇಕೆಂದು ಮಾಡಿದ್ದಾರೆ. ಇವತ್ತು ಸದನದಲ್ಲಿ adjournment motion ಮೇಲೆ ಚರ್ಚೆಯಾಗಿದೆ. ಕೊನೆಯದಾಗಿ ಮುಖ್ಯಮಂತ್ರಿಗಳೇನು ಹೇಳುತ್ತಾರೆ, High Court Judgement ಏನಿದೆ, Supreme Court Judgement ಅಂತ ಆದರೆ Supreme Court judgment ಕೊಟ್ಟಿಲ್ಲ. ಸರ್ಕಾರಕ್ಕೆ ಛೀಮಾರಿ ಹಾಕಿದೆ. ಮೊಟ್ಟಮೊದಲನೆಯದಾಗಿ fine ಹಾಕಿದ್ದಾರೆ. ಮತ್ತೆ ಇವರೇ ಹೇಳುತ್ತಾರೆ, ಸದನದ ಮೇಲೆ ಬಿಟ್ಟಿದ್ದೇವೆ, ನಿಮ್ಮೆಲ್ಲರ ಅಭಿಪ್ರಾಯ ತೆಗೆದುಕೊಂಡು ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಇವತ್ತು review petitionಗೆ ನೀವೇನು ಮಾಡಲಿಕ್ಕೆ ಹೊರಟಿದ್ದೀರಿ, ಹಾಕಿದ್ದೀರೋ, ಬಿಟ್ಟಿದ್ದೀರೋ; ಅದನ್ನು ಸದನಕ್ಕೆ ಹೇಳಬೇಕು. ಸದನ ನಡೆಯತಕ್ಕಂಥ ಕಾಲದಲ್ಲಿ ಸದನದ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಾರದೆ ನಡೆಯುತ್ತಿದೆ. ಒಟ್ಟು ಈ ರಾಜ್ಯದಲ್ಲಿ ಇವತ್ತು ಏನು ಚರ್ಚೆಯಾಗಿದೆ. ಏನಾಗಿದೆ ಇದರ ಅಂತಿಮ ತೀರ್ಮಾನವೇನು? ಸರ್ಕಾರ ಇವತ್ತು judicial enquiry ಎಂದು ಹೇಳಿದ್ದೀರಿ. ಮೊದಲಿನಿಂದಲೂ ಕೂಡ ಕಾಂಗ್ರೆಸ್ ಪಕ್ಷ CBI enquiry ಆಗಬೇಕು ಅಂತ ಒತ್ತಾಯ ಮಾಡುತ್ತಿದೆ. CBI enquiry ಯಾದರೆ ಸಮಗ್ರವಾದ ವಿಚಾರಗಳು ಕರ್ನಾಟಕ ಜನತೆ ಮುಂದೆ ಬರುತ್ತವೆ. ಅದಕ್ಕೆ CBI enquiry ಯಾಗಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗಾಗಲೇ Judicial probe ಮಾಡುತ್ತೇವೆಂದು ಹೇಳಿ ಮುಖ್ಯಮಂತ್ರಿಗಳು ಹೇಳಿದ್ದಾರೆ, ಅದು CBI enquiry ಆಗಬೇಕೆಂಬ demand ಅನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಮಾಡಿದ್ದಾರೆ. ನಾನೂ ಕೂಡ ಅದನ್ನು reiterate ಮಾಡುತ್ತೇನೆ. ಈ ಹಿಂದೆ ಚರ್ಚೆ ಮಾಡಿದಾಗ

ಇಲ್ಲಿ ಹೇಳಿದ್ದೇವೆ. ಅನೇಕ ಸದಸ್ಯರೂ ಕೂಡ ಹೇಳಿದ್ದಾರೆ. ಶ್ರೀರಾಮರೆಡ್ಡಿಯವರು, ಮಾಧುಸ್ವಾಮಿಯವರು ಎಲ್ಲರೂ ಕೂಡ CBI enquiry ಆಗಲಿ ಎನ್ನತಕ್ಕಂಥ ಮಾತನ್ನು ಅವರೂ ಕೂಡ ಒಪ್ಪಿದ್ದಾರೆ. ಅದಕ್ಕೆ ಇದು CBI enquiry ಆಗಲಿ. ಏಕೆಂದರೆ, ನಿಷ್ಪಕ್ಷಪಾತವಾಗಿ ಆಗಬೇಕು. ಎಲ್ಲಾ ನಿಮ್ಮ records ಕೂಡ ಸಿಗಬೇಕು. ಈ ಕಂಪನಿ ಇರುವುದು global, ಹೊರಗಡೆಯವರು foreigners ಕೂಡ ಎಲ್ಲರೂ ಕೂಡ directors ಇದ್ದಾರೆ. ಎನ್‌ಆರ್‌ವಿ ಡೈರೆಕ್ಟರ್ಸ್ ಇದ್ದಾರೆ. ಅದಕ್ಕೆ ಇದು ಬರೀ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡುತ್ತೇವೆ ಎಂದರೆ ಹತ್ತು ವರ್ಷವೋ ಐದು ವರ್ಷವೋ ಇದಕ್ಕೆ ಅಂತ್ಯವೇ ಇಲ್ಲ. ಎಕ್ಸ್‌ಟೆನ್‌ಷನ್ ಎಕ್ಸ್‌ಟೆನ್‌ಷನ್ ಕೊನೆಗೆ ಏನೂ ಪರಿಣಾಮ ಆಗುವುದಿಲ್ಲ. ಕೊನೆಗೆ ಅದು ಕ್ಯಾಬಿನೆಟ್‌ನಲ್ಲಿ ಬಂದು ಕ್ಲೋಜ್ ಆಗಿಬಿಡುತ್ತದೆ. ಆದುದರಿಂದ ಅದಕ್ಕೆ ಸಿಬಿಐ ಎನ್‌ಕ್ವೈರಿ ಆಗಲಿ. ಏಕೆಂದರೆ ಅವರು ಇದರಲ್ಲಿ ನಿಷ್ಪಕ್ಷಪಾತವಾಗಿ ಎನ್‌ಕ್ವೈರಿ ಮಾಡುವುದಕ್ಕೆ ತಯಾರಿದ್ದಾರೆ. ಅದಕ್ಕೆ ನಾವು ಸ್ವಾಗತ ಮಾಡುತ್ತೇವೆ. ನಿಮಗೂ ಕೂಡ ಅದರಿಂದ ತೊಂದರೆ ಇಲ್ಲ, ಅದಕ್ಕೆ ನೀವು ರೆಫರ್ ಮಾಡಿ. ಇನ್ನು ಎರಡನೆಯದು ನಾನೂ ಈ ಹಿಂದೆ ಹೇಳಿದೆ ಅವರೂ ಕೂಡ ಕೇಳಿರುವಂತಹ ವಿಷಯಕ್ಕೆ ಉತ್ತರ ಕೊಟ್ಟರು. ಮತ್ತು ಇರಿಗೇಷನ್ ಬಗ್ಗೆ ಕೂಡ ಹೇಳಿದರು. ಎಷ್ಟೊಂದು ವಿಶ್ವಾಸ ಪ್ರೀತಿ ಇದೆ ಎಂದೂ ಕೂಡ ಇದರ ಬಗ್ಗೆ ಎಂದು ಹೇಳಿದ್ದಾರೆ. ಆದರೆ ಒಂದು ಮಾತು ಹೇಳಿದರು ಅವರು ಏನೆಂದರೆ ಇವತ್ತಿನ ದಿವಸ ಬಿಎಂಐಸಿ ಪ್ರಾಜೆಕ್ಟ್ ಬಗ್ಗೆ ನಾವೇನು ನಿಲುವನ್ನು ತೆಗೆದುಕೊಂಡಿದ್ದೇವೆ ಅಥವಾ ಪತ್ರಿಕೆಯಲ್ಲಿ ನಮ್ಮ ಅಡ್ವರ್ ಟೈಸ್‌ಮೆಂಟ್ ಕೊಟ್ಟು ನಿಲುವನ್ನು ತೋರಿಸಿದ್ದೇವೆ ಇದು ನಮ್ಮ ಎಲೆಕ್ಷನ್ ಮ್ಯಾನಿಫೆಸ್ಟೊ. ಅದನ್ನು ಹೇಳಿಕೊಂಡೇ ನಾವು ಚುನಾವಣೆಯಲ್ಲಿ ಬಂದಿದ್ದೇವೆ ಎನ್ನುವಂತಹ ಮಾತನ್ನು ಇಲ್ಲಿಯೂ ಕೂಡ ಅವರು ದೃಢಪಡಿಸಿದ್ದಾರೆ. ಅಂದರೆ ಇದು ಚುನಾವಣೆಗೆ ಸ್ಟಂಟೇ ಹೊರತು ಬೇರೆ ಏನು ಇಲ್ಲ. ಇನ್ನು ಮೂರನೆಯದಾಗಿ ನಿನ್ನೆ ಕೂಡ ಅವರು ಏನು ಹೇಳಿದರು, ಇದು ನಮ್ಮ ಪಕ್ಷದ ನಿಲುವು. ಸರ್ಕಾರದ ನಿಲುವು ಎನ್ನುವಂತಹ ಪ್ರಶ್ನೆನೇ ಹೇಳಲಿಲ್ಲ. ನಿಮಗೆ ಬಿಟ್ಟಿದ್ದು, ನೀವು ತೀರ್ಮಾನ ತೆಗೆದುಕೊಳ್ಳಿ, ಅದು ನಮ್ಮ ಪಕ್ಷದ ನಿಲುವಿದೆ, ಆ ಪಕ್ಷದ ನಿಲುವನ್ನು ನಾನು ಇವತ್ತು ಹೇಳುತ್ತಿದ್ದೇನೆ ಎನ್ನುವಂತಹ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ. ಹಾಗಾದರೆ ಸ್ವಾಮಿ ಸರ್ಕಾರದ ನಿಲುವು ಯಾವುದು? ತಾವು

ಮುಖ್ಯಮಂತ್ರಿಗಳಾಗಿ ಜಂಟಿ ಸರ್ಕಾರದ ನಿಲುವೇನು? ನೀವು ಮತ್ತು ಬಿಜೆಪಿ ಪಕ್ಷ ಸೇರಿ ಸರ್ಕಾರ ನಡೆಸುತ್ತಿದ್ದೀರಿ. ನಿಮ್ಮ ಕ್ಯಾಬಿನೆಟಿನ ನಿರ್ಣಯವೇನು? ಯಾವ ನಿರ್ಣಯವನ್ನು ನೀವು ತೆಗೆದುಕೊಳ್ಳಬೇಕೆಂದು ಮಾಡಿದ್ದೇವೆ ಎಂಬುದನ್ನು ನೀವು ಹೇಳಲಿಲ್ಲ. ಆದುದರಿಂದ ಮಾನ್ಯ ಅಧ್ಯಕ್ಷರೆ, ಇದು ಪಕ್ಷದ ನಿಲುವು ಎಂದು ಹೇಳುತ್ತಿದ್ದಾರೆ, ಅದರ ಬಗ್ಗೆ ಅವರು ಸ್ಪಷ್ಟವಾದಂತಹ ಮಾತನ್ನು ಹೇಳುತ್ತಿಲ್ಲ. ಎರಡನೆಯದಾಗಿ ಎಲೆಕ್ಷನ್ ಮ್ಯಾನಿಫೆಸ್ಟೋ ಇದೆ ಎಂದೂ ಕೂಡ ಹೇಳಿದರು. ಇದೆಲ್ಲಾ ಕೂಡ ಏನು ತೋರಿಸುತ್ತಿದೆ ಅಂದರೆ ಅವರದೇ ಆದಂತಹ ಹಿಡನ್ ಅಜೆಂಡಾ ಏನಿದೆ, ಆ ಹಿಡನ್ ಅಜೆಂಡಾಗೆ ಹೀಗೆ ಒಂದೊಂದು ಹೊರಗಡೆ ತಂದು ಪಾಪ್ಯಲಾರಿಟಿಗಳಿಸಬೇಕು ಎಂದು ಮಾಡುತ್ತಿದ್ದಾರೆಯೇ ಹೊರತು ಬಡವರ ಬಗ್ಗೆ ಚಿಂತನೆ ಮಾಡಿ, ಜಮೀನಿನ ಬಗ್ಗೆ ಯೋಚನೆ ಮಾಡಿ ನಾವು ಏನಾದರೂ ಮಾಡುತ್ತೇವೆ ಅನ್ನುವುದಿಲ್ಲ ಹೊರತಾಗಿ ನಾಳೆ ವಾಪಸ್ಸು ಕೊಡುತ್ತೇವೆ ಎಂದರೆ ಬಡವರಿಗೆ ವಾಪಸ್ಸು ಹೇಗೆ ಕೊಡುತ್ತೀರಿ? ಕಾನೂನು ಇಲ್ಲದೆ ಕೊಡುತ್ತೀರಾ? ಯಾವುದೇ ಒಂದು ಕಾನೂನು ತರದೆ ಕೊಡುತ್ತೀರಾ? ಮತ್ತು ಬಡವರ ಬಗ್ಗೆ ಚಿಂತನೆ ಮಾಡತಕ್ಕಂಥವರು ಇಲ್ಲಿಯವರೆಗೆ ಏನಾದರೂ ಅಡ್ವೊಕೇಟ್ ಜನರಲ್, ಲಾ ಡಿಪಾರ್ಟ್‌ಮೆಂಟ್ ಹಾಗೂ ಬೇರೆ ಎಲ್ಲಾ ಇಲಾಖೆಗಳನ್ನು ಕನ್‌ಸಲ್ಟ್ ಮಾಡಿದ್ದೀರಾ? ಕನ್‌ಸಲ್ಟ್ ಮಾಡದೆ ಇಲ್ಲಿ ಉತ್ತರ ಕೊಡುವುದಕ್ಕೆ ಬಂದಿದ್ದೀರಾ?

ಅಧ್ಯಕ್ಷರು : ಏನು ಸದಸ್ಯರು ತಾವು ತಾವೇ ಗಲಾಟೆ ಮಾಡಿ ಮಾತನಾಡಿದರೆ ಹೇಗೆ ಇದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇವತ್ತು ಈ ಪ್ರಸ್ತಾಪವಾಗುತ್ತಿದೆ. ಆ ವಿಷಯಕ್ಕೆ ಸರಿಯಾದಂತಹ ಉತ್ತರವನ್ನು ಕೊಡಬೇಕಾಗಿದ್ದರೆ ಎಲ್ಲಾ legal battles ರೆಡಿ ಮಾಡಿಕೊಂಡು. ಹೌದು, ಇದು ಈ ರೀತಿಯಾದರೆ ನಾನು ಜಮೀನನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಹಾಗೂ ಇದನ್ನು ಮರು ಹಂಚಿಕೆ ಮಾಡುತ್ತೇನೆ. ಅಥವಾ ಬೇರೆ ರೀತಿಯಿಂದ ಮಾಡುತ್ತೇನೆ ಎಂಬ ಮಾತನ್ನು ಹೇಳಬೇಕಾಗಿತ್ತು. ಲೀಗಲ್ ಲ್ಯಾಕುನ ಬಗ್ಗೆ ಹೇಳುತ್ತಾರೆ. ಮತ್ತು ಇದು ಎಲೆಕ್ಷನ್ ಮ್ಯಾನಿಫಸ್ಟೊ ಇದೆ, ಅದರ ಮೇಲೆ ಜನ ಮತ ಕೊಟ್ಟಿದ್ದಾರೆ ಎಂದು ಹೇಳಿದಿರಿ. ಮೂರನೆಯದಾಗಿ ಪಕ್ಷದ ನಿಲುವು ಎಂದು ಹೇಳಿದಿರಿ. ಅದಕ್ಕೆ ಜ್ಯುಡಿಷಿಯಲಿ, ಹೈಕೋರ್ಟ್ ಜಡ್ಜ್ ಮಾತ್ರ ಇದರ ಎನ್‌ಕ್ವೈರಿ ಮಾಡುತ್ತಾರೆ ಎಂದು ಹೇಳಿದಿರಿ. ನಿಜವಾಗಲೂ ಅವರಿಗೆ ಕಾಳಜಿ ಇದ್ದರೆ, ಅದನ್ನು ಸಿ.ಬಿ.ಐ.ಗೆ ರೆಫರ್

ಮಾಡಿ. ಮತ್ತು ಇದು ನಿಮ್ಮ ಪಕ್ಷದ ನಿಲುವು ಇದ್ದ ಕಾರಣ ಸರ್ಕಾರದ ನಿಲುವು ಆಗುವುದಿಲ್ಲ. ಸತ್ಯಕ್ಕೆ ದೂರವಾದಂತಹ ಮಾತುಗಳನ್ನು ತಾವು ಪ್ರಸ್ತಾಪ ಮಾಡಿದಿರಿ ಎಂದು ನಾವು ಹೇಳಬೇಕಾಗುತ್ತದೆ. ಅದಕ್ಕೆ ತಾವು ಸ್ಪಷ್ಟವಾದಂತಹ ಉತ್ತರವನ್ನು ಹೇಳಬೇಕು.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ...

ಶ್ರೀ ಕೆ.ಎಸ್. ಈಶ್ವರಪ್ಪ : ಒಂದು ನಿಮಿಷ...

(ಗೊಂದಲ)

ಅಧ್ಯಕ್ಷರು : ಇದು ಗಲಾಟೆಯಾಗಿ ಹೋಯಿತು. ಇದು ಸದನವಾಗುವುದಿಲ್ಲ. ಈಗ ಸಭಾನಾಯಕರು ಮಾತನಾಡುತ್ತಾರೆ, ಆಮೇಲೆ ತಾವು ಮಾತನಾಡಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಇವತ್ತು ಕಳೆದ ಅನೇಕ ವರ್ಷಗಳಿಂದ ಆದಂತಹ ಅವ್ಯವಹಾರಗಳ ಬಗ್ಗೆ ವಿರೋಧ ಪಕ್ಷದ ನಾಯಕರೂ ಕೂಡ ತುಂಬಾ ಸ್ಪಷ್ಟ ಮಾಡಿದ್ದಾರೆ. ನಮ್ಮ ಫ್ಲೋರ್ ಲೀಡರ್ಸ್ ಕೂಡ ತುಂಬಾ ಸ್ಪಷ್ಟವಾಗಿ ಹೇಳಿದ್ದಾರೆ. ನಮ್ಮ ನಾಯಕರು ಈ ರಾಜ್ಯದ ಮುಖ್ಯಮಂತ್ರಿಗಳೂ ಕೂಡ ತುಂಬಾ ಸ್ಪಷ್ಟವಾಗಿ ಎಲ್ಲಾ ಡಾಕ್ಯುಮೆಂಟ್ಸ್‌ಗಳನ್ನೂ ಸಹ ತುಂಬಾ ವಿವರವಾಗಿ ಇಡೀ ಕರ್ನಾಟಕ ರಾಜ್ಯದ ಜನತೆಗೆ ಅರ್ಥವಾಗುವ ಹಾಗೆ ಇಟ್ಟಿದ್ದಾರೆ.

(ಗೊಂದಲ)

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ. ಅವರು ಏನು ಹೇಳುತ್ತಾರೆ, ಹೇಳಲಿ, ಅವರ ಅಭಿಪ್ರಾಯ ಹೇಳುವುದಕ್ಕೂ ಬಿಡುವುದಿಲ್ಲ ನೀವು.

(ಗೊಂದಲ)

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ, ಏನಿದು ಗರಡಿ ಮನೆನಾ ಇದು? ದಯಮಾಡಿ ಕುಳಿತುಕೊಳ್ಳಿ. ಯಾರಿಗೆ ನಾನು ಅವಕಾಶ ಕೊಟ್ಟಿದ್ದೇನೆ ಅವರು ಮಾತನಾಡಬೇಕಾದರೆ ನೀವು ಕೇಳಬೇಕು. ಕೇಳದೆ ನೀವು ಮಧ್ಯದಲ್ಲಿ ಬಾಯಿಹಾಕಿ ಏನೆಂದು ಕೇಳದೆ ಇದ್ದರೆ ಏನಿದು? ನೀವೆಲ್ಲಾ ಜನ ಪ್ರತಿನಿಧಿಗಳು. ಅವರು ಪೂರ್ತಿ ಮಾಡಿದ್ದಾರೇನು? ಅವರು ಮಾತನಾಡುವುದು ಪೂರ್ತಿಯಾದಮೇಲೆ ಯಾರಾದರೂ

ರಿಯಾಕ್ಟ್ ಮಾಡಿ. ಅದು ಬಿಟ್ಟು ಮಧ್ಯದಲ್ಲಿ ಬಾಯಿ ಹಾಕಿಕೊಂಡು ಎಲ್ಲಾ ನಿಂತುಕೊಂಡು ಬಿಡುವುದು. ಏನಿದು? ಏನೂ ಗೌರವ ಇಲ್ಲ ಎಂತಾದ್ದು ಇಲ್ಲ. ಮಾತನಾಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ಒಂದು ವಾರದಿಂದ, ಕರ್ನಾಟಕ ರಾಜ್ಯದ ರೈತರ ಭೂಮಿಯನ್ನು ಲೂಟಿ ಮಾಡಿರುವುದು ಯಾರು ಎನ್ನುವ ಅಂಶದ ಬಗ್ಗೆ ಚರ್ಚೆಯಾಗಿದೆ. ದಾಖಲೆ ಸಮೇತ ಯಾರು ಎನ್ನುವುದನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳು ತುಂಬಾ ಸ್ಪಷ್ಟವಾಗಿ ಇಟ್ಟಿದ್ದಾರೆ.

(ಗೊಂದಲ)

ಅಧ್ಯಕ್ಷರು : ಮಧ್ಯದಲ್ಲಿ ಯಾರೂ ಮಾತನಾಡಬೇಡಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಇವರೆಲ್ಲಾ ಸೀನಿಯರ್ ಶಾಸಕರು ಎಲ್ಲಾರೂ ಕೂಡ ಮಾರ್ಗದರ್ಶನ ಮಾಡುತ್ತಿರುವವರು, ನಿಮಗೆಲ್ಲಾ ನಿಮ್ಮ ನಾಯಕರೇ ಹೇಳಬೇಕು. ಮಾನ್ಯ ಅಧ್ಯಕ್ಷರೆ ಇಷ್ಟೇ, ಸನ್ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಇಟ್ಟಿದ್ದಾರೆ. ಭಾರತೀಯ ಜನತಾ ಪಕ್ಷದ ನಿಲುವು ಕೂಡ ನಮ್ಮ ಮಾನ್ಯ ಮುಖ್ಯಮಂತ್ರಿಗಳು ನೀಡಿರುವಂತಹ ನಿಲುವಿನಲ್ಲೂ ಏನೂ ವ್ಯತ್ಯಾಸ ಇಲ್ಲ.

(ಗೊಂದಲ)

ಅಧ್ಯಕ್ಷರು : ನೀವು ಕುಳಿತುಕೊಳ್ಳಿ, ಅವರು ಏನು ಹೇಳುತ್ತಾರೋ ಹೇಳಲಿ. ಕುಳಿತುಕೊಳ್ಳಿ, ನೀವು ಮಂತ್ರಿಗಳು ಎದ್ದು ನಿಂತುಕೊಳ್ಳುತ್ತೀರಿ, ಎಲ್ಲಾ ಎದ್ದು ನಿಂತುಕೊಳ್ಳುತ್ತೀರಿ. ನಿಮಗೆ ಯಾರಿಗೂ ಜವಾಬ್ದಾರಿನೇ ಇಲ್ಲ.

ಶ್ರೀ ಕೆ.ಎಸ್. ಈಶ್ವರಪ್ಪ : ತುಂಬಾ ಸ್ಪಷ್ಟವಾಗಿ ಭಾರತೀಯ ಜನತಾ ಪಕ್ಷ ಹೇಳುತ್ತಾ ಬಂದಿದೆ. ನಮ್ಮ ನಿಲುವೇನು? ರೈತರಿಂದ ಪಡೆದಂತಹ ಎಕ್ಸೆಸ್ ಭೂಮಿಯನ್ನು ರೈತರಿಗೆ ವಾಪಸ್ಸು ಕೊಡಬೇಕು ಎನ್ನುವಂತಹ ಒತ್ತಾಯ ಅನೇಕ ಸಮಯದಿಂದ ಇತ್ತು. ತುಂಬಾ ಸ್ಪಷ್ಟವಾಗಿ ಯಾರ್‍ಯಾರು ತಪ್ಪಿತಸ್ಥರು ಇದ್ದಾರೆ ಅದನ್ನೆಲ್ಲಾ ಗಮನಿಸಬೇಕೆಂದು ಎನ್ನುವಂತಹ ಅಂಶವನ್ನು ಕೂಡ ಹೇಳಿದ್ದಾರೆ. ಇಂತಹ ಸಂದರ್ಭದಲ್ಲಿ ಬಡರೈತರ ಆ ಭೂಮಿಯನ್ನು ಯಾವ ಒಬ್ಬ ಕಂಟ್ರಾಕ್ಟರ್‌ಗೆ ಎಕ್ಸೆಸ್

ಕೊಡುವಂತಹ ಪ್ರಯತ್ನ ನಡೆಸಿ ಅಲ್ಲಿ ಭೂಮಿ ದಂಧೆಯನ್ನು ಮಾಡುವುದಕ್ಕೆ ಅವಕಾಶ ಕೊಡಕೂಡದು ಎನ್ನುವ ನಮ್ಮ ನಿಲುವನ್ನು ತುಂಬಾ ಸ್ಪಷ್ಟವಾಗಿ ಮಾನ್ಯ ಮುಖ್ಯಮಂತ್ರಿಗಳು ಒತ್ತಿ ಹೇಳಿದ್ದಾರೆ. ಅವರು ಇನ್ನೊಂದು ಮಾತು ಸ್ಪಷ್ಟವಾಗಿ ಹೇಳಿದ್ದಾರೆ, ಆ ಭೂಮಿಯನ್ನು ರೈತರಿಗೆ ವಾಪಸ್ಸು ಏನು ಕೊಡುತ್ತೇವೆ, ಇದು ಗಂಡು ನಿಲುವು, ಸರಿಯಾದ ನಿಲುವು, ಮಾನ್ಯ ಮುಖ್ಯಮಂತ್ರಿಗಳ ನಿಲುವು ಗಂಡು ನಿಲುವು. 11 ವರ್ಷದಿಂದ ಈ ಭೂಮಿಯನ್ನು ಕೊಡುವುದಕ್ಕೆ ಆಗದೇ ಇದ್ದಂತಹ ಮಾನ್ಯ ದೇಶಪಾಂಡೆಯವರು ಗಮನಕ್ಕೆ ತಂದರು. ಎಷ್ಟು ದಿನದಲ್ಲಿ ಕೊಡುತ್ತೇವೆ ಎಂದು ಹೇಳಿ ಎಂದು ಹೇಳಿದರು. ಒಂದು ಕಡೆ ಹಿರಿಯ ಸಚಿವರಾದ ಮಲ್ಲಿಕಾರ್ಜುನ ಖರ್ಗೆಯವರು ಯಾವ ಕಾನೂನು ಪ್ರಕಾರ ಹೇಳುತ್ತಿದ್ದೀರಿ, ಯಾರನ್ನು ಕರೆಸಿ ನೀವು ಮಾತನಾಡಿದ್ದೀರಿ? ಇದು ಯಾವ ನಿಲುವು? ಇದು ಹೇಗೆ ಕೊಡುತ್ತೀರಿ ಭೂಮಿಯನ್ನು ಎಂದು ಒಂದು ಕಡೆ ಹೇಳಿದರೆ, ಮತ್ತೊಂದು ಕಡೆ ದೇಶಪಾಂಡೆಯವರು ಹೇಳುತ್ತಾರೆ ಎಷ್ಟು ದಿವಸದಲ್ಲಿ ಕೊಡುತ್ತೇವೆಂದು ಟೈಂಬಾಂಡ್ ಹೇಳಿ, ಇವರಿಬ್ಬರ ದಂದ್ವದ ಬಗ್ಗೆ ತೀರ್ಮಾನ ಸ್ವಲ್ಪ ನಾನು ಮುಗಿಸುತ್ತೇನೆ ಪ್ಲೀಸ್....

(ಗೊಂದಲ)

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ, ನಾನು ಮಾತನಾಡಲು ಯಾರಾದರೂ ಒಬ್ಬರಿಗೆ ಅವಕಾಶವನ್ನು ಕೊಟ್ಟಮೇಲೆ ಅವರು ಮಾತನಾಡಿ ಮುಗಿಸಿದ ಮೇಲೆ, ಬೇರೆಯವರಿಗೂ ಅವಕಾಶವನ್ನು ಕೊಡುತ್ತೇನೆ, ಮಾತನಾಡಿ. ಇದು ಚರ್ಚೆ ಮಾಡುತ್ತಿರುವಂತಹ ವೇದಿಕೆ, ಚರ್ಚೆ ಮಾಡಬೇಕು, ಇನ್ನು ಚರ್ಚೆ ಅಗತ್ಯವಿದ್ದರೆ ಆಗಲಿ. ಆದರೆ ಒಬ್ಬರು ಮಾತನಾಡುತ್ತಿರುವಾಗಲೇ, ಇನ್ನೊಬ್ಬರು "ಹೋ" ಎಂದು ಕೂಗುವುದು, ಈ ಕಡೆಯವರು ಮಾತನಾಡುವಾಗ ಆ ಕಡೆಯವರು "ಹೋ" ಎಂದು ಕೂಗುವುದು. ಯಾರಿಗೂ ಭೂಷಣವಲ್ಲ, ನಿಮ್ಮ ರಾಜಕೀಯ ವಿಚಾರಗಳು ಏನೇ ಇರಲಿ, ಜನ ಕ್ಷಮಿಸುವುದಿಲ್ಲ, ತಿಳಿದುಕೊಳ್ಳಿ, ಆದುದರಿಂದ ಗೌರವದಿಂದ ನಡೆದುಕೊಳ್ಳಿ, ನಿಯಮಾವಳಿಯ ಪ್ರಕಾರ ನಡೆದುಕೊಳ್ಳಿ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಇವತ್ತು ಸನ್ಮಾನ್ಯ ಮುಖ್ಯಮಂತ್ರಿಯವರು ಇನ್ನೊಂದು ಅಂಶವನ್ನು ಇಡೀ ರಾಜ್ಯದ ಜನತೆಗೆ ಸಮಾಧಾನವಾಗುವ ರೀತಿಯಲ್ಲಿ, ಇವತ್ತು ತಮ್ಮ ನಿಲುವನ್ನು ಸ್ಪಷ್ಟ ಮಾಡಿದ್ದಾರೆ. ಏನು?

ಯಾರ್ಯಾರು ತಪ್ಪಿತಸ್ಥರು ಯಾವ್ಯಾವ ಸಂದರ್ಭದಲ್ಲಿ ಕಾನೂನು ಬಾಹಿರವಾಗಿ ಅಗ್ರಿಮೆಂಟ್ ಅನ್ನು ಯಾರ್ಯಾರ ಸ್ವತ್ತಲ್ಲಿ ಮಾಡಿಕೊಂಡಿದ್ದಾರೋ, ಆ ರೈತರ ಭೂಮಿಯನ್ನು ಅನ್ಯಾಯವಾಗಿ ಲೂಟಿ ಮಾಡಿದ್ದಾರೋ, ಅದರ ಬಗ್ಗೆ ನ್ಯಾಯಾಂಗ ತನಿಖೆಯ ಮುಖಾಂತರ ಹೊರತರಬೇಕಾಗುತ್ತದೆ. ತಪ್ಪಿತಸ್ಥರು ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಯವರು ತೆಗೆದುಕೊಂಡಿರುವಂತಹ ನಿಲುವಿಗೆ, ನ್ಯಾಯಾಂಗ ತನಿಖೆ ಮಾಡುವುದಕ್ಕೆ 'ಭಾರತೀಯ ಜನತಾ ಪಕ್ಷ' ಸರ್ಕಾರದ ಪರವಾಗಿ ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಅವರ ಜೊತೆಗೆ ನಾವು ಇದ್ದೇವೆಂಬ ಮಾತನ್ನು ಈ ಸದನದಲ್ಲಿ ಹೇಳಲಿಚ್ಛಿಸುತ್ತೇನೆ.

ಅಧ್ಯಕ್ಷರು : ಈಗ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡುತ್ತಿದ್ದಾರೆ. ಯಾರೂ ಮಾತನಾಡಬಾರದು, ಅವರು ಮಾತನಾಡಿ ಮುಗಿಸಿದ ಮೇಲೆ, ಬೇರೆಯವರು ಯಾರಾದರೂ ಎದ್ದು ಮಾತನಾಡಬೇಕೇ ಹೊರತು ಮಧ್ಯದಲ್ಲಿ ಯಾರು ನಿಂತುಕೊಂಡರೂ ನಾನು ನೇಮ್ ಮಾಡಿ ಹೊರಗಡೆ ಕಳುಹಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನಾನು ಧೀರ್ಘವಾಗಿ ಮಾತನಾಡುವುದಕ್ಕೆ ನಿಂತಿಲ್ಲ; ಕ್ಲಾರಿಫಿಕೇಷನ್ ಆಗಲೇ ಹೇಳಿ ಆಯಿತು. ಅದಕ್ಕೆ ಅವರು ಆಮೇಲೆ ಅದಕ್ಕೆ ಉತ್ತರವನ್ನು ಹೇಳುತ್ತೇನೆಂದು ಹೇಳಿದ್ದಾರೆ. ಆದರೂ ಒಂದು ಮಾತನ್ನು ಮಾನ್ಯ ಕೆ.ಎಸ್. ಈಶ್ವರಪ್ಪನವರು, ತಮ್ಮ ಬಾಯಿಯಿಂದ ನನ್ನ ಬಾಯಿಗೆ ಹಾಕಿದರು. ಅದು ಏನೆಂದರೆ, ನಾನು ಕೇಳಿದ್ದು, ಇದಕ್ಕಿಂತ ಮುಂಚೆಯೂ ಕೇಳಿದ್ದೆ. ಯಾವ ಕಾನೂನಿನ ಅಡಿಯಲ್ಲಿ ನಾವು ಇದನ್ನು ರಿ ಡಿಸ್ಟ್ರಿಬ್ಯೂಟ್ ಮಾಡುತ್ತೇವೆ, ಅಥವಾ ತೆಗೆದುಕೊಂಡು ಕೊಟ್ಟು ಬಿಡುತ್ತೇವೆಂದು ಹೇಳುತ್ತೀರಿ. ಅದಕ್ಕೆ ಲೀಗಲ್ battle ಇದೆ, ಅದನ್ನು ಸ್ಟಡಿ ಮಾಡಿದ್ದೀರೇನೋ ಎಂದು ಕೇಳಿದೆ. ಅದಕ್ಕೆ ಅವರು ರೈತರಿಗೆ ಜಮೀನನ್ನು ಕೊಡುವುದಕ್ಕೇ ವಿರುದ್ಧ ಇದ್ದಾರೆ. ಇದು ದ್ವಂದ್ವ ನೀತಿ, ಏನು ಇದು? ಮಾನ್ಯ ದೇಶಪಾಂಡೆಯವರು ನಿನ್ನೆ ಹೇಳಿದ್ದಾರೆ, ನಾನು ನಿಮಗೆ ಹೇಳಿದೆ. ನೀವು ಸರ್‌ಪ್ಲಸ್ ಜಮೀನನ್ನು ತೆಗೆದುಕೊಂಡು ಹಂಚಿ, ಆದರೆ ಅದನ್ನು ನೀವು ಮಾಡಬೇಕಲ್ಲಾ. ಅದನ್ನು ಭೂಸುಧಾರಣೆಯ ಕಾನೂನಿನ ಕೆಳಗೆ ಅದನ್ನು ಸರ್‌ಪ್ಲಸ್ ಎಂದು ತೆಗೆದುಕೊಂಡು ಕೊಡುವುದಕ್ಕೆ ಆಗುತ್ತದಾ? ಇಲ್ಲ, ಲ್ಯಾಂಡ್ ರೆವಿನ್ಯೂ ಆ್ಯಕ್ಟ್ ಕೆಳಗೆ ಗ್ರಾಂಟ್ ಮಾಡುವುದಕ್ಕೆ ಬರುತ್ತದಾ? ಸ್ಪೇಷಲ್ ಆ್ಯಕ್ಟ್ ಮಾಡದೇ ಇದು

ಬರುವುದಿಲ್ಲ. ಅದಕ್ಕಾಗಿ ನೀವು ಸ್ಪೇಷಲ್ ಆ್ಯಕ್ಟ್ ಮಾಡಿ, ನಾವೆಲ್ಲರೂ ಬೆಂಬಲವನ್ನು ಕೊಡುತ್ತೇವೆಂದು ಹೇಳಿದೆ. ಅದನ್ನು ಬಿಟ್ಟು ನಾವು ಬಡವರಿಗೆ ಭೂಮಿಯನ್ನು ಹಂಚುವುದಕ್ಕೆ ವಿರುದ್ಧವಾಗಿ ಇದ್ದೇವೆ ಇವರು ಒಬ್ಬರೇ ರೈತರ ಪರ, ನಾವೆಲ್ಲರೂ ವಿರೋಧಿಗಳು, ಎಂದು ಹೇಳುವಂಥ ಮಾತುಗಳನ್ನು, ಪಕ್ಷಗಳನ್ನು ಅರ್ಥಕ್ಕೆ ಅನರ್ಥ ಮಾಡುವಂಥಾದ್ದಕ್ಕೆ ಹೋಗಬಾರದು. ನಾಳೆ ದಿವಸ ಪತ್ರಿಕೆಗಳಲ್ಲಿ ಇದೇ ರೀತಿಯಲ್ಲಿ ಹೋದರೆ, ನಾಳೆ ಏನು ಆಗುತ್ತದೆ? ಇವರು ಏನೋ ಪ್ರಾಜೆಕ್ಟ್ ವಿರೋಧವಾಗಿ ಇದ್ದಾರೆ. ಇವರೆಲ್ಲಾ ಒಂದಾಗಿ ಇದ್ದಾರೆಂದು ಬರುತ್ತದೆ. ಅದಕ್ಕಾಗಿ ದಯವಿಟ್ಟು ಇನ್ನು ಮೇಲೆ ಆ ರೀತಿಯಲ್ಲಿ ಹೇಳುವುದಕ್ಕೆ ಹೋಗಬೇಡಿ. ನೀವು ಇಲ್ಲೂ ಬಿ.ಜೆ.ಪಿ. ಪಕ್ಷವೆಂದು ಹೇಳುತ್ತಿದ್ದೀರಿ. ಅವರು ಜನತಾದಳ ಪಕ್ಷವೆಂದೇ ಹೇಳುತ್ತಿದ್ದಾರೆ. ದಯವಿಟ್ಟು ಈ ವಿಷಯದ ಬಗ್ಗೆ ಸರ್ಕಾರದ ನಿಲುವು ಏನೆಂದು ಬಂದಿಲ್ಲ ಎನ್ನುವ ವಿಚಾರವನ್ನು ಹೇಳಿದ್ದೇವೆ.

ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಅಧ್ಯಕ್ಷರೆ, ಮಾನ್ಯ ಗೌರವಾನ್ವಿತ ಮುಖ್ಯಮಂತ್ರಿಯವರು ಬಹಳ ದೀರ್ಘವಾಗಿ ಬಹಳ ವಿವರವಾಗಿ ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ ಒಂದೆರಡು ಹೊಸ ವಿಚಾರಗಳನ್ನೂ ಸಹ ಪ್ರಸ್ತಾಪ ಮಾಡಿದ್ದಾರೆ. ಯಾವುದೋ ಒಂದು ಅಗ್ರಿಮೆಂಟ್ ಇದೆ, ಆ ಅಗ್ರಿಮೆಂಟ್‌ಗೆ ಯಾರೂ ರುಜು ಹಾಕಿಲ್ಲ. ಅದು only Governor ಸೀಲ್ ಇದೆಯೆಂಬ ಹೊಸ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ಹೇಳಿರುವ ಮಾತನ್ನು ನಾವು ನಂಬಬೇಕಾಗುತ್ತದೆ. Because he is the custodian of the documents. ಅದೇ ಸಮಯದಲ್ಲಿ ಮಾನ್ಯ ಮುಖ್ಯಮಂತ್ರಿಯವರು, ಒಮ್ಮೆ ಸದನಕ್ಕೆ ತಾವು ನಿರ್ಣಯ ಮಾಡಿರುವ ವಿಚಾರವನ್ನು ಹೇಳಿರಬಹುದು. ಆದರೆ Parliamentary Practiceನಲ್ಲಿ, comment ಹೇಳಬೇಕಾಗುತ್ತದೆ. ಇಲ್ಲಿ ಯಾವ ರೀತಿಯಲ್ಲಿ ನಮ್ಮ ನಿಲುವು ಇದೆಯೆಂಬುದನ್ನು ಸ್ಪಷ್ಟವಾಗಿ, ಅದನ್ನು ಸರ್ಕಾರ ಹೇಳಬೇಕಾಗುತ್ತದೆ ಇಲ್ಲಿ ನಾವು ವಿರೋಧಪಕ್ಷದವರು ಕೇಳುತ್ತೇನೆ. ಅವರು ಉತ್ತರ ಹೇಳಿದ ಮೇಲೆ, ನಮಗೆ ಸಮಾಧಾನವೆಂದರೆ ಸಮಾಧಾನವೆಂದು ಹೇಳುತ್ತೇವೆ. ಇಲ್ಲವೆಂದರೆ ನಮ್ಮ ಡಿಮ್ಯಾಂಡ್ ಏನು ಇದೆ, ಅದನ್ನು ಮಾಡುತ್ತೇವೆ. ಈ ಡೆಮಾಕ್ರಸಿಯಲ್ಲಿ ಏನೇನು ಅನುಕೂಲಗಳು ಇವೆ, ಅದನ್ನು ಅದನ್ನು ಉಪಯೋಗ

ಮಾಡುತ್ತೇವೆ. ಈಗ ಮಾನ್ಯ ಮುಖ್ಯಮಂತ್ರಿಯವರು, ಈ ಬಗ್ಗೆ ಮಸೂದೆಯನ್ನು ತರುವಂಥಾದ್ದು, ತಮ್ಮ ಪಕ್ಷದ ನಿಲವು. ಆದರೆ Coalition set upನಿಂದ ಇರತಕ್ಕ ಕಷ್ಟಗಳ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ ಹಾಗೆ ಇದು ಸರ್ಕಾರದ ನಿಲುವು ಎಂದು ಹೇಳಿಲ್ಲ. Judicial enquiry ಮಾಡುವ ಬಗ್ಗೆ ಈಗ ಮಾನ್ಯ ಕೆ.ಎಸ್. ಈಶ್ವರಪ್ಪನವರೂ ಕೂಡ ಪ್ರಸ್ತಾಪ ಮಾಡಿದ್ದಾರೆ. ಈ ರೀತಿಯ ಹೇಳಿಕೆಗಳನ್ನು ಸರ್ಕಾರ ಕೊಡುವುದಕ್ಕೆ ಹೇಳಿಲ್ಲ. ಸರ್ಕಾರ ಕೊಡುವಾಗ ಮಾನ್ಯ ಮುಖ್ಯಮಂತ್ರಿಯವರೊಬ್ಬರೇ reply ಮಾಡುತ್ತಾರೆ. ಅದು ಡೆಪ್ಯೂಟಿ ಚೀಫ್ ಮಿನಿಸ್ಟರ್ ಇದ್ದರೂ ಸಹ, ಮಾನ್ಯ ಮುಖ್ಯಮಂತ್ರಿಯವರೇ ರಿಪ್ಲೈ ಕೊಡುವಂಥಾದ್ದು. ಈಗ ಮಾನ್ಯ ಮುಖ್ಯಮಂತ್ರಿಯವರು ರಿಪ್ಲೈ ಕೊಟ್ಟ ನಂತರ ಮಾನ್ಯ ಕೆ.ಎಸ್. ಈಶ್ವರಪ್ಪನವರು ಮತ್ತೆ ಬಿ.ಜೆ.ಪಿ ನಿಲುವು ನಾವು ಜ್ಯುಡಿಶಿಯಲ್ ಎನ್‌ಕ್ವಾಯರಿಗೆ ಒಪ್ಪಿಕೊಳ್ಳುತ್ತೇವೆಂದು ಹೇಳಿದರು. ಅದರ ಅರ್ಥ ಏನು? ಈ ಸರ್ಕಾರ ಜೆ.ಡಿ.ಎಸ್. ಮತ್ತು ಬಿ.ಜೆ.ಪಿ. ಕಾಂಗ್ರೆಸ್ ಎಂದು ನಡೆಸುತ್ತದ್ದೇವೂ, ಹೇಗೆ? ಇಲ್ಲಿ ಏನು Constitutionally ನೀವು ರೂಲಿಂಗ್ ಪಾರ್ಟಿಯಲ್ಲಿ ಇದ್ದೀರಿ! ನಾವು ವಿರೋಧಪಕ್ಷದಲ್ಲಿ ಇದ್ದೇವೆ. ನಿಮ್ಮ ನಿಲುವಿನ ಬಗ್ಗೆ ಒಮ್ಮೆ ಮಾನ್ಯ ಮುಖ್ಯಮಂತ್ರಿಯವರು ಹೇಳಿದ ಮೇಲೆ, ನೀವು ಬಿ.ಜೆ.ಪಿ. ನಿಲುವು ಎಂದು ಹೇಳಬಹುದು. ಇಲ್ಲಿ ನೀವು ಮಾನ್ಯ ಮುಖ್ಯಮಂತ್ರಿಯವರ ನಿಲುವಿಗೆ, ನಾವು ಸಮರ್ಥನೆಯನ್ನು ಮಾಡುತ್ತೇವೆಂದು ಹೇಳಬಹುದು. ಆದರೆ ಇದು ಬಿ.ಜೆ.ಪಿ. ಪಕ್ಷದ ನಿಲುವು ಎಂದು ಹೇಳಿದರೆ, what is the message you are giving? You are divided. ಮಾನ್ಯ ಮುಖ್ಯಮಂತ್ರಿಯವರು ಹೇಳಬೇಕು. ನೀವು ಹೇಳಬೇಕೆಂದು ಹೇಳಿದರೆ ಜನರಲ್ಲಿ...

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ ವಿಷಯಕ್ಕೆ ಮಾನ್ಯ ಕೆ.ಎಸ್. ಈಶ್ವರಪ್ಪನವರು ಕ್ಲಾರಿಫೈ ಮಾಡಿದ್ದಾರೆ. ಅಲ್ಲಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಡಿವೈಡ್ ಮಾಡಿದ್ದರು. ಅವರ ನಿಲುವು ಏನು? ನಿಮ್ಮ ನಿಲುವು ಏನು? ಎಂದು ಹೇಳಿದ್ದರು.

ಶ್ರೀ ಆರ್.ವಿ. ದೇಶಪಾಂಡೆ : ಆಯಿತು, ಇದು ಆದ ನಂತರ ಮಾನ್ಯ ದೇಶಪಾಂಡೆಯವರು ಅದು 15 ದಿವಸಗಳಲ್ಲಿ ಮಾಡಿ, 20 ದಿವಸಗಳಲ್ಲಿ ಮಾಡಿ ಎಂದು

ಹೇಳಿದರೆಂದು ಹೇಳಿದರು. ಅದಕ್ಕೆ ಕಾರಣ ಇದೆ, ನಾನು ಮೊನ್ನೆ ಚರ್ಚೆಯಲ್ಲಿ ಭಾಗವಹಿಸಿದ್ದ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದೆ; ನವೆಂಬರ್ 2003ನೇ ಇಸವಿ ಇರಬಹುದು. Subject to correction ಆರ್ಡರ್ ಮಾಡಿ, KIADB 28(1) ಪ್ರಕಾರ 6,000 acres or whatever it is ನಾವು ಎಕ್ಸೆಸ್ ಲ್ಯಾಂಡ್ ಅನ್ನು ನೋಟಿಫೈ ಮಾಡಿ ಎಂದು ಹೇಳಿದೆ, ಅದನ್ನು ತಕ್ಷಣ ಐಡೆಂಟಿಫೈ ಮಾಡಿ 15.2.2004 ರೊಳಗೆ ಈ ಲ್ಯಾಂಡ್ ಅನ್ನು ಐಡೆಂಟಿಫೈ ಮಾಡಬೇಕು. 20ನೇ ತಾರೀಖಿನೊಳಗೆ ನೀವು delete ಮಾಡಬೇಕೆಂದು ಆರ್ಡರ್ ಮಾಡಿದ್ದೆ. ಅದು ಯಾವುದೆಂದರೆ, excess land notified under Section 28(1). ನಮ್ಮ ಸರ್ಕಾರ ಇದ್ದಾಗ, ಪಿ.ಡಬ್ಲ್ಯೂ.ಡಿ.ಯವರು C & I department ಗೆ Proposal ಕಳುಹಿಸಿ, 2,700 ಎಕರೆ ಜಮೀನನ್ನು 11.2.2004ರಲ್ಲಿ delete ಮಾಡಿದ್ದೇವೆ. ಅಲ್ಲಿ ಮೂರೂವರೆ ಸಾವಿರ ಎಕರೆ ಜಮೀನ್ನು ಇನ್ನು ಉಳಿಯುತ್ತದೆ. Excess land notified. ನಾನು acquired ಅಂತ ಹೇಳಲಿಲ್ಲ. 28(1) ಅದು ಕಾಯಿದೆಯಂತೆ ಅದನಂತರ ಅಲೈನಮೆಂಟ್ ನೋಡಿ, ಅಲೈನಮೆಂಟ್‌ಗೆ ತೊಂದರೆಯಾಗುವುದಾದರೆ, ಅದು ನಿಮಗೆ ಅಧಿಕಾರವಿದೆಯೆಂದು ಅಷ್ಟೇ ನಾನು ಹೇಳಿರುವುವಂಥಾದ್ದು. ಇದನ್ನು ಮಾಡಬೇಕಾದರೂ ಹೇಳಿದೆ, ಇದು 2004ರಲ್ಲಿ ಆರ್ಡರ್ ಆಗಿದೆ. ಇದು ಆಗಿ ಎರಡೂವರೆ ವರ್ಷವಾಯಿತು, ಇನ್ನೂ ಏಕೆ ನೀವು ಮಾಡಿಲ್ಲವೆಂದು ನಾನು ಪ್ರಶ್ನೆಯನ್ನು ಕೇಳಿದ್ದೆ. ಇವತ್ತು ತಾವು ಜ್ಯೂಡಿಶಿಯಲ್ ಎನ್‌ಕ್ವಾಯರಿ ಮಾಡುತ್ತೀರಿ. ಈ ಜ್ಯೂಡಿಶಿಯಲ್ ಎನ್‌ಕ್ವಾಯರಿಯಿಂದ ನಿಜವಾದ ಸತ್ಯ ಹೊರಗಡೆ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆ? ಈ ಜ್ಯುಡಿಶಿಯಲ್ ಎನ್‌ಕ್ವಾಯರಿ ಬಗ್ಗೆ ನಮ್ಮ ನಾಯಕರು ಹೇಳಿದ ಹಾಗೆ ಪ್ರೊಲಾಂಗ್ ಆಗಬಹುದು. ಜಡ್ಜ್ ಮೇಲೆ ನೀವು ರಿಸ್ಟ್ರಿಕ್ಷನ್ ಹಾಕುವುದಕ್ಕೆ ಬರುವುದಿಲ್ಲ. ನೀವು 3 ತಿಂಗಳಲ್ಲಿ ರಿಪೋರ್ಟ್ ಕೊಡಿ, 6 ತಿಂಗಳಲ್ಲಿ ರಿಪೋರ್ಟ್ ಕೊಡಿಯೆಂದು ಹೇಳುವುದಕ್ಕೆ ಬರುವುದಿಲ್ಲ. ಇದು ಇನ್‌ವೆಸ್ಟಿಗೇಷನ್ ಆಗಬೇಕು. ಇಲ್ಲಿ ಯಾರ್‍ಯಾರು ತಪ್ಪಿತಸ್ಥರು ಇದ್ದಾರೆವೆಂಬುದನ್ನು ನೋಡಬೇಕಾಲ್ಲಾ ಅದುದರಿಂದ ಇವತ್ತು ನಮ್ಮ ನಾಯಕರು ಹೇಳಿದ ಹಾಗೆ, ಸಿಬಿಐ ಎನ್‌ಕ್ವಾಯರಿಯನ್ನು ಕೇಳಿದರೆ, Interpole, National, International, foreign company NRI Company. ಯಾರು ಇದ್ದಾರೆ, ಯಾರು ಜಮೀನನ್ನು ಕೊಟ್ಟಿದ್ದಾರೆಂಬುದು

ಎಲ್ಲಾ ಗೊತ್ತಾಗುತ್ತದೆ. ಇದನ್ನು ಸಿ.ಬಿ.ಐ. ಎನ್‌ಕ್ವಾಯರಿ ಮಾಡುವುದರಿಂದ, ಡಾಕ್ಯುಮೆಂಟ್ ಎಲ್ಲವನ್ನೂ ರೆಫರ್ ಮಾಡುವುದಕ್ಕೆ ಆಗುತ್ತದೆ. ಇದನ್ನು ನ್ಯಾಯಬದ್ಧವಾಗಿ ಎನ್‌ಕ್ವಾಯರಿ ಮಾಡಿ, ಒಂದು ನಿರ್ಣಯಕ್ಕೆ ಸಿ.ಬಿ.ಐ.ನವರು ಬರುತ್ತಾರೆ. ಇದರಲ್ಲಿ ಯಾರ್ಯಾರು ತಪ್ಪಿತಸ್ಥರು ಇದ್ದಾರೆ, ಇವತ್ತಿನ ಕ್ಷಣದ ತನಕ, ಮುಂದೆಯೂ ಸಹ ಅವರ ಮೇಲೆ ಕ್ರಮ ತೆಗೆದುಕೊಳ್ಳಲು ಆಗುತ್ತದೆ. ಆದುದರಿಂದ ನಮ್ಮ ಪಕ್ಷದ ನಿಲುವಿನ ಬಗ್ಗೆ ನಮ್ಮ ಅಧ್ಯಕ್ಷರು, ಹಾಗೂ ವಿರೋಧಪಕ್ಷದ ನಾಯಕರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ನಮ್ಮ ವಿರೋಧಪಕ್ಷದ ನಿಲುವು, ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. ಜ್ಯುಡಿಶಿಯಲ್ ಎನ್‌ಕ್ವಾಯರಿಯಿಂದ ಯಾವುದನ್ನೂ ಸಾಧನೆ ಮಾಡುವುದಕ್ಕೆ ಆಗುವುದಿಲ್ಲವೆಂದು ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳುತ್ತೇನೆ. ಒಂದು ಕಡೆ ತಾವು ಹೇಳಿದ್ದೀರಿ, ತಾವು ಅದನ್ನು ನೆನಪು ಮಾಡಿಕೊಳ್ಳಿ. I am not adverse to CBI enquiry ಎಂದು ತಾವು ಒಂದು ಕಡೆ ಹೇಳಿದ್ದೀರಿ. ಇದೇ ವಿಷಯದಲ್ಲಿ ಹೇಳಿದ್ದೀರಿ. I am not adverse to ಎಂದು ತಾವು ಹೇಳಿದ್ದು ನನಗೆ ನೆನಪು ಇದೆ. ಅದುದರಿಂದ ಆ ಪ್ರಕಾರವಾಗಿ ತಾವು ನಿರ್ಣಯ ಮಾಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತಿದ್ದೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ (ಶ್ರೀನಿವಾಸಪುರ) : ಮಾನ್ಯ ಅಧ್ಯಕ್ಷರೇ, ನಾನು ಮಾತನಾಡುವ ವೇಳೆಯಲ್ಲೂ ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಕೋರ್ಟ್ ಫೈಂಡಿಂಗ್ಸ್, ಸರ್‌ಪ್ಲಸ್ ಲ್ಯಾಂಡ್ ಅಲ್ಲದೇ ಅನೇಕ ವಿಚಾರಗಳನ್ನು ನಾವು ಪ್ರಸ್ತಾಪ ಮಾಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳು ಜ್ಯುಡಿಷಿಯಲ್ ಎನ್‌ಕ್ವೈರಿ ಎಂದು ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಇಲ್ಲಿ ಚರ್ಚೆ ಪ್ರಾರಂಭವಾದಾಗ ವಾತಾವರಣ ಹೇಗಿತ್ತು ಎಂದರೆ ನಾವು ಚರ್ಚೆಯನ್ನೇ scuttle ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ, ನಮಗೆ ಏನೋ ಮುಚ್ಚಿಟ್ಟುಕೊಳ್ಳುವಂಥಾದ್ದು ಇದೆ, ಒಂದು ರೀತಿಯಾಗಿ ಅಗೋಚರವಾಗಿ ನಾವು ಅಪರಾಧಿಗಳು ಎನ್ನುವ ವಾತಾವರಣ ಸೃಷ್ಟಿಯಾಗಿತ್ತು. ಅದೇನೇ ಇರಲಿ, ನಾವು ಮಾತನಾಡುವ ವೇಳೆಗೆ ನಮ್ಮ ನಿಲುವನ್ನು ಬಹಳ ಸ್ಪಷ್ಟ ಮಾಡಿದ್ದೇವೆ. ಜ್ಯುಡಿಷಿಯಲ್ ಎನ್‌ಕ್ವೈರಿಗೆ ತನ್ನದೇ ಆದ ಲಿಮಿಟೇಷನ್ಸ್ ಇವೆ. ಜ್ಯುಡಿಷಿಯಲ್ ಎನ್‌ಕ್ವೈರಿಗೆ ಯಾರಾದರೂ ಏನಾದರೂ ಹೇಳಬೇಕೆಂದರೆ ಅವರಾಗಿ ಅವರು ಹೋಗಿ ಅಫಿಡವಿಟ್ ಫೈಲ್ ಮಾಡಬೇಕು, ಅವರನ್ನು ಎನ್‌ಕ್ವೈರಿ ಆಫೀಸರ್

ಕನ್ಸಿಡರ್ ಮಾಡಬೇಕು, ಆಮೇಲೆ ಅವರಿಗೆ ಸಮನ್ಸ್ ಕೊಟ್ಟು ಕರೆಸಿಕೊಳ್ಳಬೇಕು, ಅವರ ಸ್ಟೇಟ್ಸ್‌ಮೆಂಟ್ಸ್ ಬರೆಸಿಕೊಳ್ಳಬೇಕು, ಎನ್‌ಕ್ವೈರಿಗೆ ಕೆಲವರು ಬರದೇ ಹೋಗಬಹುದು. You cannot bind anybody to appear before judicial commission ಇದೆಲ್ಲಾ ಆದಮೇಲೆ ಏನಾಗುತ್ತದೆ, ನಿಮ್ಮ ಅಬ್ಸರ್ವೇಷನ್ಸ್ ಅಥವಾ ಎನ್‌ಕ್ವೈರಿ ಫೈಂಡಿಂಗ್ಸ್ they are only recommendatory in nature ಜ್ಯುಡಿಷಿಯಲ್ ಎನ್‌ಕ್ವೈರಿ ಆಫೀಸರ್ ಯಾರಿರುತ್ತಾನೆ, he has no authority if he finds somebody at fault to prosecute. ಮತ್ತೆ ಬೇರೆ ಏಜೆನ್ಸಿ ಬರಬೇಕಾಗುತ್ತದೆ. ಮಾತನಾಡುವಾಗ ಅನೇಕ ಜನ ಶಾಸಕರು, ರಾಮಸ್ವಾಮಿ ಮತ್ತಿತರರು ಇದರಲ್ಲಿ ಕೋಟ್ಯಾಂತರ ರೂಪಾಯಿ ಲೂಟಿಯಾಗಿದೆ, 30 ಸಾವಿರ ಕೋಟಿ ರೂಪಾಯಿಗಳೂ ಹೆಚ್ಚು ಲೂಟಿಯಾಗಿದೆ, ಈ ದೇಶವನ್ನು ನುಂಗಿಬಿಟ್ಟಿದ್ದಾರೆ ಎಂದು ಹೇಳಿದರು. ನಿಜ, ನಮಗೆಲ್ಲಾ ಹಾಗೆ ಅನ್ನಿಸಿದೆ. ಇದನ್ನು ಸಿಬಿಐಗೆ ಕೊಟ್ಟರೆ ಏನಾಗುತ್ತದೆಂದರೆ ಇದರಲ್ಲಿ ದುಡ್ಡು ತಿಂದಿರುವ ಕಳ್ಳರು ಯಾರಿದ್ದಾರೆ, ಅವನ ಮನೆ ಬಾಗಿಲಿಗೆ ಹೋಗಿ ಒದ್ದು ಎಳೆದುಕೊಂಡು ಬಂದು ಸ್ಟೇಟ್‌ಮೆಂಟ್ ತೆಗೆದುಕೊಳ್ಳಬಹುದು. ಏಕೆ ನೀವು ಹಿಂದೆ ಸರಿಯುತ್ತಿದ್ದೀರಿ? ಈ ಕಳ್ಳರನ್ನು ಹಿಡಿಯುವುದಕ್ಕೆ ದೇಶವನ್ನು ಲೂಟಿ ಹೊಡೆದವರನ್ನು ಹಿಡಿಯುವುದಕ್ಕೆ, ಇವರನ್ನೆಲ್ಲಾ ಬುಕ್ ಮಾಡುವುದಕ್ಕೆ ಎರಡೆರಡು ಏಜೆನ್ಸಿಗಳು ಬೇಡ. ಒಂದು ಸಲ ಹಿಡಿದುಕೊಂಡು ಬರಲಿ, ಸ್ಟೇಟ್‌ಮೆಂಟ್ ತೆಗೆದುಕೊಳ್ಳಲಿ, ಚಾರ್ಜ್‌ಷೀಟ್ ಹಾಕತ್ತಾ ಹೋಗಲಿ, ಯಾರೂ ತಪ್ಪಿಸಿಕೊಂಡು ಹೋಗುವುದು ಬೇಡ. ಅವರು ಹೇಳಿದರಲ್ಲಾ ಗಂಡಸು ಮಾತು, ಗಂಡಾದರೂ ಸರಿ, ಹೆಣ್ಣಾದರೂ ಸರಿ, ಧೈರ್ಯಕ್ಕೆ ವೀರ ಪುರುಷರೂ ಇರುತ್ತಾರೆ, ವೀರ ಮಹಿಳೆಯರೂ ಇರುತ್ತಾರೆ, ನೀವು ಯಾವ ಕೆಟಗರಿಗಾದರೂ ಸೇರಿಕೊಳ್ಳಿ, ನನ್ನದೇನೂ ಆಕ್ಷೇಪಣೆಯಿಲ್ಲ. ನಾವು ನಿಮ್ಮನ್ನು ಏನು ಕೇಳುತ್ತೇವೆಂದರೆ ಕಲ್ಪ್ರಿಟ್ಸ್ ಅನ್ನು ಹಿಡಿಯಬೇಕು ಎನ್ನುವುದರ ಬಗ್ಗೆ ನೀವು ಡಿಟರ್‌ಮೈಂಡ್ ಆಗಿದ್ದರೆ, ಕಳ್ಳರನ್ನು ಹಿಡಿಯಬೇಕು, ಪ್ರಾಸಿಕ್ಯೂಟ್ ಮಾಡಬೇಕು, ಚಾರ್ಜ್‌ಷೀಟ್ ಮಾಡಬೇಕು ಎನ್ನುವ ಸೀರಿಯಸ್‌ನೆಸ್ ನಿಮಗಿದ್ದರೆ, ಕಮಿಟ್‌ಮೆಂಟ್ ಇದ್ದರೆ give your consent to CBI enquiry, otherewise, ಇಲ್ಲದಿದ್ದರೆ, ಬಚ್ಚಿಟ್ಟುಕೊಳ್ಳುವುದಕ್ಕೆ ನಮಗೇನೂ ಇಲ್ಲ, You have something to conceive.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೆ, ರೈತರ ಜಮೀನು ನೋಟಿಫೈ ಆಗಿದ್ದು, ಫೈನಲ್ ಅವಾರ್ಡ್ ಆಗದಿರುವುದನ್ನು ಬಿಡುವುದಿಲ್ಲ ಎಂದು ಮುಖ್ಯ ಮಂತ್ರಿಗಳನ್ನು ಹೇಳಿದ್ದು, ಅದನ್ನು ನಾವು ಸ್ವಾಗತಿಸುತ್ತೇವೆ. ನಮ್ಮ ಒತ್ತಾಯ ಏನೆಂದರೆ, ತಾವು ಬಿಲ್ ತರಬೇಕು ಎನ್ನುವುದಾಗಿದೆ. ಇಷ್ಟೆಲ್ಲಾ ಮಾಡುತ್ತಿರುವ ಒಂದು ಕಂಪನಿಗೆ ಸರ್ಕಾರ ನಡೆಸುತ್ತಿರುವ ನೀವು ಒಂದು ಉತ್ತರವನ್ನು ಹೇಳಬೇಕು. ಇದು ಇವತ್ತಿಗೇ ಮುಗಿದುಹೋಗುವುದಿಲ್ಲ. ನೀವು ಬಿಲ್ ತರಬೇಕು. ಬಣ್ಣ ಬಯಲಾಗಿಬಿಡಲಿ. ಬಿಲ್ ಡಿಫೀಟ್ ಆಗಲಿ, ಪರವಾಗಿಲ್ಲ. ಆದರೆ ಬಿಲ್ ಇಂಟ್ರೊಡ್ಯೂಸ್ ಆಗಬೇಕು, ಬಿಲ್ ಮೇಲೆ ಯಾರ್‍ಯಾರು ಏನೇನು ಮಾತನಾಡುತ್ತಾರೆ ಎಂದು ಅರ್ಥವಾಗಬೇಕು, ಆಗ ಇನ್ನೊಂದು ಬಣ್ಣ ಇನ್ನೊಂದು ರಂಗು ಅಸೆಂಬ್ಲಿ ಮುಂದೆ ಬರಬೇಕಾಗುತ್ತದೆ. ಬಿಲ್ ತನ್ನಿ, ತನ್ನಿ ಎಂದು ನಾವು ಹುಡುಗಾಟಕ್ಕೆ ಕೇಳುತ್ತಿಲ್ಲ. ಬಿಲ್ ತಂದುಬಿಡಿ, ಅದು ಹೋಗಲಿ ದೇಶವೇನೂ ಹಾಳಾಗುವುದಿಲ್ಲ. ಬಿಲ್ ಇಂಟ್ರೋಡ್ಯೂಸ್ ಮಾಡಬೇಕು, ಈ ರಾಜ್ಯದ ಮೇಲೆ ಯಾರ್‍ಯಾರಿಗೆ ಏನೇನು ಭಾವನೆ ಇದೆ, ಪ್ರೀತಿ ಇದೆ, ವಿಶ್ವಾಸ ಇದೆ ಎಂದು ಈ ಶಾಸನಸಭೆಯಲ್ಲಿ ಚರ್ಚೆಯಾಗಲಿ ಎಂದು ಒತ್ತಾಯ ಮಾಡುತ್ತೇವೆ. ಮೂರನೆಯದಾಗಿ, ತಾವು ಜ್ಯೂಡಿಷಿಯಲ್ ಎನ್‌ಕ್ವೈರಿಗೆ ಕನ್‌ಸೀಡ್ ಆಗಬೇಡಿ. ಅದರಿಂದ ಪ್ರಯೋಜನವಾಗುತ್ತದೆ ಎಂದು ತಿಳಿದುಕೊಳ್ಳಬೇಡಿ. ಸುಪ್ರೀಂಕೋರ್ಟಿಗೆ ಹೋಗಿಯೇ ನಾವು ದುಡ್ಡು ಕಟ್ಟಿ ಬಂದಿದ್ದೇವೆ. ನಮ್ಮ ಪ್ರೇಯರ್ ಇರುವುದೆಂದರೆ, ದಯಮಾಡಿ ಇದನ್ನು ಸಿಬಿಐಗೆ ರೆಫರ್ ಮಾಡಿ. ನಿಮಗೆ ಏನಾಗಬೇಕು, ಸಿ ಬಿ ಐ ಗೆ ಹಾಕಿ. ಇದು ಸಿ ಬಿ ಐ ಗೆ ರೆಫರ್ ಆಗಬೇಕು. ಮೊದಲು ಅಧಿಕಾರಿಗಳು ಸಾರಾಸಗಟಾಗಿ ಆಚೆಗೆ ಬರಬೇಕು. ಯಾವ ಪಕ್ಷದವರಾಗಲಿ, ರಾಜಕೀಯ ಮಾಡುವವರ ಮಧ್ಯೆ ಮೆರೆಯುತ್ತಿರುವ ಗುಂಪು ಏನಿದೆ, ಅದನ್ನು ಮೊದಲು ಬುಕ್ ಮಾಡಿ ತಾವು 13 ಸಾವಿರ ಎಕರೆ ಜಮೀನು ಕೊಡಿ ಎಂದರೆ 23 ಸಾವಿರ ಕೊಟ್ಟವರು ಯಾರು ಎಂಬುದು ಆಚೆ ಬರಬೇಕು. ಯಾರೂ ಇಲ್ಲಿ ಶಾಶ್ವತವಾಗಿರುವುದಿಲ್ಲ. ಇವರು ಈ ಕಡೆಯೇ ಕುಳಿತಿರುವುದಿಲ್ಲ, ನೀವೇನೂ ಆ ಕಡೆಯೇ ಕುಳಿತಿರುವುದಿಲ್ಲ. ರಾಜ್ಯದಲ್ಲಿ ಸ್ವಲ್ಪ ಗೌರವ ಇಟ್ಟುಕೊಂಡು, ಘನತೆ ಇಟ್ಟುಕೊಂಡು, ಆಡಳಿತ ನಡೆಯವಂಥ ಸ್ಥಿತಿಗೆ ಅಧಿಕಾರಿಗಳನ್ನು ತರಬೇಕಾದರೆ ಇದರ ತನಿಖೆಯನ್ನು ಸಿಬಿಐಗೇ ವಹಿಸಬೇಕೆಂದು ಒತ್ತಾಯ ಮಾಡುತ್ತೇನೆ. ನಾನು ನಿಮಗೆ

ಬೇಡಿಕೊಳ್ಳುವುದೇನೆಂದರೆ, ಈ ಶಾಸನಸಭೆಯಲ್ಲಿ ಬಿಲ್ ಇಂಟ್ರೊಡ್ರೂಸ್ ಆಗಬೇಕು. ಅದರ ಬಗ್ಗೆ ಚರ್ಚೆಯಾಗಲಿ, ಡಿಫೀಟ್ ಆಗಲಿ ಬಿಡಿ, ಅದರಿಂದ ಅವಮಾನ ಎಂದೇನೂ ಭಾವಿಸಬಾರದು. ನಿಮ್ಮ ವಿಲ್ ಪವರ್‌ಅನ್ನು ನೀವು ಪ್ರೂವ್ ಮಾಡಬೇಕು ಎನ್ನುವುದು ನನ್ನ ಒತ್ತಾಯ.

ಅಧ್ಯಕ್ಷರು : ಈಗ ಎಂ.ಪಿ. ಪ್ರಕಾಶ್‌ರವರು.

ಶ್ರೀ ಬಿ.ಆರ್. ಪಾಟೀಲ್ : ಮಾತನಾಡಲು ನನಗೂ ಎರಡು ನಿಮಿಷ ಅವಕಾಶ ಕೊಡಬೇಕು.

ಅಧ್ಯಕ್ಷರು : ಅವರು ಮಾತನಾಡಿದ ಮೇಲೆ ನಿಮಗೂ ಕೊಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ,

ಶ್ರೀ ಬಿ.ಆರ್. ಪಾಟೀಲ್ : ನನಗೂ ಎರಡು ನಿಮಿಷ ಟೈಂ ಬೇಕು. ಈಗ ತಾವು ಯಾರಿಗೆ ಅವಕಾಶ ಕೊಟ್ಟಿದ್ದೀರಿ. ವಾಟಾಳರು ಮೇಲಿಂದ ಮೇಲೆ ಮಾತನಾಡುತ್ತಾರೆ. ನಮಗೂ ಅವಕಾಶ ಕೊಡಿ. ನೀವು ಹಿರಿಯರು, ನೀವು ಬಹಳಷ್ಟು ಸಲ ಮಾತನಾಡಿದ್ದೀರಿ.

ಅಧ್ಯಕ್ಷರು : ಅವರು ಬೇಗ ಮುಗಿಸಲಿ ಬಿಡಿ. ಒಂದು ರೀತಿ, ಉಪಕಥೆಯಾದ ಹಾಗೆ ಈಗ ಎಲ್ಲರೂ ಕೇಳುತ್ತಿದ್ದೀರಿ. ಎಲ್ಲರೂ ಬೇಗ ಬೇಗ ಒಂದೊಂದು ನಿಮಿಷದಲ್ಲಿ ಹೇಳಿಬಿಡಬೇಕು.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ನಾನು ಬೆಳಿಗ್ಗೆಯಿಂದಲೂ ಮಾನ್ಯ ಮುಖ್ಯಮಂತ್ರಿಗಳ ಭಾಷಣವನ್ನು ಗಂಭೀರವಾಗಿ ಕುಳಿತುಕೊಂಡು ಕೇಳಿದ್ದೇನೆ. ಅವರು ಬಹಳ ಹೆಚ್ಚಿನ ರೀತಿಯಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಎಳೆಎಳೆಯಾಗಿ ಎಲ್ಲವನ್ನೂ ಸಂಪೂರ್ಣವಾಗಿ ಹೇಳಿದ್ದಾರೆ. ಈ ಸದನದಲ್ಲಿ ಮುಖ್ಯಮಂತ್ರಿಗಳಿಂದ ಒಂದು ಭಾರೀ ಉತ್ತರ ಬರುತ್ತದೆ ಎನ್ನುವ ನಿರೀಕ್ಷೆಯನ್ನು ನಾವು ಮಾಡಿದ್ದೆವು. ಆದರೆ ಆ ನಿರೀಕ್ಷೆಗೆ ಎಲ್ಲೋ ಒಂದು ಕಡೆ ತಣ್ಣೀರು ಎರಚಿದಂತಾಗಿದೆ. ನನಗೆ ಬಹಳ ನೋವಾಗುತ್ತಿದೆ. ನಾನು ಇದನ್ನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ಮಾಧುಸ್ವಾಮಿಯವರು ಮತ್ತು ನಾವೆಲ್ಲಾ ಏನು ಹೇಳಿದ್ದೇವೆಂದರೆ, ಮಸೂದೆ ತರಲೇಬೇಕು, ಇಲ್ಲಿ ಮಸೂದೆ ಬರಲೇ ಬೇಕು, ಮಸೂದೆಯ ಬಗ್ಗೆ ಇಲ್ಲಿ ಸಮಗ್ರವಾಗಿ

ಚರ್ಚೆಯಾಗಲಿ. ಯಾರ್‍ಯಾರು ಮಸೂದೆಗೆ ಬೆಂಬಲ ಕೊಡುತ್ತಾರೆ ಎನ್ನುವುದು ತೀರ್ಮಾನವಾಗಿ ಹೋಗಲಿ. ಮೊದಲು ನಿಮ್ಮ ನಿಲುವು ಏನಿತ್ತು? ಹೊರಗಡೆ ಏನು ಹೇಳಿದಿರಿ? ಮಸೂದೆ ತಂದೇ ತರುತ್ತೇನೆ ಎಂದು ಎಷ್ಟು ಸಾರಿ ಹೇಳಿದ್ದೀರಿ? ಇನ್ನು 15 ದಿವಸಗಳಲ್ಲಿ ನಾನು ಅಧಿಕಾರದಲ್ಲಿ ಇರುತ್ತೇನೋ, ಇಲ್ಲವೋ ಎಂದು ಹೇಳಿದ್ದೀರಿ. ಆದ್ದರಿಂದ ನಾನು ತಮಗೆ ಏನು ಹೇಳುತ್ತಿದ್ದೇನೆಂದರೆ ಇದರ ಬಗ್ಗೆ ಈ ಸದನದಲ್ಲಿ ಸಮಗ್ರವಾದಂಥ ಮಸೂದೆ ಮಂಡನೆಯಾಗಲೇಬೇಕು. ಅದರ ಜೊತೆಗೆ ಇದನ್ನು ಸಿಬಿಐಗೆ ವಹಿಸಿದರೆ ಅದಕ್ಕೆ ನಾವು ಸಂಪೂರ್ಣ ಬೆಂಬಲ ಕೊಡುತ್ತೇವೆ, ಅದರ ಬಗ್ಗೆ ಮಾತಿಲ್ಲ. ಇದರ ಬಗ್ಗೆ ನ್ಯಾಯಾಂಗ ತನಿಖೆ ಅಥವಾ ಬೇರೆಬೇರೆ ತನಿಖೆಯಿಂದ ಏನೂ ಪ್ರಯೋಜನವಾಗುವುದಿಲ್ಲ. ಈ ತೀರ್ಮಾನಕ್ಕೆ ತಾವು ಬರಬೇಕು. ನಾವು ಸಂಪೂರ್ಣವಾಗಿ ಈ ಸದನದಲ್ಲಿ ಎಂಟು ದಿವಸಗಳ ಕಾಲ ಸಮಗ್ರವಾದಂಥ ಚರ್ಚೆ ಮಾಡಿ, ಇದರ ಬಗ್ಗೆ ಏನೋ ಆಗುತ್ತದೆ ಎಂದು ಜನ ನಿರೀಕ್ಷೆ ಮಾಡಿ, ಇಲ್ಲಿ ಏನೋ ನಡೆಯುತ್ತಿದೆ ಎಂದು ದೂರದರ್ಶನದವರು ನೇರ ಪ್ರಸಾರ ಮಾಡಿ ಕೊನೆಗೆ ಮುಖ್ಯಮಂತ್ರಿಗಳ ಹೇಳಿಕೆ ಕೇವಲ ಸುರುಸುರುಬತ್ತಿ ಅಗಬಾರದು. ಆದ್ದರಿಂದ, ಈ ಬಗ್ಗೆ ಮತ್ತೆ ನಿಮ್ಮ ನಿಲುವನ್ನು ಬದಲಾವಣೆ ಮಾಡಿಕೊಂಡು, ಗಂಭೀರವಾದ, ಶಕ್ತಿಯುತವಾದ ಮಸೂದೆ ತರುವ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು ಹಾಗೂ ಸಿಬಿಐಗೆ ವಹಿಸುವುದನ್ನು ತಾವು ಹೇಳಲೇಬೇಕು.

ಅಧ್ಯಕ್ಷರು : ಈಗ ಶ್ರೀರಾಮರೆಡ್ಡಿಯವರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ,...

ಶ್ರೀ ಬಿ.ಆರ್. ಪಾಟೀಲ್ : ನನಗೂ ಎರಡು ನಿಮಿಷ ಟೈಂ ಕೊಡಬೇಕು. ರೆಡ್ಡಿಯವರೇ, ನಾನು ಮಾತನಾಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಮೂವ್ ಮಾಡಿರುವವನು. ನೀವೂ ಆಮೇಲೆ ಮಾತನಾಡಿ. ಅವರು ಮಾತನಾಡಬಾರದು ಎಂದು ನಾವು ಹೇಳಲಿಲ್ಲ.

ಶ್ರೀ ಸಿದ್ದರಾಮಯ್ಯ : ನಿಮಗಿಂತ ಮೊದಲು ಅವರು ಅವಕಾಶವನ್ನು ಕೇಳಿದ್ದಾರೆ. ನಾವು ಮಾತನಾಡಿದ ಮೇಲೆ ಮಾತನಾಡಿ ಎಂದರೆ ಹೇಗೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನನ್ನನ್ನು ಕರೆದಿದ್ದಾರೆ.

ಅಧ್ಯಕ್ಷರು : ಸಿದ್ಧರಾಮಯ್ಯನವರೇ, ನಾನು ಶ್ರೀರಾಮರೆಡ್ಡಿಯವರನ್ನು ಕರೆದಿದ್ದೇನೆ. ಕುಳಿತುಕೊಳ್ಳಿ ನಿಮಗೂ ಕೊಡುತ್ತೇನೆ ಏಕೆ ನಿಮ್ಮನಿಮ್ಮಲ್ಲೇ ಮಾತನಾಡಿಕೊಳ್ಳುತ್ತೀರಿ. ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ : ನಾವು ಅಡ್ಜರ್ನ್‌ಮೆಂಟ್ ಮೋಷನ್ ಮೂವ್ ಮಾಡಿರುವವರು, ನಾವು ಹೇಳುವುದನ್ನು ಕೇಳಿ ಎಂದರೆ ಹೇಗೆ? ಅದನ್ನು ನಿಯಮ 69ಕ್ಕೆ ಬದಲಾಯಿಸಲಾಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹೌದು, ಅದನ್ನೂ ನಾನೇ ಮೂವ್ ಮಾಡಿರುವುದು. ಆದರೆ, ತಾವು ಮಾತನಾಡಬಾರದು ಎಂದು ನಾನು ಹೇಳಲಿಲ್ಲ;

ಶ್ರೀ ಸಿದ್ದರಾಮಯ್ಯ : ನೀವು ಆ ರೀತಿ ಹೇಳಲು ಬರುವುದಿಲ್ಲ, ನನಗೆ ಪ್ರೈಯಾರಿಟಿ ಎಂದು ನೀವು ಹೇಳಲು ಬರುವುದಿಲ್ಲ.

ಅಧ್ಯಕ್ಷರು : ಆಯಿತು, ಶ್ರೀರಾಮರೆಡ್ಡಿಯವರೇ ಮಾತನಾಡಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೇ, ಈ ವಿಚಾರದ ಬಗ್ಗೆ ನಾನು ನಿಲುವಳಿ ಸೂಚನೆಯನ್ನು ಮಂಡಿಸಿದೆ. ನಿಲುವಳಿ ಸೂಚನೆ ಬೇಡ ಎಂದು ಅದನ್ನು ನಿಯಮ 69ಕ್ಕೆ ನೀವೇ ಪರಿವರ್ತನೆ ಮಾಡಿದಿರಿ. ನಿಲುವಳಿ ಸೂಚನೆ ನಿಯಮ 69ಕ್ಕೆ ಪರಿವರ್ತನೆಯಾಗಿ ಒಂದು ವಾರದಿಂದ ಚರ್ಚೆ ನಡೆಯುತ್ತಿದೆ. ನನ್ನ ಮತ್ತು ಮಾಧುಸ್ವಾಮಿಯವರ ಬೇಡಿಕೆ ಇದ್ದದ್ದು ಏನೆಂದರೆ, ಮೊದಲನೆಯದಾಗಿ, ಕಳೆದ 11 ವರ್ಷಗಳಲ್ಲಿ ಯಾರ್ಯಾರು ಸರ್ಕಾರಿ ಅಧಿಕಾರಿಗಳು, ರಾಜಕಾರಣಿಗಳು ಇದರಲ್ಲಿ ಶಾಮೀಲಾಗಿ ಹಗಲು ದರೋಡೆಗೆ ಕಾರಣರಾಗಿದ್ದಾರೆ ಅವರನ್ನು ಪತ್ತೆ ಹಚ್ಚಿ ಅವರಿಗೆ ಶಿಕ್ಷೆ ಕೊಡತಕ್ಕಂಥಾದ್ದು ಆಗಬೇಕು ಎನ್ನುವುದು ನಮ್ಮ ಮೊದಲನೇ ಬೇಡಿಕೆ. ಎರಡನೆಯದು, ಈ ಶಿಕ್ಷೆ ಕೊಡಬೇಕಾದರೆ ಅದಕ್ಕೆ ನ್ಯಾಯಾಂಗ ತನಿಖೆ ಉತ್ತರವಲ್ಲ. 1980ನೇ ಇಸವಿಯಲ್ಲಿ ಸರ್ಕಸ್ ದುರಂತ ನಡೆಯಿತು, ಅದನ್ನು ನ್ಯಾಯಾಂಗ ತನಿಖೆಗೆ ಆದೇಶ ಮಾಡಿದರು. 25 ವರ್ಷಗಳಾಯಿತು. ಅದು ಏನಾಗಿದೆ ಎಂದು ಇದುವರೆಗೂ ಯಾರಿಗೂ ಗೊತ್ತಿಲ್ಲ. ಕೇವಲ ನ್ಯಾಯಾಂಗ ತನಿಖೆಗೆ ಆದೇಶ ಮಾಡಿದರು ಅಷ್ಟೇ. ಬೆಂಗಳೂರಿನಲ್ಲಿ ಇಲ್ಲಿಸಿಟ್ ಲಿಕ್ಕರ್ ಪ್ರಕರಣವಾಗಿ ನೂರಾರು ಜನರು ಸತ್ತರು. ಅದರ ಬಗ್ಗೆ ನ್ಯಾಯಾಂಗ ತನಿಖೆಗೆ ಆದೇಶವಾಯಿತು, ಯಾರಿಗೂ ಶಿಕ್ಷೆಯಾಗಲಿಲ್ಲ. ಆದ್ದರಿಂದ, ನಾವೇನು ಹೇಳುತ್ತಿದ್ದೇವೆಂದರೆ, ಇದರ ಬಗ್ಗೆ ನ್ಯಾಯಾಂಗ ತನಿಖೆಯ ಪ್ರಶ್ನೆ ಇಲ್ಲ.

ಇದರ ಬಗ್ಗೆ ಸಿಬಿಐ ತನಿಖೆಯಾಗಬೇಕು. ಏಕೆಂದರೆ, ಮಾನ್ಯ ಮುಖ್ಯಮಂತ್ರಿಗಳು ಮಾತನಾಡುವಾಗ, ಟ್ರೈಪಾರ್ಟಿಯೇಟ್ ಅಗ್ರಿಮೆಂಟಿಗೆ, ಸರ್ಕಾರ ಸೈನ್ ಮಾಡಿಲ್ಲ ಯಾರದೂ ಸೈನ್ ಇಲ್ಲಿ ಸರ್ಕಾರದ ಸೀಲ್ ಇಲ್ಲ, ಸರ್ಕಾರದ ಸೀಲ್ ಮಾತ್ರ ಇದೆ ಎಂದು ಹೇಳಿದ್ದಾರೆ. ಯಾರು ಅಂಥ ಒಂದು ದಗಲ್ಬಾಜಿ ಕೆಲಸ ಮಾಡಿದ್ದಾರೆ, ಅಂಥಾದ್ದನ್ನೆಲ್ಲಾ ಕಂಡುಹಿಡಿಯಬೇಕಾಗುತ್ತದೆ. ಅಂಥದ್ದನ್ನು ಕಂಡುಹಿಡಿಯಬೇಕಾದರೆ ನಿಷ್ಪಕ್ಷಪಾತವಾದ ತನಿಖೆ ನಡೆಯಬೇಕಾಗುತ್ತದೆ. ಆ fraud ಅನ್ನು ಯಾರ್ಯಾರು ಮಾಡಿದ್ದಾರೆ, ಅದೆಲ್ಲಾ ತನಿಖೆಯಾಗಬೇಕಾಗಿರುವುದರಿಂದ ಅದಕ್ಕೆ CBI ತನಿಖೆಯಾಗಬೇಕು. ಮೂರನೇ ಅಂಶವೇನೆಂದರೆ, ಯಾವ ಜಮೀನನ್ನು ಹೆಚ್ಚುವರಿಯಾಗಿ ಆತನಿಗೆ ಕೊಟ್ಟಿದ್ದಾರೆ, ಮತ್ತೆ ಹೆಚ್ಚುವರಿ notify ಮಾಡಿ ಇನ್ನೂ ಕೂಡ ಯಾವ ಜಮೀನನ್ನು ಅವನಿಗೆ hand over ಮಾಡಿಲ್ಲವೋ ಆ ಭೂಮಿಯನ್ನು ರೈತರಿಗೆ ತಕ್ಷಣ ಕೊಡಬೇಕು. ಇಷ್ಟು ನಮ್ಮ ಮೂರು ಮುಖ್ಯವಾದ ಬೇಡಿಕೆ. ಇನ್ನು ಮಸೂದೆ ತರುತ್ತೇವೆಂದು ನಾವು ಹೇಳಲಿಲ್ಲ. ಮಸೂದೆ ತರುತ್ತೇವೆಂದು ಮೊದಲು ಅವರೇ ಪ್ರಾರಂಭ ಮಾಡಿ, Bill ತರುವುದಕ್ಕಾಗುವುದಿಲ್ಲವೆಂದು ಇವತ್ತು ಹೇಳುತ್ತಿದ್ದಾರೆ. Bill ತರಲಿಕ್ಕೆ ಆಗುತ್ತಿಲ್ಲವೆಂದು ಏಕೆ ಹೇಳುತ್ತಿದ್ದಾರೆಂದರೆ, ಅವರಲ್ಲಿ ಭಿನ್ನಾಭಿಪ್ರಾಯವಿದೆ. ನಾವು private bill move ಮಾಡುತ್ತೇವೆ. ಹಾಗಾದರೆ ಇವರ ಬಣ್ಣ ಬಯಲಾಗಲಿ. ಒಟ್ಟಿನಲ್ಲಿ CBI ತನಿಖೆ ಆಗಲೇಬೇಕು.

ಶ್ರೀ ಬಿ.ಆರ್. ಪಾಟೀಲ್ (ಆಳಂದ) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಬೆಳಿಗ್ಗೆಯಿಂದ ಬಹಳ ದೀರ್ಘವಾಗಿ ಸದನದ ಎದುರುಗಡೆ ಆದಂಥ ಎಲ್ಲಾ ಘಟನೆ ವಿವರಗಳನ್ನು ಇಡುತ್ತಾ ಬಂದರು. ಮೇಲ್ನೋಟಕ್ಕೆ ನಮಗೇನಿಸುತ್ತದೆಂದರೆ, ಇದೇನೋ ಒಂದು ದಿವಾಳಿ ಕಂಪನಿಯನ್ನು ತಂದು ಇಷ್ಟೆಲ್ಲ ಗೋಲ್‌ಮಾಲ್ ಮಾಡಿದ್ದಾರೆಂದು ನಮಗನ್ನಿಸುತ್ತದೆ. ವಾಸ್ತವಾಂಶ other side the story ನಮಗೆ ಗೊತ್ತಿಲ್ಲ. ಈಗ ರಾಜ್ಯದ ಹಿತವನ್ನು ಕಾಪಾಡುವುದಕ್ಕೆ ನಾವೆಲ್ಲರೂ ಪಕ್ಷ ಭೇದಭಾವ ಮರೆತು ಕೆಲಸ ಮಾಡಬೇಕಾಗುತ್ತದೆ. ಅಲ್ಲಿ ರೈತರಿಗೆ ಅನ್ಯಾಯವಾಗುತ್ತಿದೆ, ಇಲ್ಲಿ project complete ಆಗಬೇಕು, ಜನರಿಗೆ ಅನುಕೂಲವಾಗಬೇಕು, ಇದರಲ್ಲಿ ಏನೇನೂ ಭಿನ್ನಾಭಿಪ್ರಾಯವಿಲ್ಲ. ಈಗ ನಾನು ಇಲ್ಲಿ ಹೇಳುವ ಉದ್ದೇಶ ಇಲ್ಲಿ ಏನಾದರೂ ರಾಜಿ ಪಂಚಾಯಿತಿ ಮಾಡಿಕೊಂಡು ಬಂದು ಈ ಒಂದು ಸೂತ್ರ ಹಿಡಿದು ನಮ್ಮ

ಸದನಕ್ಕೆ ತಪ್ಪು ದಾರಿಯನ್ನು ಎಳೆಯುತ್ತಿದ್ದಾರೆಂಬುದು ನನ್ನ ನೇರವಾದಂಥ ಆರೋಪ. ಏಕೆಂದರೆ, ಮೊದಲು ಒಂದು ಪಕ್ಷದ ಅಭಿಪ್ರಾಯ 'ಈ project ಅನ್ನು take over ಮಾಡಬೇಕೆನ್ನುವ' ವಾದವನ್ನು ಪತ್ರಿಕೆಗಳಲ್ಲಿ ಓದಿದ್ದೇವೆ. ಇನ್ನೊಂದು ಪಕ್ಷ – ಯಾವ ಕಾರಣಕ್ಕೂ ಕೂಡ 'ಈ project ಅನ್ನು take over ಮಾಡುವುದಕ್ಕೆ ನಾವು ಬಿಡುವುದಿಲ್ಲ, ಸರಕಾರ ಹೋದರೂ ಚಿಂತೆ ಇಲ್ಲ, ನಾವು ಬಿಡುವುದಿಲ್ಲವೆನ್ನುವ' ವಾದವನ್ನು ಕೂಡ ನಾವು ಮತ್ತೊಂದು ಪಕ್ಷದಿಂದ ಕೇಳಿದ್ದೆವು. ಈಗ ಎರಡೂ ಪಕ್ಷಗಳು ಸೇರಿ ಒಂದು ರಾಜಿ ಪಂಚಾಯತಿ ಮಾಡಿ, ಈ ಒಂದು ನ್ಯಾಯಾಂಗ ತನಿಖೆಯನ್ನು ಮಾಡುವುದಕ್ಕೆ ತಂದು, ಕಟ್ಟಿಹಾಕುವ ಕೆಲಸ ಮಾಡುವುದಕ್ಕೆ ಮುಂದಾಗಿದ್ದಾರೆ. ಇವತ್ತು ಈ ಸರ್ಕಾರಕ್ಕೆ ಏನಾದರೂ ರಾಜಕೀಯ ಇಚ್ಛಾಶಕ್ತಿ ಇರುವುದಾದರೆ, ನಿಜವಾಗಿ ಕೂಡ ಈ ರಾಜ್ಯದ ಅಭಿವೃದ್ಧಿ ಬಗ್ಗೆ ಜನರ ಬಗ್ಗೆ, ರೈತರ ಬಗ್ಗೆ ಕಾಳಜಿ ಇದ್ದುದ್ದೇ ಆದರೆ ನಾನೂ ಕೂಡ ಬೇಡಿಕೆ ಇಡುತ್ತಿದ್ದೇನೆ. ಈ project ಅನ್ನು take over ಮಾಡಲಿ. ಸರ್ಕಾರ ಸಾರ್ವಭೌಮ. ಸರ್ಕಾರದ ವಿರುದ್ಧ ಯಾರೂ ಕೂಡ ಕೆರಳಿ ನಿಲ್ಲಲಿಕ್ಕೆ ಸಾಧ್ಯವಿಲ್ಲ, This House is Supreme. ನಾವೆಲ್ಲದಕ್ಕೂ ಕೂಡ ಬೆಂಬಲ ಕೊಡುತ್ತೇವೆ. ನಾವು ಒಪ್ಪುತ್ತೇವೆ. ಈ Project ಅನ್ನು take over ಮಾಡಲಿ. Take over ಮಾಡಿಬಿಟ್ಟು project ಅನ್ನು complete ಮಾಡಲಿ. ರೈತರಿಗೆ ವಾಪಸ್ಸು ಜಮೀನು ಕೊಡಬೇಕಾಗಿದ್ದರೆ ಇಲ್ಲಿ ಕಾನೂನನ್ನು ತರಲಿ. ಹೊಸ Bill ತರದೆಯೇ ರೈತರಿಗೆ ಜಮೀನು ವಾಪಸ್ಸು ಕೊಡಲಿಕ್ಕೆ ಆಗುವುದಿಲ್ಲ. ಸುಮ್ಮನೆ ಇಲ್ಲಿ ಮಾತು ಹೇಳಿ ಮನೆಗೆ ಹೋಗುವುದು ಆಗುವುದಿಲ್ಲ. ಇವತ್ತು ತಾವು ಏನೋ ಒಂದು ರೀತಿ ಸರ್ಕಾರವನ್ನು ನಡೆಸಿಕೊಂಡು ಹೋಗುವುದಕ್ಕೆ, ಸರ್ಕಾರವನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ರಾಜಿ ಪಂಚಾಯತಿ ಮಾಡಿಕೊಂಡು ಹೋಗಲು ಸಾಧ್ಯವಿಲ್ಲ. ಸರ್ಕಾರ ಸಾರ್ವಭೌಮ ಎಂದು ನಾನು ಹೇಳುತ್ತಿದ್ದೇನೆ. This House is sovereign, supreme. Legislature is supreme ನೀವು ಕಾನೂನು ತೆಗೆದುಕೊಂಡು ಬನ್ನಿ. ಕಾನೂನು ತೆಗೆದುಕೊಂಡು ಬಂದು, project take over ಮಾಡಿಕೊಂಡು complete ಮಾಡಿ. ಆಮೇಲೆ CBI enquiry ಆಗಬೇಕೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಸೇರಿದಂತೆ ಎಲ್ಲರೂ ಹೇಳಿದ್ದಾರೆ, ನಾನೂ ಕೂಡ ಸಮರ್ಥನೆ ಮಾಡುತ್ತೇನೆ, CBI enquiry ಆಗಬೇಕು, ಯಾರು ತಪ್ಪಿತಸ್ಥರು ಆಗಿದ್ದಾರೆ, ಅವರು

ಜೈಲಿಗೆ ಹೋಗಬೇಕು, ಶಿಕ್ಷೆ ಆಗಬೇಕು, ಆಮೇಲೆ ಮುಂದೆ ಯಾವತ್ತೂ ಕೂಡ ಈ ರಾಜ್ಯದಲ್ಲಿ ಈ ರೀತಿ ಆಗಬಾರದೆನ್ನುವ ನಿಲುವನ್ನು ನಾವು ಕೂಡ ಈ ಸದನದಲ್ಲಿ ವ್ಯಕ್ತಪಡಿಸುತ್ತಿದ್ದೇವೆ.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ನಾವೆಲ್ಲಾ ಮಾತನಾಡಿದ್ದೇವೆ. ಒಂದೇ ಒಂದು ಕ್ಲಾರಿಫಿಕೇಷನ್.

ಅಧ್ಯಕ್ಷರು : ಹೀಗೆ ಎಲ್ಲರೂ ಮಾತನಾಡಬೇಕೆಂದರೆ ಹೇಗೆ. ಆಯಿತು. ಒಂದೊಂದು ನಿಮಿಷದಲ್ಲಿ ಮಾತನಾಡಿ ಮುಗಿಸಿ.

(ಗೊಂದಲ)

ಶ್ರೀ ಆರ್. ದಿನೇಶ್ ಗುಂಡೂರಾವ್ (ಗಾಂಧಿನಗರ) : ಸನ್ಮಾನ್ಯ ಅಧ್ಯಕ್ಷರೇ Ruling Party ಯವರು ನಿಮಗ್ಯಾಕೆ ಅವಕಾಶ ಬೇಕು? ಮುಖ್ಯಮಂತ್ರಿಗಳು ಹೇಳಿದ್ದಾರಲ್ಲಾ. ಸಾಕು ಬಿಡಿ. Ruling party ಯಿಂದ ಇನ್ನೇನು ಸಮರ್ಥನೆ ಮಾಡುವುದಿದೆ? ನಿಮ್ಮ ಕಥೆ ಎಲ್ಲಾ ಈಗ ಗೊತ್ತಾಗಿದೆ. ನಿಮ್ಮ ಮಾತೆಲ್ಲಾ ಆಚೆಗೆ ಬಂದಿದೆ. file ಆಗಿದೆ. ಸುಮ್ಮನೆ ಏಕೆ ಮಾತನಾಡುತ್ತೀರಿ? ಕುಳಿತುಕೊಳ್ಳಿ. ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ಈಗ ಮಾತನಾಡಲಿ.

(ಗೊಂದಲ)

ಅಧ್ಯಕ್ಷರು : ಎಲ್ಲರೂ ಕುಳಿತುಕೊಳ್ಳಿ. ನಾನು ಮಾನ್ಯ ಹೆಗ್ಡೆಯವರನ್ನು ಮಾತನಾಡುವುದಕ್ಕೆ ಕರೆದಿದ್ದೇನೆ. ಅವರು ಮಾತನಾಡುತ್ತಾರೆ.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು : ಚುನಾವಣೆ ಆದ ಮೇಲೆ ಯಾರ ಕಥೆ ಹೊರಗೆ ಬರುತ್ತದೆ ಎನ್ನುವುದು ಗೊತ್ತಾಗುತ್ತದೆ. ಅಲ್ಲಿಯವರೆಗೂ ಕಾಯಿರಿ.

(ಗೊಂದಲ)

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ್) : ಈಗ ಮಾನ್ಯ ಮುಖ್ಯಮಂತ್ರಿಗಳು ಏನೊಂದು consent acknowledgement agreement ನಲ್ಲಿ ಸಹಿ ಇಲ್ಲ, ಕೇವಲ seal ಇದೆ ಎಂದು ಹೇಳಿದರು. ಅದನ್ನು ನಾನು ನೋಡಿದ್ದೇನೆ. ಸರ್ಕಾರದ consent ಇಲ್ಲದೆಯೇ ಆ ಒಂದು document ಮೇಲೆ

frame work agreement ಹೇಗೆ ಆಯಿತು? ಇದು ಬಹಳ ಮುಖ್ಯವಾದದ್ದು. There is no consent from the Government. ಅದರ basis ನಲ್ಲಿ ಈ frame work agreement ಮಾಡಿರುವುದು. ಇಡೀ agreement ಹೋಯಿತು. Vitiates ನಮ್ಮ ಪ್ರಕಾರ. ಇದ್ಯಾವುದೂ ದಾಖಲೆಗಳನ್ನು court ಗೆ ತೋರಿಸದೆ ಮುಚ್ಚಿಟ್ಟಂಥ ಅಧಿಕಾರಿಗಳು ಯಾರು? ನನ್ನ ಪ್ರಕಾರ courtಗೆ ಏನು ಸರ್ಕಾರದಿಂದ ಹೋಯಿತು, ಮಾನ್ಯ ಮಾಧುಸ್ವಾಮಿ, ಮಾನ್ಯ ಶ್ರೀರಾಮರೆಡ್ಡಿಯವರು courtಗೆ ಹೋದಾಗ ಇದ್ಯಾವುದನ್ನೂ ಸರ್ಕಾರದಿಂದ courtಗೆ produce ಮಾಡಿಲ್ಲ. ಅದರಿಂದಾಗಿ ಇಂಥ ಒಂದು ಆದೇಶ ಬಂದಿದೆ. ಸೋಮಶೇಖರ್ ರೆಡ್ಡಿ case ನಲ್ಲಿ ಸಹ ಇದೇ ತರಹ ಆಗಿರಬೇಕು. ಯಾವುದೇ ದಾಖಲೆಗಳನ್ನು court ಮುಂದೆ ಇಡದೇ ಇದ್ದುದ್ದರಿಂದ ಈ ಒಂದು ಆದೇಶ ಬಂದಿರಬಹುದು. ಆದ್ದರಿಂದ, ಇದೆಲ್ಲವೂ ತನಿಖೆಯಾಗಬೇಕಾದರೆ ಕೇವಲ Judicial Enquiry ಆದರೆ ಸಾಕಾಗುವುದಿಲ್ಲ. CBI Enquiry ಆಗಲೇಬೇಕಾಗುತ್ತದೆ. ಇಲ್ಲದಿದ್ದರೆ ಅದು cold storage ಗೆ ಹೋಗುತ್ತದೆಂಬುದು ನನ್ನ ಅಭಿಪ್ರಾಯ. ಏಕೆಂದರೆ, ಎಲ್ಲರೂ ಹೇಳಿದರು. ಮತ್ತೆ Bill ತರುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಯನ್ನು ನೋಡಿದ್ದೇವೆ. ಹಾಗೆಯೇ ನಾವು ವಿರೋಧ ಪಕ್ಷದ ನಾಯಕರ ಹೇಳಿಕೆಯನ್ನು ಕೇಳಿದ್ದೇವೆ. ಆದರೆ ಇವತ್ತು ಮುಖ್ಯಮಂತ್ರಿಗಳು ಒಂದು ಉತ್ತರವನ್ನು ಕೊಡುತ್ತಾರೆ, ಅಂಗಪಕ್ಷದ ನಾಯಕರು ಇನ್ನೊಂದು ಹೇಳಿಕೆ ಕೊಡುತ್ತಾರೆ. ಆದರೆ, ನಮಗೆ ಬೇಕಾಗಿರುವುದು ಕೇವಲ ಸರ್ಕಾರದ ಉತ್ತರ. ಎರಡು ಉತ್ತರ ನಮಗೆ ಬೇಕಾಗಿಲ್ಲ. ಸರ್ಕಾರದ ಪರವಾಗಿ ಒಬ್ಬರು ಮುಖ್ಯಮಂತ್ರಿಗಳು ಮಾತ್ರ ಉತ್ತರವನ್ನು ಕೊಟ್ಟು ಇಡೀ ಸರ್ಕಾರದ ಅಭಿಪ್ರಾಯವೇನು ಎಂಬುದನ್ನು ತಿಳಿಸಬೇಕಾಗುತ್ತದೆ. ಎರಡು ಅಭಿಪ್ರಾಯ ಬರುತ್ತಿದೆಂದು ನಾನು ನಿನ್ನೆಯೇ ಹೇಳಿದ್ದೇನೆ. ದಯವಿಟ್ಟು ಒಂದೇ ಅಭಿಪ್ರಾಯವನ್ನು ತನ್ನಿ. ಮಸೂದೆಯನ್ನು ಮಂಡಿಸಿ. ಮಾನ್ಯ ದೇವೇಗೌಡರು ಸಹಿತ ಅದನ್ನೇ ಹೇಳಿದ್ದಾರೆ. ಮಸೂದೆಯನ್ನು ಮಂಡಿಸಿ ನಾವು ಬೆಂಬಲವನ್ನು ಕೊಡುತ್ತೇವೆ.

ಅಧ್ಯಕ್ಷರು : ಆಯಿತು. ಬೇಗ ಮುಗಿಸಿ. ಬೆಳಿಗ್ಗೆ ಮಾತನಾಡಿದ ರೀತಿಯಲ್ಲಿಯೇ ಮತ್ತೆ ನೀವು ಮಾತನಾಡುತ್ತಿದ್ದೀರಿ. ಒಂದೊಂದು ನಿಮಿಷದಲ್ಲಿ ಹೇಳಿ ಮುಗಿಸುವುದಿಲ್ಲ. ಈಗ ರಾಜೇಂದ್ರನ್‌ರವರು ಮಾತನಾಡಿ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ,.....

(ಗೊಂದಲ)

ಅಧ್ಯಕ್ಷರು : ಕುಳಿತುಕೊಳ್ಳಿ. ನಿಮ್ಮ ಅಭಿಪ್ರಾಯಗಳನ್ನೆಲ್ಲಾ ನಿಮ್ಮ ನಾಯಕರು ಹೇಳಿದ್ದಾರೆ. ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಅಧ್ಯಕ್ಷರೆ, ಈ ಸಭೆಗೆ ಬಿಡುತ್ತೇವೆ, ಈ ಸಭೆ ತೀರ್ಮಾನ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಆದ್ದರಿಂದ, CBI ಗೆ ಹೋಗಲೇ ಬೇಕೆಂದು ಈಗ ಈ ಸಭೆ ತೀರ್ಮಾನ ಮಾಡುತ್ತದೆ. ಇನ್ನು ರೈತರುಗಳಿಗೆ ಯಾವ ತರಹ ಕೊಡಬೇಕೋ...

(ಗೊಂದಲ)

Sri K.R. Rameshkumar : If this House demands that this must be entrusted CBI for enquiry, put it to the vote of the House.

ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್) : ಆದ್ದರಿಂದ ರೈತರುಗಳಿಗೆ ಜಮೀನನ್ನು ವಾಪಸ್ಸು ಕೊಡುತ್ತೇವೆಂದು ಏನು ಮುಖ್ಯಮಂತ್ರಿಯವರು ಹೇಳಿದ್ದಾರೋ, ಅದು ನಮಗೆ ಬಹಳ ಸಂತೋಷ. ರೈತರಿಗೆ ಜಮೀನು ವಾಪಸ್ಸು ಸಿಗಲಿ. ಆದರೆ ಒಂದು ಕಾನೂನು, Bill ತೆಗೆದುಕೊಂಡು ಬನ್ನಿ. ಆ Bill ಅನ್ನು ಸದನದ ಮುಂದೆ produce ಮಾಡಿ. ಮತ್ತು ಈ case ಅನ್ನು CBI ಗೆ ಒಪ್ಪಿಸಿ.

(ಗೊಂದಲ)

ಅಧ್ಯಕ್ಷರು : ಮಾನ್ಯ ಪ್ರಕಾಶ್‌ರವರು ಏನು ಹೇಳುತ್ತಾರೆ ಕೇಳಿ.

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ ಒಂದೆ ನಿಮಿಷ. ನಾನು ಮಾತನಾಡುವುದೆ ಇಲ್ಲ.

(ಗೊಂದಲ)

ಶ್ರೀ ಸಿ.ಬಿ. ಕೃಷ್ಣಬೈರೇಗೌಡ : ಮಾನ್ಯ ಅಧ್ಯಕ್ಷರೆ, ನಾನು ಹೇಳುವುದೇನೆಂದರೆ….

ಶ್ರೀ ಆರ್. ದಿನೇಶ್ ಗುಂಡೂರಾವ್ : ಮಾನ್ಯ ಅಧ್ಯಕ್ಷರೆ…

(ಗೊಂದಲ)

ಅಧ್ಯಕ್ಷರು : ಆಯಿತು. ನೀವು ಕುಳಿತುಕೊಳ್ಳಿ. ಎಲ್ಲವನ್ನೂ ನಿಮ್ಮ ನಾಯಕರು ಮಾತನಾಡಿದ್ದಾರೆ. ಎಲ್ಲರಿಗೂ ಅವಕಾಶ ಕೊಡಲು ಇದೇನು? ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಪ್ರಕಾಶ್‌ರವರೇ, ತಾವು ಮಾತನಾಡಿ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಈಗ ಅವರು ಮಾನ್ಯ….

ಶ್ರೀ ಸಿ.ಬಿ. ಕೃಷ್ಣಬೈರೇಗೌಡ : ಮಾನ್ಯ ಅಧ್ಯಕ್ಷರೆ.

ಅಧ್ಯಕ್ಷರು : ದಯಮಾಡಿ ಕೂರಿ. ನಿಮ್ಮ ನಾಯಕರು ಎಲ್ಲಾ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಹೇಳಿದ್ದಾರೆ. ಆದ್ದರಿಂದ ಮತ್ತೆ ಮತ್ತೆ ಎಲ್ಲರಿಗೂ ಅವಕಾಶ ಕೊಡಲು ಆಗುತ್ತದೆಯೆ? ದಯಮಾಡಿ ಕುಳಿತುಕೊಳ್ಳಿ.

ಶ್ರೀ ಸಿ.ಬಿ. ಕೃಷ್ಣಬೈರೇಗೌಡ : ಒಂದು ನಿಮಿಷ ಅವಕಾಶ ಕೊಡಿ.

ಶ್ರೀ ಡಿ.ಕೆ. ಶಿವಕುಮಾರ್ : ಅವರಿಗೊಂದು ಅವಕಾಶ ಕೊಡಿ.

ಅಧ್ಯಕ್ಷರು : ನಿಮ್ಮ ಕಡೆಯವರು ನಿಂತುಕೊಂಡಾಗ ಅವರಿಗೊಂದು ಅವಕಾಶ ಕೊಡಿ ಇವರಿಗೊಂದು ಅವಕಾಶ ಕೊಡಿ ಎಂದು ಹೇಳುತ್ತೀರಿ. ಈ ರೀತಿ ಮಾಡತಕ್ಕದ್ದು ಸರಿಯಲ್ಲ. ಎಲ್ಲರಿಗೂ ಕೊಡಲು ಆಗುತ್ತದೆಯೇ? ಅನೇಕ ಜನರಿಗೆ ಅವಕಾಶ ಕೊಡಲು ಆಗುತ್ತದೆಯೆ? ಮುಂದಿನ ಬೆಂಚ್‌ನವರಿಗೆಲ್ಲರಿಗೂ ಕೊಟ್ಟಿದ್ದೇನೆ. ಮತ್ತೆ ಮತ್ತೆ ಎದ್ದರೆ. ಹೀಗೇಕೆ ಮಾಡುತ್ತೀರಿ? ಈಗ ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾರೆ ಕೇಳಿ.

ಶ್ರೀ ಆರಗ ಜ್ಞಾನೇಂದ್ರ : ಒಂದು ಕ್ಲಾರಿಫಿಕೇಷನ್ ಅವಕಾಶ ಕೊಡಿ.

ಅಧ್ಯಕ್ಷರು : ನೀವು ಆಡಳಿತ ಮಾಡುತ್ತಿರುವವರು ಸರ್ಕಾರಿ ಪಕ್ಷಕ್ಕೆ ಸೇರಿದವರು. ನೀವ್ಯಾರಾದರೂ ಮುಖ್ಯಮಂತ್ರಿಗಳು ಅಥವಾ ಜವಾಬ್ದಾರಿ ಹೊಂದಿರುವ ಮಂತ್ರಿಗಳು ಮಾತನಾಡಬೇಕು. ಅದನ್ನು ಬಿಟ್ಟು ಇವರೆಲ್ಲಾ ಕೇಳುತ್ತಿದ್ದಾರೆಂದು ನೀವು ಕೇಳಿದರೆ ಏನು ಪ್ರಯೋಜನವಾಯಿತು? ಚರ್ಚೆಯಾಗಿದೆ, ನಿಮ್ಮ ಅಭಿಪ್ರಾಯಗಳನ್ನು

ಹೇಳಿದ್ದೀರಿ, ಚರ್ಚೆಯಲ್ಲಿ ಭಾಗವಹಿಸಿದ್ದೀರಿ, ಮತ್ತೆ ಮತ್ತೆ ಇದೆ ರೀತಿಯಾದರೆ I can't understand.

ಶ್ರೀ ಆರಗ ಜ್ಞಾನೇಂದ್ರ : ಸಮಗ್ರವಾಗಿ ಚರ್ಚೆಯಾಗಿದೆ. ನಮಗೆ ಒಂದೆ ಒಂದು ಕ್ಲಾರಿಫಿಕೇಷನ್‌ಗೆ ಅವಕಾಶ. ಬೇರೆ ಏನೂ ಇಲ್ಲ. ನಾನೇನೂ ದೊಡ್ಡ ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳುತ್ತಿದ್ದೇನೆ.

ಶ್ರೀ ಸಿ.ಬಿ. ಕೃಷ್ಣಬೈರೇಗೌಡ : ಮಾನ್ಯ ಅಧ್ಯಕ್ಷರೆ..

(ಗೊಂದಲ)

ಶ್ರೀ ಆರ್. ದಿನೇಶ್ ಗುಂಡೂರಾವ್ : ಮಾನ್ಯ ಅಧ್ಯಕ್ಷರೆ, ನಮಗೆ ಮಾತನಾಡಲು ಅವಕಾಶ ಕೊಡಿ.

(ಗೊಂದಲ)

ಶ್ರೀ ಸಿ.ಬಿ. ಕೃಷ್ಣಬೈರೇಗೌಡ : ನಮಗೆ ಒಂದು ನಿಮಿಷ ಅವಕಾಶ ಕೊಡಿ. ಇದು ಯಾವ ನ್ಯಾಯ?

ಅಧ್ಯಕ್ಷರು : ಯಾರಾದರೂ ನಿಮ್ಮ ಕಡೆಯಿಂದ ಹಿರಿಯರು ಮಾತನಾಡಲು ಒಬ್ಬರಿಗೆ ಅವಕಾಶ ಕೊಡಬಹುದು. ಎಲ್ಲರಿಗೂ ನಮಗೆ ಒಂದು ಅವಕಾಶ ಕೊಡಿ, ನನ್ನದೊಂದು ಕ್ಲಾರಿಫಿಕೇಷನ್ ಎಂದು ಈ ಹಂತದಲ್ಲಿ ಹೇಳಿದರೆ ನಾನು ಏನು ಮಾಡುವುದಕ್ಕೆ ಆಗುತ್ತದೆ? ದಯಮಾಡಿ ಹೇಳಿ. That is not correct. ಕೊಡಲು ಆಗುವುದಿಲ್ಲ ನಿಮ್ಮ ಅಭಿಪ್ರಾಯವನ್ನು ಎಲ್ಲರೂ ಹೇಳಿದ್ದಾರೆ.

(ಗೊಂದಲ)

ಶ್ರೀ ಸಿ.ಬಿ. ಕೃಷ್ಣಬೈರೇಗೌಡ : ಒಂದೊಂದು ನಿಮಿಷ ಅವಕಾಶ ಕೊಡಿ ಸಾಕು.

ಅಧ್ಯಕ್ಷರು : ಕೊಡಲು ಆಗುವುದಿಲ್ಲ ಕುಳಿತುಕೊಳ್ಳಿ. ನಿಮ್ಮ ಅಭಿಪ್ರಾಯಗಳನ್ನೆಲ್ಲಾ ಹೇಳಿದ್ದಾರೆ.

ಶ್ರೀ ಸಿ.ಬಿ. ಕೃಷ್ಣಬೈರೇಗೌಡ : ಯಾವುದಾದರೂ ಒಂದನ್ನು ಕೇಳಿರುವ ಉದಾಹರಣೆ ಇದೆಯೇ ಹೇಳಿ ಅಧ್ಯಕ್ಷರೇ? ನಾವೇನು ದಿನಾ ಮಾತನಾಡಲು ನಿಂತುಕೊಳ್ಳುತ್ತೇವೆಯೆ?

(ಗೊಂದಲ)

ಅಧ್ಯಕ್ಷರು : ನಾನು ಎಲ್ಲರಿಗೂ ಅವಕಾಶ ಕೊಡುವುದಕ್ಕೆ ಕಷ್ಟವಾಗುತ್ತದೆ. ಅವರು ಉತ್ತರ ಹೇಳಿದಾಗ ಕೆಲವು ಕ್ಲಾರಿಫಿಕೇಷನ್‌ಗಳನ್ನೆಲ್ಲಾ ಹೇಳಿದ್ದಾರೆ. ಎಲ್ಲರಿಗೂ ಅವಕಾಶ ಕೊಡಲು ಹೇಗೆ ಸಾಧ್ಯವಾಗುತ್ತದೆ?

ಶ್ರೀ ಸಿ.ಬಿ. ಕೃಷ್ಣಬೈರೇಗೌಡ : ಏನಿದು XXX

ಅಧ್ಯಕ್ಷರು : ಆ ರೀತಿ ಮಾತನಾಡಿದರೆ ಹೇಗೆ? I can't understand ಯಾರಾದರು ಒಬ್ಬರೂ ಮಾತನಾಡಿ.

(ಗೊಂದಲ)

ಶ್ರೀ ಆರ್. ದಿನೇಶ್ ಗುಂಡೂರಾವ್ (ಗಾಂಧಿನಗರ) : ಮಾನ್ಯ ಅಧ್ಯಕ್ಷರೆ, ಸದನದ ಸಭಿಪ್ರಾಯವನ್ನು ತೆಗೆದುಕೊಂಡು ಮಾಡುತ್ತೇವೆಂದು ಹೇಳಿರತಕ್ಕ ಮುಖ್ಯಮಂತ್ರಿಗಳ ಮಾತಿಗೆ ಈಗ ಉತ್ತರ ಕೊಡುತ್ತೇವೆ. ಈ ಚರ್ಚೆ ಪ್ರಾರಂಭವಾದಮೇಲೆ 8 ದಿವಸ ಚರ್ಚೆ ಮಾಡಿದ್ದೇವೆ. ಈ ಚರ್ಚೆಯ ಮಾತುಗಳಲ್ಲಿ ವಿರೋಧ ಪಕ್ಷದವರು ನಾವೆಲ್ಲರೂ ಕೂಡ ಮಾತನಾಡುವುದು, ಮತ್ತು ಆಡಳಿತ ಪಕ್ಷದ ಸದಸ್ಯರುಗಳು, ಏನು ರಾಮಸ್ವಾಮಿಯವರು, ರಾಜಣ್ಣನವರ ಭಾಷಣ ಕೇಳಿದಾಗ ಏನೊ ಆಗುತ್ತದೆಂದು ನಾವು ತಿಳಿದುಕೊಂಡಿದ್ದೆವು. ಬಹಳ ರೋಮಾಂಚನವಾಗಿ ಮಾತನಾಡಿದರು. ಗಂಡರು ಷಂಡರು ಎಂದೆಲ್ಲಾ ಹೇಳಿದರು. ಈವತ್ತು ಗಂಡರು ಯಾರು ಷಂಡರು ಯಾರು ಎಂಬುದು ನಮಗೆ ಗೊತ್ತಾಗುತ್ತಿದೆ. ಆದ್ದರಿಂದ ಈವತ್ತು ನಮ್ಮ ಪಕ್ಷದ ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ. ನಿಲುವನ್ನು ಈಗಾಗಲೇ ಬಹಿರಂಗ ಮಾಡಿದ್ದೇವೆ. ಇದರ ಬಗ್ಗೆ.

ಅಧ್ಯಕ್ಷರು : ಹೊಸ ವಿಚಾರವನ್ನು ಮಾತನಾಡಿ. ನೀವು ಹೇಳಿರುವುದನ್ನೇ ಅವರು ಹೇಳುವುದಾದರೆ ಏತಕ್ಕೆ ಮಾತನಾಡಬೇಕು? I can't understand.

XXX ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಡಾ॥ ಕೆ. ಅನ್ನದಾನಿ : ನೀವು ಹೇಳಿದ್ದೇ ಹೇಳುವುದನ್ನು ಕೇಳುವುದಕ್ಕೆ ಇಲ್ಲಿ ಇರುವುದೇ? ವಿರೋಧ ಪಕ್ಷದಲ್ಲಿ ಇದ್ದೇವೆಂದು ನಿಮಗೆ ಇಷ್ಟ ಬಂದಿದ್ದನ್ನೇ ಹೇಳುತ್ತಿದ್ದೀರಲ್ಲಾ?

ಶ್ರೀ ಆರ್. ದಿನೇಶ್ ಗುಂಡೂರಾವ್ : ಸುಪ್ರೀಂ ಕೋರ್ಟ್‌ನ ತೀರ್ಮಾನ ನಮಗೆಲ್ಲರಿಗೂ ಗೊತ್ತಿರುವುದೇ ಎಕ್ಸಸ್ ಲ್ಯಾಂಡ್ ವಾಪಸ್ ಕೊಡಬೇಕೆಂದು ನಾವೆಲ್ಲರೂ ಹೇಳುತ್ತಿದ್ದೇವೆ. ಅದರ ಬಗ್ಗೆ ವಾದವಿವಾದ ಇಲ್ಲವೇ ಇಲ್ಲ. ಅವರ ಹೇಳಿಕೆಯಲ್ಲಿ ಹೊಸದೇನಿದೆ? ಸಿ.ಬಿ.ಐ enquiry ಮಾಡಿ ಸರಿಯಾದ ತನಿಖೆ ಮಾಡಿ ಎಂದು ನಾವು ಹೇಳಿದರೆ ಅದಕ್ಕೆ ಇವರು ಒಪ್ಪುತ್ತಿಲ್ಲವಲ್ಲಾ. ಇದು ಬಹಿರಂಗವಾಗಲಿ. ಜನರಿಗೆ ಗೊತ್ತಾಗಲಿ ಗಂಡರು ಯಾರು ಷಂಡರು ಯಾರು ಎಂದು.

(ಗೊಂದಲ)

ಅಧ್ಯಕ್ಷರು : ಆಗಲಿ ನೀವು ಮಾತನಾಡಿ. ಗೋಡಾ ಹೈ ಮೈದಾನ್ ಹೈ! ಇಲ್ಲಿ ಯಾವ ರೀತಿ ನೀತಿ ಇಲ್ಲ. ನಾನು ನನ್ನ ಚಿಕ್ಕ ಅನುಭವದಲ್ಲಿ ಈ ತರಹ ನೋಡಿಲ್ಲ. ಆಯಿತು ಮಾತನಾಡಿ.

ಶ್ರೀ ಆಗರ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ಸಮಗ್ರವಾಗಿ ಚರ್ಚೆಯಾಗಿದೆ. ನಾನೇನೂ ಮಾತನಾಡಲು ಹೋಗುವುದಿಲ್ಲ. ನಮ್ಮ ವಿರೋಧ ಪಕ್ಷದ ನಾಯಕರು ಮತ್ತು ಅನೇಕರು ಸಿ.ಬಿ.ಐ ವಿಚಾರಣೆ ಆಗಲಿ ಎಂದು ಹೇಳಿದ್ದಾರೆ. ನಾವು ಸಿ.ಬಿ.ಐ ವಿಚಾರಣೆಯ ಒಂದು ಸ್ಯಾಂಪಲ್‌ನ್ನು ನೋಡಿಬಿಟ್ಟಿದ್ದೇವೆ. ಬಟ್ಕಳದಲ್ಲಿ ಡಾ॥ ಚಿತ್ತರಂಜನ್‌ರವರ ಕೊಲೆ ನಡೆದಂಥ ಸಂದರ್ಭದಲ್ಲಿ ಸಿ.ಬಿ.ಐ.ಗೆ ವಹಿಸಿದ್ದರು. ಹತ್ತು ವರ್ಷದ ನಂತರ ಸಿ.ಬಿ.ಐ. ಏನೂ ಮಾಡಲಿಲ್ಲ. ಹಾಗಾಗಿ ಯಾವ್ಯಾವ ಏಜನ್ಸಿಗಳು ಯಾವ್ಯಾವ ರೀತಿ ವಿಚಾರಣೆ ಮಾಡುತ್ತವೆ ಎಂಬುದನ್ನು ನಾವೆಲ್ಲರೂ ಈಗಾಗಲೇ ನೋಡಿದ್ದೇವೆ. ಇದರಲ್ಲಿ ಪ್ರತಿಷ್ಠೆ ಮಾಡಿಕೊಂಡು ನಾವು ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡುತ್ತೇವೆ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ ಎಂಬ ಒಂದೇ ಕಾರಣವನ್ನು ಮುಂದಿಟ್ಟುಕೊಂಡು ನೀವು ಸಿ.ಬಿ.ಐ. ಎನ್‌ಕ್ವೈರಿ ಆಗುವಂಥದಲ್ಲಿ. ಇಲ್ಲಿ ಪ್ರಾಮಾಣಿಕವಾಗಿರತಕ್ಕ ಕಾಳಜಿ ಬಹಳ ಮುಖ್ಯ. ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅವರು ಹೇಳಿರತಕ್ಕ ವಿವರವನ್ನು ಕೇಳಿದಾಗ, ಬೆಂಗಳೂರು–ಮೈಸೂರು ಮಧ್ಯೆ 111 ಕಿಲೋಮೀಟರ್ ರಸ್ತೆಯಾಗುವುದಲ್ಲ ಇದು. ಒಟ್ಟಾರೆ ರಾಜ್ಯದ ಜನಕ್ಕೆ 111

ಮಾಡಿದ್ದೀರಿ. ಆದ್ದರಿಂದ ಮಧ್ಯೆದಲ್ಲಿ ಇರತಕ್ಕಂಥ ಪ್ರೈವೇಟ್ ಲೇಔಟ್‌ಗಳನ್ನೂ ಕೂಡ ಇವರು ಹ್ಯಾಂಡ್‌ಓವರ್ ಮಾಡಿದ್ದಾರೆ. ನಮ್ಮ ಅಧಿಕಾರಿಗಳಿದ್ದಾರಲ್ಲಾ ಇವರು ಅನಗತ್ಯವಾಗಿ ಮೂಗುತೋರಿಸಿ ಈ ಬಹಳ ದೊಡ್ಡ ಗೋಲ್‌ಮಾಲ್‌ಗೆ ಕಾರಣಕರ್ತರಾಗಿದ್ದಾರೆ. ಇವರ ಎನ್‌ಕ್ವೈರಿ ಮಾಡಿ ಶಿಕ್ಷೆಕೊಡಲು ಸಿ.ಬಿ.ಐ. ಬೇಡ, ನ್ಯಾಯಾಂಗ ತನಿಖೆಯೂ ಬೇಡ. ನಮ್ಮ ಮುಖ್ಯಕಾರ್ಯದರ್ಶಿಗಳಿಂದ ಒಂದು ರಿಪೋರ್ಟ್‌ನ್ನು ತರಿಸಿ, ಯಾರ್‍ಯಾರು ಇದರಲ್ಲಿ ಏನೇನು ಫ್ರಾಡ್ ಮಾಡಿದ್ದಾರೆ ಎನ್ನುವಂಥದ್ದರ ಮೇಲೆ ಅವರನ್ನು ಹ್ಯಾಂಗ್ ಮಾಡಬೇಕಾಗುತ್ತದೆ. ಏಕೆಂದರೆ, ನಾನು ಈವತ್ತು.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜ್ : ನ್ಯಾಯಾಂಗ ತನಿಖೆಯಲ್ಲಿ ನಿಮಗೆ ನಂಬಿಕೆ ಇಲ್ಲವೆ? ಕೇವಲ ಸಿ.ಬಿ.ಐ. ತನಿಖೆಯಲ್ಲಿ ಮಾತ್ರ ನಂಬಿಕೆ ಇರುವುದು?

ಅಧ್ಯಕ್ಷರು : ಬಸವರಾಜ್‌ರವರೆ, ಅವರು ಮಾತನಾಡುತ್ತಿದ್ದಾರೆ, ನೀವೇಕೆ ಮಾತನಾಡುತ್ತೀರಿ?

ಶ್ರೀ ಆರಗ ಜ್ಞಾನೇಂದ್ರ : ಉಳಿದಿರತಕ್ಕದನ್ನು ನ್ಯಾಯಾಂಗ ತನಿಖೆಗೆ ಗುರಿಪಡಿಸಲಿ. ಆದರೆ ಅಧಿಕಾರಿಗಳ ಬಗ್ಗೆ ರೆಕಾರ್ಡ್‌ಗಳೇ ಹೇಳುತ್ತವೆ. ರೆಕಾರ್ಡ್ ಮಾತನಾಡುತ್ತದೆ ಎಂದು ಹೇಳಿದಿರಲ್ಲಾ ರೆಕಾರ್ಡ್‌ಗಳು ಹೇಳುತ್ತವೆ, ಯಾವ್ಯಾವ ಅಧಿಕಾರಿ ಆದೇಶ ಇಲ್ಲದೆ ಯಾವ್ಯಾವುದನ್ನು ಹ್ಯಾಂಡ್ ಓವರ್ ಮಾಡಿದರು ಹೇಗೆ ಎಂಬುದನ್ನು ಅನಗತ್ಯವಾಗಿ ನಾವು ಕೆಲವು ಸರ್ಕಾರಗಳು, ಕೆಲವು ಪಕ್ಷಗಳು ಇಲ್ಲ ಶಾಶ್ವತ ಎಂದು ಹೇಳಿ ತಿಳಿದು ಅಧಿಕಾರಿಗಳು ಮುಂದೆ ಆ ಕಂಪನಿಯಲ್ಲಿ ಕೆಲಸಕ್ಕೆ ಹೋಗಬೇಕೆಂದು ಮಾಡಿ ತಮ್ಮ ನಿವೃತ್ತಿಯಂಚಿನಲ್ಲಿರುವ ಕೆಲವು ಅಧಿಕಾರಿಗಳು, ಸಾಮಾನ್ಯ ಗುಮಾಸ್ತನೋ ವಿಲೇಜ್ ಅಕೌಂಟೆಂಟ್ ಮಾಡಿದ್ದ ಕೆಲಸವಲ್ಲ ಇದು, ನಮ್ಮ ಅತ್ಯಂತ ಉನ್ನತ ಸ್ಥಾನದಲ್ಲಿರತಕ್ಕಂಥ ಈ ರಾಜ್ಯದ ಅಧಿಕಾರಿಗಳು ಮಾಡಿದ್ದಾರೆ. ಇದರಲ್ಲಿ ಭಾಗವಹಿಸಿದ್ದಾರೆ. ಅವರನ್ನು ಹ್ಯಾಂಗ್ ಮಾಡುವುದಕ್ಕೆ ಏನು ಮಾಡಬೇಕು? ಅವರಿಗೇನು ಶಿಕ್ಷೆ ಕೊಡಲು ಮಾಡಬೇಕೋ ಅದನ್ನು ತಕ್ಷಣ ಮಾಡಿ. ಇದನ್ನು ನಾನು ಹೇಳುತ್ತಿದ್ದೇನೆ. ಇದರ ಬಗ್ಗೆ ಆಗಬೇಕಾಗುತ್ತದೆ. ಸಮಗ್ರವಾಗಿ ಇದನ್ನು ಮಾಡಿ. ಮತ್ತು ಯಾವ್ಯಾವ ರಾಜಕಾರಣಿಗಳು ಈ ರಾಜ್ಯದ ನೆಲ ಲೂಟಿ ಹೊಡೆಯುವುದಕ್ಕೆ ಶಾಶ್ವತವಾಗಿ

ಗಂಟು ಮಾಡುವುದಕ್ಕೆ ಭಾಗವಹಿಸಿದ್ದಾರೆ ಅದು ಹೊರಕ್ಕೆ ಬರಬೇಕು. ಆ ರೀತಿಯಲ್ಲಿ ಸರಿಯಾದ ಎನ್‌ಕ್ವೈರಿ ಜ್ಯುಡಿಷಿಯಲ್ ಎನ್‌ಕ್ವೈರಿ ಆಗುವಂಥದ್ದು ಒಳ್ಳೆಯದಾಗುತ್ತದೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದಕ್ಕೆ ನಮ್ಮ ಬೆಂಬಲವಿದೆ. ಅದನ್ನು ಮಾಡಿಸಬೇಕು.

ಶ್ರೀ ಅಂಜನಮೂರ್ತಿ : ಮಾನ್ಯ ಅಧ್ಯಕ್ಷರೆ...

(ಗೊಂದಲ)

ಅಧ್ಯಕ್ಷರು : ಒಂದು ನಿಮಿಷ. ಬೇಗ ಮುಗಿಸಿ.

ಶ್ರೀ ವೈಜನಾಥ್ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಆರಗ ಜ್ಞಾನೇಂದ್ರರವರು ಜಗತ್ತಿನಲ್ಲಿ ಇಂಥದ್ದು ಆಗಿಲ್ಲ ಎಂದು ಹೇಳುತ್ತಿದ್ದರು. ಆದರೆ ಈವತ್ತು ಇವರೇಕೆ ಹಿಂದೆ ತಿರುಗುತ್ತಿದ್ದಾರೆಂಬುದು ನನಗೆ ಗೊತ್ತಿಲ್ಲ. ಸಿ.ಬಿ.ಐ. ಎನ್‌ಕ್ವೈರಿ ಆಗಲೇ ಬೇಕು. ಸಿ.ಬಿ.ಐ ಎನ್‌ಕ್ವೈರಿ ಆಗಲೇ ಬೇಕೆಂದು ಹೇಳಿದವರೆಲ್ಲಾ ಈವತ್ತೇಕೋ ಹಿಂದೇಟು ಹಾಕುತ್ತಿದ್ದಾರೆ. ಮತ್ಯಾವುದೋ ಕಮಿಟಿಗೆ ತಿರುಗುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ವೈಜನಾಥ್ ಪಾಟೀಲರೆ, ಈಗ ಸಭಾನಾಯಕರು ಮಾತನಾಡುತ್ತಿದ್ದಾರೆ. ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ವೈಜನಾಥ್‌ಪಾಟೀಲ್ : ಜಗತ್ತಿನಲ್ಲಿ ಇಂಥ ದೊಡ್ಡ ಸ್ಕ್ಯಾಂಡಲ್ ಆಗಿಲ್ಲವೆಂದು ಹೇಳಿ ಈಗ ನ್ಯಾಯಾಂಗ ತನಿಖೆ ಮಾಡಿ ಎಂದು ಹೇಳಿ ಸಿ.ಬಿ.ಐ ತನಿಖೆಯಿಂದ ಡೈಲ್ಯುಟ್ ಮಾಡುತ್ತಿದ್ದಾರೆ. ಏನಾಗಿದೆ? ಒಂದು ರಾತ್ರಿಯಲ್ಲಿ ಡೈಲ್ಯುಟ್ ಆಗುತ್ತಿದೆ. ಏಕೆ ಡೈಲ್ಯುಟ್ ಮಾಡುತ್ತಿದ್ದೀರಿ? ಸಿ.ಬಿ.ಐ ಎನ್‌ಕ್ವೈರಿ ಕೇಳಿದ್ದೆವು ಆದರೆ ಅದನ್ನು ಸರ್ಕಾರದವರು ಡೈಲ್ಯುಟ್ ಮಾಡುತ್ತಿದ್ದಾರೆ...

(ಗೊಂದಲ)

ಅಧ್ಯಕ್ಷರು : ಸಭಾನಾಯಕರು ಮಾತನಾಡುತ್ತಿದ್ದಾರೆ, ದಯಮಾಡಿ ಕೂರಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಯವರು) : ಮಾನ್ಯ ಅಧ್ಯಕ್ಷರೆ, ನಿಯಮ 69..

ಶ್ರೀ ವೈಜನಾಥ್ ಪಾಟೀಲ್ : ಈ ಎರಡು ರಾತ್ರಿಯಲ್ಲಿ ಏನಾಗಿದೆಯೋ ಗೊತ್ತಿಲ್ಲ, ದೊಡ್ಡ ದೊಡ್ಡ ಭಾಷಣ ಮಾಡಿದವರು ಈವತ್ತು ಸಿ.ಬಿ.ಐ ಎನ್‌ಕ್ವೈರಿ..

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜ್ : ಇದೆ ಸದನದಲ್ಲಿ ಬಟ್ಕಳದ ವಿಚಾರದಲ್ಲಿ ಎಷ್ಟು ಮಾತನಾಡಿದ್ದೇವೆ? ಸಿ.ಬಿ.ಐ.ಗೆ ವಹಿಸಿದ ಮೇಲೆ ಆ ತನಿಖೆ ಏನಾಯಿತು? ಅದರ ಬಗ್ಗೆ ನೀವು ಯೋಚನೆ ಮಾಡಿ. ಈವತ್ತು ನ್ಯಾಯಾಂಗ ತನಿಖೆಗೆ ಗೌರವಿಸಿ, ಅವರೇನು ಹೇಳಿದ್ದಾರೆ ಅದನ್ನು ಗೌರವಿಸುವುದನ್ನು ಮೊದಲು ಮಾಡಿ. ಸಿ.ಬಿ.ಐ ನಲ್ಲಿ ದೊಡ್ಡದಾಗೇನೂ ತಿಳಿದುಕೊಳ್ಳುವುದೇನಿಲ್ಲ. ಸಿ.ಬಿ.ಐ ಬಗ್ಗೆ ಎಲ್ಲರಿಗೂ ಗೊತ್ತಿರುವುದೆ.

ಅಧ್ಯಕ್ಷರು : ಈಗ ಸಭಾ ನಾಯಕರು ಮಾತನಾಡುತ್ತಾರೆ, ದಯಮಾಡಿ ಎಲ್ಲರು ಕುಳಿತುಕೊಳ್ಳಿ. ಗಲಾಟೆ ಮಾಡಬೇಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ನಿಯಮ 69ರಲ್ಲೇನು ಮಾನ್ಯ ಶ್ರೀರಾಮರೆಡ್ಡಿಯವರು ಈ ಇಶ್ಯುವನ್ನು ಪ್ರಸ್ತಾಪಕ್ಕೆ ತಂದಿದ್ದೀರಿ ಇದರ ಬಗ್ಗೆ ಸುದೀರ್ಘವಾಗಿ ಉತ್ತರ ಕೊಟ್ಟಿದ್ದೇನೆ. ಇದಕ್ಕೆ ಏನಾದರೂ ಕ್ಲಾರಿಫಿಕೇಷನ್ ಇದ್ದರೆ ವಿರೋಧ ಪಕ್ಷದ ನಾಯಕರು ಮತ್ತು ಶ್ರೀರಾಮರೆಡ್ಡಿಯವರು ಕೇಳಿದ್ದರೆ ಸಾಕಾಗಿತ್ತು ಎಲ್ಲರೂ ಸಿ.ಬಿ.ಐ ಎನ್‌ಕ್ವೈರಿ ಏನು ಮಹಾ ಅವರ ಮುಖದಲ್ಲಿ ನೋಡುತ್ತಿದ್ದೇನೆ ಆನಂದ. ಈವತ್ತು ನಾನು ಕೇಳಲು ಬಯಸುತ್ತೇನೆ. ನನಗೆ ಸಂವಿಧಾನದ ವಿಷಯಗಳಲ್ಲಿ ಅಷ್ಟು ಗೊತ್ತಿಲ್ಲ. ಈವತ್ತು ರಮೇಶ್ ಕುಮಾರ್‌ರವರು ಹೇಳಬೇಕು. ಪ್ರತಿಯೊಂದು ಸಂದರ್ಭದಲ್ಲೂ ಏನು ಕಾನೂನಿನ ಬಗ್ಗೆ ಸದನದ ಕಾರ್ಯಕಲಾಪಗಳು ಬಗ್ಗೆ ನಿಯಮಗಳ ಬಗ್ಗೆ ಅವರು ಚರ್ಚೆ ಮಾಡುತ್ತಾರೆ, ಈವತ್ತು ಡಾ॥ ಅಂಬೇಡ್ಕರ್‌ರವರು ರಚನೆ ಮಾಡಿರತಕ್ಕ ಸಂವಿಧಾನಾತ್ಮಕ ಸಂಸ್ಥೆಗಳೇನಿದ್ದಾವೆ ಆ ಸಂಸ್ಥೆಗಳು ಕೆಲಸವನ್ನು ಮಾಡತಕ್ಕ ಸಂದರ್ಭದಲ್ಲಿ ಯಾವ್ಯಾವ ಸಂಸ್ಥೆಗಳ ಮೇಲೆ ಯಾವ್ಯಾವ ರೀತಿಯ ಒತ್ತಡಗಳನ್ನು ತಂದಿರತಕ್ಕ ಘಟನೆಗಳೇನಿದ್ದಾವೆ, ಈವತ್ತು ನಾನು ನಿಮ್ಮನ್ನು ಕೇಳುತ್ತೇನೆ, ಈ 58 ವರ್ಷಗಳ ಇತಿಹಾಸದಲ್ಲಿ ಅಂಬೇಡ್ಕರ್‌ರವರು ರಚನೆ ಮಾಡಿರತಕ್ಕ ಸಂವಿಧಾನಾತಕವಾದ ಸಂಸ್ಥೆಗಳಿಗೆ ಇವತ್ತು ಏನಾದರೂ ಇಂಡಿಪೆಂಡೆಂಟ್ ಆಗಿ ಕೆಲಸ ಮಾಡತಕ್ಕ ಅವಕಾಶಗಳು ಸಿಕ್ಕಿದ್ದಾವೆಯೆ? ಒತ್ತಡಗಳಿಗೆ ಮಣಿದಿದ್ದಾವೆಯೆ? ಇದರ ಬಗ್ಗೆ ಮೊದಲು ತೀರ್ಮಾನವಾಗಲಿ ನ್ಯಾಯಾಂಗ ತನಿಖೆ ಬಗ್ಗೆ ಇಷ್ಟೊಂದು

ಹೇಳತಕ್ಕಂಥವರಿಗೆ ನಾನು ಕೇಳುವುದೇನೆಂದರೆ, ತೆಲಗಿ ಪ್ರಕರಣವೆಲ್ಲವನ್ನೂ ನಾವು ನೋಡುತ್ತಿದ್ದೇವೆ. ಒಂದು ದೊಡ್ಡ ಹಡುಗನ್ನು ಹಿಡಿದ್ದೇವೆಂದು ಆಗ ಹೇಳಿದರು. ತೆಲಗಿ ಪ್ರಕರಣ ಈಗ ಏನಾಗಿದೆ? ಸಿಬಿಐ ಯಿಂದ ತನಿಖೆ ಮಾಡಿಸಿ ಎಂದು ಇವರು ಬಹಳ ಹೇಳುತ್ತಿದ್ದಾರೆ. ಸಿಬಿಐ ಸಂಸ್ಥೆಯನ್ನು ಕೇಂದ್ರ ಸರ್ಕಾರ ಯಾವ್ಯಾವ ರೀತಿಯಾಗಿ ಉಪಯೋಗ ಮಾಡಿಕೊಂಡಿದ್ದಾರೆಂಬುದರ ಬಗ್ಗೆ ಹಲವಾರು ಘಟನೆಗಳಿವೆ. ಸರ್ಕಾರಕ್ಕೆ ಇವತ್ತಿನದಿವಸ ಗೊತ್ತುಗುರಿ ಏನೂ ಇಲ್ಲವೆಂದು ಹೇಳುತ್ತಿದ್ದಾರೆ. ನಾನು ಈಗಾಗಲೇ ಉತ್ತರವನ್ನು ಕೊಟ್ಟಿದ್ದಾರೆ. ಇವತ್ತಿನದಿವಸ ಯಾವ ರೈತ ಭೂಮಿಯನ್ನು ಕಳೆದುಕೊಳ್ಳುವಂಥ ಸನ್ನಿವೇಶ ಇದ್ದು, ಈ ಭೂಮಿಯನ್ನು ವಾಪಸ್ಸು ಕೊಡತಕ್ಕಂಥದ್ದರ ಬಗ್ಗೆ ಈಗಾಗಲೇ ಕೆಲವು ಸದಸ್ಯರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿರತಕ್ಕಂಥದ್ದಕ್ಕೆ ನಾವು ಅದರ ತೀರ್ಮಾನ ಮತ್ತು ಕ್ರಮ ತೆಗೆದುಕೊಂಡು ಅವರಿಗೆ ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದೇನೆ. ಕಾನೂನಿನ ತೀರ್ಪುಗಳಿಗೆ ನಾವು ತಲೆ ಬಾಗಬೇಕಾಗುತ್ತದೆಯೋ ಅಥವಾ ಬೇಡವೇ ಎನ್ನತಕ್ಕಂಥದ್ದನ್ನು ತಾವು ಇವತ್ತು ಹೇಳಬೇಕಾಗುತ್ತದೆ. ಹಲವಾರು ಘಟನೆಗಳಲ್ಲಿ ತೀರ್ಪು ವಿರುದ್ಧ ಹೋಗಿದ್ದರಿಂದ ನಮ್ಮ ರಾಜ್ಯದವರೆ ಹೋಗಿ ಕ್ಷಮೆಯಾಚನೆ ಕೇಳಿರತಕ್ಕಂಥ ಘಟನೆಗಳನ್ನು ನಾವು ನೋಡಿದ್ದೇವೆ. ಇವತ್ತು ನಾವೂ ಕೂಡ ರಿವ್ಯೂ ಪಿಟಿಶನ್ ಹಾಕಿದ್ದೇವೆ. ಕಪಾಳಮೋಕ್ಷ ಮಾಡಿದ್ದಾರೆಂದು ಮಾನ್ಯ ವಿರೋಧಪಕ್ಷದ ನಾಯಕರು ಈಗಾಗಲೇ ಹೇಳಿದರು. ಕಪಾಳಮೋಕ್ಷ ಮಾಡತಕ್ಕಂಥ ಸನ್ನಿವೇಶ ಅಂದರೆ ಇವತ್ತಿನ ದಿವಸ ನಾನು ಕೋರ್ಟ್‌ಗಳಿಗೆ ತಪ್ಪುಗಳನ್ನು ಹೊರಿಸಲಿಕ್ಕೆ ಸಿದ್ದನಿಲ್ಲ. ಇವತ್ತಿನ ದಿವಸ ನಾನು ಕಾನೂನಿನ ತಲೆ ಬಾಗುತ್ತೇನೆ. ಆದರೆ, ಈಗ ಸರ್ಕಾರದ ಕಡತಗಳು ಏನು ಮಾತನಾಡುತ್ತಿದ್ದಾವೆ ಎಂಬುದನ್ನು ಹೇಳಿದ್ದೇನೆ. ನಿಮ್ಮನ್ನು ಮೆಚ್ಚಿಸಬೇಕೆಂದು ನಾನು ಈ ಮಾತನ್ನು ಹೇಳುತ್ತಿಲ್ಲ. ಮಾನ್ಯ ದೇವೇಗೌಡರು ಬರೆದಂಥ ಪತ್ರದ ಮೇಲೆ ತನಿಖೆ ಮಾಡಿಸಬೇಕೆಂದು ತಾವು ರೇವಣ್ಣನವರಿಗೆ ಹೇಳಿದ್ದೀರಿ. ಹಾಗೆಯೇ ಇದರ ಬಗ್ಗೆ ಕೆಲವು ಕ್ರಮ ತೆಗೆದುಕೊಳ್ಳಬೇಕೆಂದೂ ಕೂಡ ಹೇಳಿದ್ದೀರಿ. ಇವತ್ತಿನದಿವಸ ಅಲ್ಲಿಂದ ಕಡತಗಳು ಹೊರಕ್ಕೆ ಬರುತ್ತಿವೆ. ಈಗಾಗಲೇ ಸುಪ್ರೀಂ ಕೋರ್ಟ್‌ಗೆ ಹೇಳಿಬಿಟ್ಟರೆಂದು ಇಲ್ಲಿ ಯಾರೋ ಚೀಫ್ ಸೆಕ್ರೆಟರಿ ಬಗ್ಗೆ ಹೇಳುತ್ತಿದ್ದರು. ಅದಕ್ಕೆ ಕಾರಣ ಏನೆಂದರೆ, ಕೆಲವು ಕಡತಗಳನ್ನು ಏನು ಮುಚ್ಚಿಟ್ಟಿದ್ದರೋ ಅದರಿಂದ ಚೀಫ್ ಸೆಕ್ರೆಟರಿ ವಿರುದ್ಧವಾಗಿ ಸುಪ್ರೀಂ

ಕೋರ್ಟ್ ಏನು ತೀರ್ಮಾನವನ್ನು ಕೊಡುವುದಕ್ಕೆ ಹೊರಟಾಗ ನಮ್ಮ ಅಧಿಕಾರಿಗಳು ಮತ್ತೆ ಹೆದರಿಬಿಟ್ಟರು. ಅಲ್ಲಿಗೆ ನಿಮ್ಮ ಸರ್ಕಾರ ನಿಂತುಹೋಗುತ್ತದೆಂದು ತಿಳಿದುಕೊಂಡಿದ್ದರು. ಆದರೆ, ಇವೆಲ್ಲಾ ಗೊತ್ತಿದೆ, ಮುಂದಕ್ಕೆ ಖಂಡಿತ ತರುತ್ತೇವೆ. ನಾನೇನೂ ಇಲ್ಲಿಂದ ಹೆದರಿ ಹೋಗುವುದಿಲ್ಲ. ಇವತ್ತಿನದಿವಸ ಸರ್ಕಾರವನ್ನು ಯಾವರೀತಿಯಾಗಿ ನಡೆಸಬೇಕೆಂಬುದರ ಬಗ್ಗೆ ನನಗೂ ಕೂಡ ಜವಾಬ್ದಾರಿ ಇದೆ. ಇವತ್ತಿನದಿವಸ ನ್ಯಾಯಾಂಗ ತನಿಖೆ ಬಗ್ಗೆ ಇವರ್‍ಯಾರಿಗೂ ನಂಬಿಕೆಯೇ ಇಲ್ಲವೆಂದರೆ, ಸರ್ಕಾರದಲ್ಲಿ ಸಂವಿಧಾನತ್ಮಕವಾಗಿ ರಚನೆಯಾಗಿರತಕ್ಕಂಥ ಸಂಸ್ಥೆಗಳ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ನಮಗೆ ನ್ಯಾಯಾಂಗ ತನಿಖೆ ಬೇಡ ಸಿಬಿಐ ತನಿಖೆ ಬೇಕೆಂದು ಇವತ್ತು ಏಕೆ ಹೇಳುತ್ತಿದ್ದಾರೆ? ಈ ಸಂದರ್ಭದಲ್ಲಿ ಮಾನ್ಯ ಧರ್ಮಸಿಂಗ್‌ರವರಲ್ಲಿ ಒಂದು ವಿಚಾರವನ್ನು ಕೇಳುವುದಕ್ಕೆ ಬಯಸುತ್ತೇನೆ. ನಾನು ಈಗಾಗಲೇ ಆ ಪತ್ರವನ್ನು ಓದಿದಾಗ ಅವರು ಆ ಸಂದರ್ಭದಲ್ಲಿ ಇರಲಿಲ್ಲ. ಸರ್ಕಾರ ರಚನೆ ಮಾಡಬೇಕಾದರೆ ಅವರ ರಾಷ್ಟ್ರೀಯ ಅಧ್ಯಕ್ಷರ ಜೊತೆ ಏನು ಚರ್ಚೆಯಾಯಿತು. ಈ ಭೂ ಹಗರಣದ ಬಗ್ಗೆ ಅವತ್ತಿನದಿವಸ ಮಾನ್ಯ ದೇವೇಗೌಡರು ಏನು ಚರ್ಚೆ ಮಾಡಿದ್ದಾರೆಂಬುದು ಮತ್ತು ಅದರ ಬಗ್ಗೆ ಕಳೆದ 20 ತಿಂಗಳಲ್ಲಿ ಏತಕ್ಕೆ ತೀರ್ಮಾನ ಮಾಡುವುದಕ್ಕೆ ಆಗಲಿಲ್ಲ? ಅಂದರೆ ಇದರ ಬಗ್ಗೆ ತನಿಖೆ ಮಾಡುವುದಕ್ಕೆ ಏಕೆ ಆಗಲಿಲ್ಲ? ತನಿಖೆ ಮಾಡಬೇಡಿ ಎಂದು ನಾವು ಇವರನ್ನು ಹಿಡಿದುಕೊಂಡಿದ್ದೇವೆಯೇ? ಇವತ್ತಿನ ದಿವಸ ಈ ಸರ್ಕಾರವನ್ನು ಹೀಗೆ ಮಾಡಬೇಕು ಹಾಗೆ ಮಾಡಬೇಕೆಂದು ಏನು ಗಧಾಪ್ರಹಾರ ಮಾಡುವುದಕ್ಕೆ ಹೊರಟಿದ್ದೀರಿ. ಈ ರಾಜ್ಯದ ಜನತೆಗೆ ನ್ಯಾಯವನ್ನು ಇವತ್ತಿನ ದಿವಸ ದೊರಕಿಸಿಕೊಡತಕ್ಕಂಥದರ ಬಗ್ಗೆ ನಾನು ತೀರ್ಮಾನ ಮಾಡಿದ್ದೇನೆ. ಆ ಕೆಲಸ ಮಾಡುವುದಕ್ಕೆ ಸಾಧ್ಯವಾಗದೆ ಇದ್ದಾಗ ಏನು ಎಂಬುದನ್ನು ಆಗ ನಾನು ಹೇಳುತ್ತೇನೆ. ಆದ್ದರಿಂದ ಇಂಥದ್ದೇ ಆಗಬೇಕೆಂದು ಹೇಳಬೇಡಿ. ಏಕೆಂದರೆ ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡುವಂಥ ಸಂದರ್ಭದಲ್ಲಿ ಸರ್ಕಾರ ಇದನ್ನೇ ಮಾಡಬೇಕೆಂದು ತಾವು ಇನ್‌ಸಿಸ್ಟ್ ಮಾಡತಕ್ಕಂಥದರ ಬಗ್ಗೆ ನಿಯಮಾವಳಿಯಲ್ಲಿ ಇಲ್ಲ. ಆದರೂ ಕೂಡ ಆ ಒಂದು ಬಿಎಂಐಸಿ ಪ್ರಾಜೆಕ್ಟ್‌ನಲ್ಲಿ ಅಧಿಕಾರಿಗಳು ಏನು ತಪ್ಪುಗಳನ್ನು ಮಾಡಿದ್ದಾರೆ ಎಂಬುದರ ಬಗ್ಗೆ ಕಡತಗಳು ಏನು ಮಾತನಾಡುತ್ತಿವೆ ತಕ್ಷಣ ಸಂಬಂಧಪಟ್ಟವರ ಮೇಲೆ ಸರ್ಕಾರ ಕ್ರಿಮಿನಲ್ ಕೇಸ್ ಹಾಕತಕ್ಕಂಥದಕ್ಕೆ ಇವತ್ತು ತೀರ್ಮಾನ ಮಾಡುತ್ತಿದ್ದೇನೆ. ಇದರ

ಜೊತೆಗೆ ನ್ಯಾಯಾಂಗ ತನಿಖೆ ಮಾಡುವುದರ ಮುಖಾಂತರ ಅಂದರೆ ಕಳೆದ 8 ದಿವಸಗಳಿಂದ ಇದರ ಬಗ್ಗೆ ಇಲ್ಲಿ ಚರ್ಚೆಯಾಗಿದ್ದು ಇದರಲ್ಲಿ ತಪ್ಪು ಮಾಡಿರತಕ್ಕಂಥವರ ಮೇಲೆ ಕಠಿಣವಾದ ಕ್ರಮ ತೆಗೆದುಕೊಳ್ಳಲೇ ಬೇಕೆಂದು ಏನು ಹೇಳಿದ್ದಾರೆ, ಈ ಒಂದು ಕ್ರಮ ತೆಗೆದುಕೊಳ್ಳುವುದಕ್ಕೆ ಕೇವಲ ಸಿಬಿಐ ಸಂಸ್ಥೆಯಿಂದ ಆಗುತ್ತದೆ. ಬೇರೆ ಯಾವುದೇ ಒಂದು ಸಂಸ್ಥೆಯಿಂದ ಆಗುವುದಿಲ್ಲ ಎನ್ನತಕ್ಕಂಥ ಒಂದು ಅನುಮಾನಗಳು ಯಾರಿಗೂ ಬೇಕಾಗಿಲ್ಲ. ಒಡೆದ ಮನೆ ಎಂದು ಇವತ್ತಿನ ದಿವಸ ನಮಗೆ ಹೇಳುತ್ತಿದ್ದಾರೆ. ಮೇಲ್ಮನೆಯಲ್ಲಿ ವಿರೋಧಪಕ್ಷದ ನಾಯಕರಾಗಿರತಕ್ಕಂಥ ಮಾನ್ಯ ಹೆಚ್.ಕೆ. ಪಾಟೀಲ್‌ರವರು ಏನು ಹೇಳಿದ್ದಾರೆಂದರೆ, ಇದನ್ನು ನ್ಯಾಯಾಂಗ ತನಿಖೆಗೆ ಕೊಡಿ ಎಂದು ಅಲ್ಲಿ ಹೇಳುತ್ತಾರೆ. ಅದರೆ, ಇಲ್ಲಿ ಸಿಬಿಐಗೆ ಕೊಡಿ ಎಂದು ಹೇಳುತ್ತಾರೆ. ನಾವು ಒಡೆದಿದ್ದೇವೆಂದು ಮತ್ತು ನಮ್ಮಿಬ್ಬರಲ್ಲಿ ಭಿನ್ನಾಭಿಪ್ರಾಯ ಇದೆ ಹೇಳುತ್ತಾರೆ. ಆದ್ದರಿಂದ ಇದರ ಬಗ್ಗೆ ನಾನು ಯಾವುದೇ ರೀತಿಯ ಲೋಪದೋಷಗಳನ್ನು ಹೇಳತಕ್ಕಂಥ ಅವಶ್ಯಕತೆ ಇಲ್ಲ. 11 ವರ್ಷಗಳ ಒಂದು ಕರ್ಮಕಾಂಡದ ಬಗ್ಗೆ ಸರ್ಕಾರ ಏನು ತೀರ್ಮಾನಗಳನ್ನು ಮಾಡಬೇಕಾಗಿದೆ ಮತ್ತು ಇವುಗಳ ಬಗ್ಗೆ ಕ್ರಮ ತೆಗೆದುಕೊಳ್ಳತಕ್ಕಂಥದರ ಬಗ್ಗೆ ಕೂಡ ನಾವು ಬದ್ಧರಾಗಿದ್ದೇವೆ. ಆದ್ದರಿಂದ ಇದಕ್ಕೆ ಅಂತಿಮವಾದಂಥ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER : Let us close. What is the good in reiterating the same?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೋ ನೋ. ಈಗ ಸದಸ್ಯರಿಗೆ ಹೆದರಿಸಿ, ನನ್ನ ಹತ್ತಿರ ಇನ್ನೂ ಇದೆ ಎಂದು ಹೇಳಿ ಇವತ್ತಿನ ದಿವಸ ಏನಾದರೂ ಬಗ್ಗು ಬಡಿಯಬೇಕೆಂದರೆ ಅದು ಸಾಧ್ಯವಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದರೆ, ಒಂದು ಮಾತನ್ನು ಅವರೂ ಕೂಡ ನೆನಪಿನಲ್ಲಿಟ್ಟು ಕೊಂಡಿದ್ದಾರೆಂದು ನಾನೂ ಸಹ ತಿಳಿದುಕೊಂಡಿದ್ದೇನೆ. ನೀವು ಏನು ಮಾಡಬೇಕೋ ಅದನ್ನು ಮಾಡಿ, ನಾವು ಏನು ಮಾಡಬೇಕೋ ಅದನ್ನು ನಾವು ಮಾಡುತ್ತೇವೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಟ್ಟ ಮೇಲೆ ನೀವೂ ಕೂಡ ಕ್ಲಾರಿಫಿಕೇಶನ್ ಕೇಳಿದ್ದೀರಿ. ಆದ್ದರಿಂದ ಮತ್ತೆ ಮತ್ತೆ ಅದನ್ನೇ ಪ್ರಸ್ತಾಪ ಮಾಡಿ

ಗಂಟೆಗಟ್ಟಲೆ ಇದೇ ಆದರೆ ಹೇಗೆ? ಇನ್ನು ಪ್ರಶ್ನೋತ್ತರ ವೇಳೆ ಇದೆ. ಪ್ರಶ್ನೋತ್ತರ ಇನ್ನೂ ಆಗಬೇಕಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸನ್ಮಾನ್ಯ ಅಧ್ಯಕ್ಷರೇ, Legal point I am telling.

ಅಧ್ಯಕ್ಷರು : ಅದನ್ನು ಹೇಳಿ. ಬೇಗ ಮುಗಿಸೋಣ. ಉತ್ತರ ಕೊಟ್ಟಮೇಲೆ ಮತ್ತೆ ಏಕೆ ಚರ್ಚೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಚುನಾವಣೆ ಬಂದರೆ ಫೇಸ್ ಮಾಡೋಣ. ನಾನು ಈ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳತಕ್ಕಂಥದ್ದು ಏಕೆಂದರೆ, ಮಾನ್ಯ ರಮೇಶ್‌ಕುಮಾರ್‌ಜಿರವರು ಹೇಳಿರತಕ್ಕಂಥ ಮಾತನ್ನು ಅವರು ಕೇಳಿದ್ದಾರೆಂದು ನಾನು ನಂಬಿದ್ದೇನೆ. ಮತ್ತೆ ಅದರ ಬಗ್ಗೆ ತಿಳಿದುಕೊಂಡಿದ್ದಾರೆಂದು ನನಗೆ ಅರ್ಥವಾಗುತ್ತದೆ. ಜ್ಯುಡಿಷಿಯಲ್ ಪ್ರೋಬ್‌ನಲ್ಲಿ ನೀವು ಎಷ್ಟೇ ಎನ್‌ಕ್ವಯರಿ ಮಾಡಿದರೂ ಕೂಡ ಒಂದು ಪಿರಿಯಡ್‌ನಲ್ಲಿ ಆಗುವುದಿಲ್ಲ. ಎರಡನೆಯದಾಗಿ ಅದು ರೆಕಮೆಂಡೇಟರಿ ಬಾಡಿ ಮೂರನೇಯದಾಗಿ ತಕ್ಷಣ ಯಾರಿಗಾದರೂ ಪನಿಷ್‌ಮೆಂಟ್ ಕೊಟ್ಟು ಅಥವಾ ಮ್ಯಾಂಡೇಟರಿಯಾಗಿ ಆತನನ್ನು ಹಿಡಿದುಕೊಂಡು ತಂದು ಸತ್ಯಾಂಶವನ್ನು ಹೊರಕ್ಕೆ ತರತಕ್ಕಂಥದ್ದು ಆಗುವುದಿಲ್ಲ. ಆದ್ದರಿಂದ ಸಿಬಿಐನಲ್ಲಿ ಮ್ಯಾಂಡೇಟರಿ ಪ್ರಾವಿಜನ್ ಅವರ ಹತ್ತಿರ ಇದ್ದ ಕಾರಣ ಅಂದರೆ ಸಿಬಿಐ ಆ್ಯಕ್ಟ್‌ನಲ್ಲಿಯೇ ಪವರ್ಸ್ ಇರುವ ಕಾರಣ ನೇರವಾಗಿ ಅವರು ತನಿಖೆ ಪ್ರಾರಂಭ ಮಾಡುತ್ತಾರೆ. ಅದರಲ್ಲಿ ಸಮನ್ಸ್ ಕೊಟ್ಟ ತಕ್ಷಣವೇ ತನಿಖೆ ಪ್ರಾರಂಭವಾಗುತ್ತದೆ. ಆದರೆ, ಜ್ಯುಡಿಷಿಯಲ್ ಪ್ರೋಗ್ರಾಮ್ ಬಗ್ಗೆ ತಮಗೆಲ್ಲಾ ಗೊತ್ತಿದೆ. ಇಲ್ಲಿ ಮೊದಲು ನೋಟೀಸ್ ಕಳುಹಿಸಿಕೊಡುತ್ತಾರೆ. ಆನಂತರ ಬಂದರೆ ಬರಬಹುದು, ಹೋದರೆ ಹೋಗಬಹುದು. ಇದೆಲ್ಲಾ ನಿಮಗೂ ಕೂಡ ಗೊತ್ತಿದೆ. ಮತ್ತೆ ಇಲ್ಲಿ ಅನೇಕ ಸಾರಿ ತಪ್ಪಿಸಿಕೊಳ್ಳುತ್ತಾರೆ. ಈ ಒಂದು ಕಾರಣದಿಂದ ನಾವು ಸಿಬಿಐ ತನಿಖೆ ಕೇಳಿದ್ದೇವೆ ಹೊರತಾಗಿ ಯಾರಿಗಾದರೂ ಹೆದರಿಸಬೇಕೆಂದು ಮತ್ತು ಅದು ಕೇಂದ್ರ ಸರ್ಕಾರದ ಅಧೀನದಲ್ಲಿದೆ, ಅವರು ನಿಮ್ಮ ಮೇಲೆ ಒತ್ತಡ ಹೇರುತ್ತಾರೆಂದು ಹಾಗೂ ಇನ್ನೊಬ್ಬರು ಮೇಲೆ ಒತ್ತಡ ಹೇರುತ್ತಾರೆ ಎನ್ನತಕ್ಕಂಥದಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಜಾಲಪ್ಪನವರ ಕೇಸ್‌ನಲ್ಲಿ ಏನಾಯಿತ್ತೆಂದು ಮತ್ತು ಅವರು ಏನು ಸ್ಟೇಟ್‌ಮೆಂಟ್ ಕೊಟ್ಟರು? CBI was misutilised its power......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆ ಭಯ ನಿಮಗೂ ಕೂಡ ಇದೆಯೇ?

ಶ್ರೀ ಎಂ.ಪಿ. ಪ್ರಕಾಶ್ : ನಿಮಗೆ ಭಯ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಮಗೇನೂ ಭಯವಿಲ್ಲ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ : ನಾನು ಹೇಳುವುದನ್ನು ಸ್ವಲ್ಪ ಕೇಳಿ. ಸಿಬಿಐ ಅನ್ನು ಉಪಯೋಗಿಸಿ ಕೊಂಡು...

(ಗೊಂದಲ)

ಶ್ರೀ ಹೆಚ್.ಸಿ. ಬಾಲಕೃಷ್ಣ : ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಬ್ಯಾಂಕಿನ ಬಗ್ಗೆ ಸಿಬಿಐಗೆ ವಹಿಸಿದ್ದು ಏನಾಯಿತು?

(ಗೊಂದಲ)

ಅಧ್ಯಕ್ಷರು : ಮಾನ್ಯ ಪ್ರಕಾಶ್‌ರವರೆ, ಮೊದಲು ಮಾನ್ಯ ಖರ್ಗೆಯವರು ಮಾತನಾಡಲಿ. ಅನಂತರ ತಮಗೂ ಕೂಡ ಅವಕಾಶ ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸರಳವಾಗಿ ರಿಸಲ್ಟ್ ನಿಮಗೆ ಯಾವುದರಿಂದ ಸಿಗುತ್ತದೆಯೋ ಅದನ್ನು ಬಿಟ್ಟು ನೀವು ಬೇರೆ ವೆಪನ್ ಉಪಯೋಗ ಮಾಡುತ್ತೇವೆಂದರೆ ಹೇಗೆ? ಒಂದೇ ಕೇಸ್‌ಗೆ ಸಂಬಂಧಪಟ್ಟಂತೆ ಎರಡು ರೀತಿಯ ಕಮಿಟಿಗಳನ್ನು ಮಾಡುವುದಕ್ಕೆ ಬರುತ್ತದೆಯೇ ಅಥವಾ ಎರಡು ಏಜೆನ್ಸಿಗೆ ರೆಫರ್ ಮಾಡುವುದಕ್ಕೆ ಬರುತ್ತದೆಯೇ?

ಶ್ರೀ ಎಂ.ಪಿ. ಪ್ರಕಾಶ್ : ವೀರಪ್ಪನ್ ಕೇಸ್‌ಗೆ ಸಂಬಂಧಪಟ್ಟಂತೆ ತನಿಖೆ ಯನ್ನು ಸಿಬಿಐ ಕಡೆಯಿಂದ ಮಾಡಿಸಿ ಎಂದು ನಾವು ಕೇಳಿದಾಗ ತಾವು ಜ್ಯುಡಿಷಿಯಲ್ ತನಿಖೆ ಆದೇಶ ಮಾಡಿದಿರಿ. ಆಗ ಇದು ತಮಗೆ ಗೊತ್ತಾಗಲಿಲ್ಲವೇ? ವೀರಪ್ಪನ್ ಕೇಸ್‌ನಲ್ಲಿ ಇಂಟರ್ ಪೋಲ್ ಇದೆ; ಆದ್ದರಿಂದ ಸಿಬಿಐ ಯಿಂದ ತನಿಖೆಗೆ ಮಾಡಿಸಿ

ಎಂದು ಕೇಳಿದೆವು. ಆದ್ದರಿಂದ ನಾವೇನೂ ಅದಕ್ಕಾಗಿ ಹೆದರಿಕೊಳ್ಳತಕ್ಕಂಥದ್ದು ಏನಿಲ್ಲ. ಆದರೆ ಆ ಏಜೆನ್ಸಿಯನ್ನು ದುರುಪಯೋಗ ಮಾಡುತ್ತಾರೆಂಬ ಕಾರಣದಿಂದಲೇ ಈ ಮಾತನ್ನು ನಾವು ಹೇಳುತ್ತಿದ್ದೇವೆ. ಇಷ್ಟು ಆದಾಗ್ಯೂ ಕೂಡ ಇವೆಲ್ಲದಕ್ಕೂ ಉತ್ತರವನ್ನು ಕೊಟ್ಟಿದ್ದಾರೆ. ಸ್ಕೋಪ್ ಆಫ್ ರೂಲ್ 69 ಏನು? ಅದನ್ನು ಮೊದಲು ಹೇಳಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾನು ಕ್ಲಾರಿಫಿಕೇಷನ್ ಕೇಳುತ್ತಿದ್ದೇನೆ. ಜ್ಯುಡಿಷಿಯಲ್ ಪ್ರೋಗ್ರಾಮ್‌ನಲ್ಲಿ ಏನು ಡಿಸ್ ಅಡ್ವಾಂಟೇಜ್ ಎಂಬುದನ್ನು ಮತ್ತು ಸಿಬಿಐ ತನಿಖೆಯಿಂದ ಏನು ಆಗುತ್ತದೆಂದು ಹೇಳಿದ್ದೇನೆ...

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ : ವೀರಪ್ಪನ್ ಕೇಸ್‌ನಲ್ಲಿ ತಾವು ಏನು ಮಾಡಿದ್ದೀರಿ? ಆ ಸಂದರ್ಭದಲ್ಲಿ ತಾವೇ ಗೃಹ ಮಂತ್ರಿಗಳಾಗಿದ್ದೀರಿ. ಆ ಕೇಸ್‌ನ್ನು ಸಿಬಿಐಗೆ ಕೊಡುವುದಿಲ್ಲವೆಂದು ತಾವೇ ಹೇಳಿದಿರಿ. ಅದರ ಬಗ್ಗೆ ಜ್ಯುಡಿಷಿಯಲ್ ತನಿಖೆ ಮಾಡಿಸಿದಿರಿ. ಆದ್ದರಿಂದ ಇದರ ಬಗ್ಗೆ ಜ್ಯುಡಿಷಿಯಲ್ ತನಿಖೆ ಏಕೆ ಬೇಡ ಎಂದು ಹೇಳುತ್ತಿದ್ದೀರಿ?

(ಗೊಂದಲ)

ಅಧ್ಯಕ್ಷರು : ಇದರ ಬಗ್ಗೆ ಮತ್ತೆ ಮತ್ತೆ ಮಾತನಾಡತಕ್ಕಂಥದರಲ್ಲಿ ಅರ್ಥ ಇಲ್ಲ.

(ಗೊಂದಲ)

ಶ್ರೀ ಬಿ.ಎಸ್. ಹೊರಟ್ಟಿ : ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಇಲ್ಲಿದ್ದಾಗ ಒಂದು ಮಾತನ್ನು ಹೇಳುತ್ತಾರೆ. ಅಲ್ಲಿದ್ದಾಗ ಒಂದು ಮಾತನ್ನು ಹೇಳುತ್ತಾರೆ. ಆದ್ದರಿಂದ ಯಾವುದಾದರೊಂದು ಹೇಳಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಮ್ಮನ್ನು ಅಲ್ಲಿಯೇ ಕೂರಿಸಿ, ಆಗ ಯಾವಾಗಲೂ ಅದನ್ನೇ ಹೇಳುತ್ತೇವೆ.

(ಗೊಂದಲ)

ಶ್ರೀ ಬಿ.ಎಸ್. ಹೊರಟ : ಯಾವುದಾದರೊಂದು ಹೇಳಿ. ತಾವು ಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ತಾವು ಏನು ಹೇಳಿದ್ದೀರಿ ಅದನ್ನೇ ಈಗಲೂ ಹೇಳಿ.

(ಗೊಂದಲ)

ಶ್ರೀ ಎನ್. ಧರ್ಮಸಿಂಗ್ : ಬಿಐಎಂಸಿ ಪ್ರಾಜೆಕ್ಟ್ ಬಗ್ಗೆ ತಾವು ಸದನದಲ್ಲಿ ಏನು ಹೇಳಿದ್ದಿರೆಂಬುದರ ಬಗ್ಗೆ ನನ್ನ ಹತ್ತಿರ ಹೇಳಿಕೆ ಇದೆ. ಅದು ಇರಲಿ.

ಅಧ್ಯಕ್ಷರು : ತಾವು ಅಂತಿಮವಾಗಿ ಹೇಳಿ. Let us close.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಾವು ಎಲ್ಲರೂ ವಿರೋಧ ಪಕ್ಷದ ಸಾಲಿನಲ್ಲಿ ಕಾಂಗ್ರೆಸ್, ಸಿಪಿಎಂ, ಇಂಡಿಪೆಂಡೆನ್ಸ್ ಪಕ್ಷದವರೆಲ್ಲರೂ ಇದ್ದೇವೆ. ಮೊಟ್ಟಮೊದನೆಯದಾಗಿ ಈ ವಿಷಯದಲ್ಲಿ ಒಂದೇ ಧಾಟಿಯಲ್ಲಿ ಎಲ್ಲರೂ ಕೂಡ ಒಮ್ಮತಕ್ಕೆ ಬಂದಿದ್ದೇವೆ ಸಿಬಿಐ ಎನ್‌ಕ್ವಯರಿ ಆಗಬೇಕು. ಇವತ್ತು ಜಾಲಪ್ಪನವರ ಕೇಸ್‌ನಲ್ಲಿ ಏನಾಯಿತು? ವೀರಪ್ಪನ್ ಕೇಸ್‌ನಲ್ಲಿ ಏನಾಯಿತು ಎನ್ನುವಂಥದ್ದಲ್ಲ. ಇದು 11 ವರ್ಷಗಳ ಕಾಲವೆಂದು ನೀವೇ ಹೇಳಿದ್ದೀರಿ. ಬಿಎಂಐಸಿ ಪ್ರಾಜೆಕ್ಟ್ ಇದೊಂದು ಕರ್ಮಕಾಂಡ ಇದೆ ಏನೇನೊ ಇದೆ ಎನ್ನುತಕ್ಕಂಥ ರೀತಿಯಲ್ಲಿ ನೀವೇ ಹೇಳಿದ್ದೀರಿ ನಾವು ಹೇಳುವುದಕ್ಕೆ ಹೋಗಿಲ್ಲ. ನೀವು ಹೇಳಿದ ಮೇಲೆ ನಿಮ್ಮಿಂದ ಬಹಳಷ್ಟು ಕೂಡ ನಿರೀಕ್ಷೆ ಇತ್ತು. ಇವತ್ತೂ ಕೂಡ ಈ ಜನತಾದಳ (ಎಸ್) ಕಛೇರಿಯಲ್ಲಿ ಕುಳಿತು ಮಾತನಾಡಿದಂತೆ ಮಾತನಾಡಿದಿರಿ. ನಿಮ್ಮ ಉಪ ಮುಖ್ಯಮಂತ್ರಿಗಳೂ ಕೂಡ ಇಲ್ಲ. ಕ್ಯಾಬಿನೆಟ್ ಡಿಸಿಷನ್ ಇಲ್ಲ, ಸರ್ಕಾರದ ನಿರ್ಣಯವಿಲ್ಲ. ಇವತ್ತು ನೀವು ಏನು ಹೇಳುತ್ತಿದ್ದೀರಿ, ನಾವೂ ಏನೂ ಹೇಳುತ್ತಿದ್ದೇವೆಂದರೆ, ಇದು ಸಿಬಿಐ ಎನ್‌ಕ್ವಯರಿ ಆಗಲೇಬೇಕು, ಆಗಲೇಬೇಕು, ಸಿಬಿಐದಿಂದ ಸಮಗ್ರ ತನಿಖೆಯಾಗುತ್ತದೆ. ಜನರಿಗೆ ಕೂಡ ಇದರಿಂದ ಮಾಹಿತಿ ಸಿಗುತ್ತದೆ. ಅದಕ್ಕಾಗಿ ಸಿಬಿಐ ಎನ್‌ಕ್ವಯರಿ ಆಗಬೇಕೆಂದು ಹೇಳುತ್ತಾ, ನಮ್ಮ ಪಕ್ಷದಿಂದ ನಾವು ಧರಣಿ ಮಾಡುತ್ತೇವೆ. ಸಿಬಿಐ ಎನ್‌ಕ್ವಯರಿ ಆಗಲೇಬೇಕು.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ಸದನ ಬಾವಿಗೆ ಬಂದು ಧರಣಿ ಪ್ರಾರಂಭಿಸಿದರು)

ಶ್ರೀ ವಾಟಾಳ್ ನಾಗರಾಜ್ : ಸಿಬಿಐ ತನಿಖೆಗೆ ಒಪ್ಪಿಸಬೇಕೆಂದು ನಾವು ಸಭಾತ್ಯಾಗ ಮಾಡುತ್ತಿದ್ದೇವೆ. (ವಾಟಾಳ್ ನಾಗರಾಜ್‌ರವರು ಈ ಹಂತದಲ್ಲಿ ಸಭಾತ್ಯಾಗ ಮಾಡಿದರು)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಸಿಬಿಐ ಎನ್‌ಕ್ವಯರಿ ಆಗಬೇಕೆಂದು ನಾನು ಸಭಾತ್ಯಾಗ ಮಾಡುತ್ತೇನೆ.

(ಈ ಹಂತದಲ್ಲಿ ಶ್ರೀರಾಮರೆಡ್ಡಿಯವರು, ವಾಟಾಳ್ ನಾಗರಾಜ್, ಕೆ. ಜಯಪ್ರಕಾಶ್ ಹೆಗ್ಡೆ ಎನ್ ರಾಜೇಂದ್ರನ್ ಮತ್ತು ಶ್ರೀ ಜೆ.ಸಿ. ಮಾಧುಸ್ವಾಮಿಯವರ ನೇತೃತ್ವದ ಜನತಾದಳ (ಯು) ಪಕ್ಷದವರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು : ಸದನದ ಬಾವಿಗೆ ಏನು ಬಂದಿದ್ದೀರಿ ಕಾಂಗ್ರೆಸ್ ಪಕ್ಷದ ಸದಸ್ಯರು ಈ ರೀತಿ ನೀವು ಕಲಾಪಕ್ಕೆ ಅಡ್ಡಿಮಾಡತಕ್ಕಂಥದ್ದು ಸರಿಯಲ್ಲ. ನಿಮ್ಮ ಅಭಿಪ್ರಾಯಗಳನ್ನು ಹೇಳಿದ್ದೀರಿ. ನಿಯಮ 69ರ ಕೆಳಗಡೆ ಚರ್ಚೆಯಾಗಿದೆ. ನಿಮ್ಮ ಅಭಿಪ್ರಾಯವನ್ನು ಹೀಗೇ ಮಾಡಬೇಕೆಂದು ಏನೂ ಇಲ್ಲ. ಸದನ ನಡೆಯುವುದಕ್ಕೆ ಅವಕಾಶ ಮಾಡಿಕೊಡಿ.

(ಗೊಂದಲ)

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರು ದಯಮಾಡಿ ತಮ್ಮ ಸ್ಥಾನಕ್ಕೆ ಹೋಗಿ. ಇವತ್ತು ಇನ್ನೂ ಕಲಾಪ ನಡೆಸುವುದಿದೆ. ಕ್ವೊಶ್ಚನ್ ಅವರ್ ಆಗುವುದಿದೆ. ಕಲಾಪಕ್ಕೆ ಅಡ್ಡಿ ಮಾಡುವುದು ಸರಿಯಲ್ಲ. ಈಗ ಸದನವನ್ನು ನಾಳೆ ಬೆಳಿಗ್ಗೆ 10.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಸಾಯಂಕಾಲ 6 ಗಂಟೆ 23 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ: 7-7-2006ರಂದು ಬೆಳಿಗ್ಗೆ: 10.00 ಗಂಟೆಗೆ ಸಮಾವೇಶಗೊಳ್ಳಲು ನಿಃಶ್ಚಯಿಸಿತು)